ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೦೯-೧೦ನೇ ಸಾಲಿನ ಎಂ.ಫಿಲ್ ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

ಕನ್ನಡ ರಂಗಭೂಮಿ ಮತ್ತು ಗುಬ್ಬಿ ವೀರಣ್ಣ

ನಿಬಂಧಕಾರರು

ವೀಣಾ ಸಿ.ಎಸ್.

ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ)
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಕಾಳೇಗೌಡ ನಾಗವಾರ

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೦೯-೧೦

ಕನ್ನಡ ವಿಶ್ವವಿದ್ಯಾಲಯ

ಹಂಪಿ

೨೦೦೯–೧೦ನೇ ಸಾಲಿನ ಎಂ.ಫಿಲ್ ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

ಕನ್ನಡ ರಂಗಭೂಮಿ ಮತ್ತು ಗುಬ್ಬಿ ವೀರಣ್ಣ

ನಿಬಂಧಕಾರರು

ವೀಣಾ ಸಿ.ಎನ್.

ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ)

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಕಾಳೇಗೌಡ ನಾಗವಾರ

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು

ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

೨೦೦೯–೧೦

ದೃಢೀಕರಣ ಪತ್ರ

೨೦೦೯-೧೦ನೇ ಸಾಲಿನಲ್ಲಿ ಕ್ರಮಸಂಖ್ಯೆ **KVTMKS-00426**ರ ಹಂಪಿ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಯ ವಿದ್ಯಾರ್ಥಿನಿಯಾದ ಸಿ.ಎನ್.ವೀಣಾ ಅವರು ನನ್ನ ಮಾರ್ಗದರ್ಶನದಲ್ಲಿ **"ಕನ್ನಡ ರಂಗಭೂಮಿ ಮತ್ತು ಗುಬ್ಬಿ ವೀರಣ್ಣ"** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

ಮೈಸೂರು
೧೯-೦೮-೨೦೧೦

(ಡಾ. ಕಾಳೇಗೌಡ ನಾಗವಾರ)
ಮಾರ್ಗದರ್ಶಕರು
ವಿಶ್ರಾಂತ ಕನ್ನಡ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಅಭ್ಯರ್ಥಿಯ ಘೋಷಣಾ ಪತ್ರ

"ಕನ್ನಡ ರಂಗಭೂಮಿ ಮತ್ತು ಗುಬ್ಬಿ ವೀರಣ್ಣ" ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಕನ್ನಡ ಎಂ.ಫಿಲ್. ಪದವಿಯ ಕ್ರಮಸಂಖ್ಯೆ **KVTMKS-00426**ರ ವಿದ್ಯಾರ್ಥಿನಿಯಾದ ನಾನು ೨೦೦೯-೧೦ನೇ ಸಾಲಿನ ಪರೀಕ್ಷೆಗಾಗಿ ಪ್ರೊ. ಕಾಳೇಗೌಡ ನಾಗವಾರ, ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Veena. C-S.

ಮೈಸೂರು
ದಿನಾಂಕ: ೧೯-೦೮-೨೦೧೦

(ಸಿ.ಎಸ್.ವೀಣಾ)
೨೦೦೯-೧೦ನೇ ಸಾಲಿನ ಎಂ.ಫಿಲ್ ವಿದ್ಯಾರ್ಥಿ
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ರಂಗಭೂಮಿ ಎಂದರೆ ಲಲಿತ ಕಲೆಗಳ ಸಂಗಮಕ್ಷೇತ್ರ. ಇದು ದೃಶ್ಯಕಾವ್ಯವೆಂದು ಪ್ರಸಿದ್ಧ. ರಂಗಭೂಮಿ ಒಂದು ನಾಡಿನ ಸಾಂಸ್ಕೃತಿಕ ಬದುಕಿನ ಅವಿಭಾಜ್ಯ ಅಂಗ. ಲಲಿತ ಕಲೆಗಳನ್ನು ಮೈಗೂಡಿಸಿಕೊಂಡು ಹೊಂದಿದ ಸಮಷ್ಟಿಕಲೆಯಾದ ರಂಗಭೂಮಿ ರಂಜನೆಯ ಜೊತೆಗೆ ಮಾನವನ ಓರೆಕೋರೆಗಳನ್ನು ತಿದ್ದುವುದರ ಮೂಲಕ ನೀತಿ ನಿರ್ಮಲತೆಗಳ ನೈತಿಕ ಸಂಸ್ಕಾರವನ್ನು ನೀಡುತ್ತಾ ಉನ್ನತ ಜೀವನ ಮೌಲ್ಯಗಳನ್ನು ಉಜ್ವಲಗೊಳಿಸುತ್ತಾ ತನ್ಮೂಲಕ ಉತ್ತಮ ಅಭಿರುಚಿಯನ್ನು ಬೆಳೆಸುತ್ತಾ ಸಾಮಾಜಿಕ ಸ್ವಾಸ್ತ್ಯವನ್ನು ಕಾಪಾಡುತ್ತಾ ಬಂದಿದೆ.

ಜನಪದ ಮತ್ತು ಅಭಿಜಾತ ಎಂಬ ಎರಡು ಕವಲುಗಳಲ್ಲಿ ಸಾಗಿಬಂದ ಕನ್ನಡ ರಂಗಭೂಮಿಗೆ ಪ್ರಾಚೀನ ಪರಂಪರೆಯಿದೆ. ಅಭಿಜಾತ ರಂಗಭೂಮಿಗೆ ಸಂಸ್ಕೃತ ರಂಗಭೂಮಿ ಪ್ರೇರಕವಾದರೆ, ಜನಪದ ರಂಗಭೂಮಿ ದೇಶೀ ಪರಂಪರೆಯಲ್ಲಿಯೇ ಮೈದಾಳಿ ನಮ್ಮ ನೆಲದ ಸಾರಸ್ವತವನ್ನು ಹೀರಿ ಬೆಳೆದದ್ದು ಇವೆರಡರ ಬೆಂಕಿಯಿಂದ ಅನಾವರಣಗೊಂಡದ್ದು ವೃತ್ತಿ ರಂಗಭೂಮಿ.

ಈ ವೃತ್ತಿ ರಂಗಭೂಮಿಯು ಒಂದು ಪ್ರತ್ಯೇಕ ವೈಶಿಷ್ಟ್ಯ ಕಲಾಮೌಲ್ಯ. ಜೀವನ ಮೌಲ್ಯಗಳನ್ನು ಸಮಾಜ ಶ್ರದ್ಧೆಯಿಂದ ಕಾಪಾಡಿಕೊಂಡು ನಿಜವಾದ ರಂಗಭೂಮಿಯ ನಿರಂತರ ಪರಂಪರೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದ ಕೀರ್ತಿ ಇದರದಾಗಿದೆ.

ಪ್ರಜಾತಂತ್ರ ಹಾಗೂ ರಂಗಭೂಮಿ ಒಂದಕ್ಕೊಂದು ಪರ್ಯಾಯವೆನ್ನುವಷ್ಟು ಮಹತ್ವವನ್ನು ಪಡೆದಿದೆ. ಈ ಮಾಧ್ಯಮ ಎಂದು ಶ್ರೀಮಂತರ ಕೈಗೊಂಬೆಯಾಗಿರು–ವುದಿಲ್ಲ, ಸಂಪೂರ್ಣವಾಗಿ ಇದು ನಮ್ಮ ಜನಸಾಮಾನ್ಯರ ಮಾಧ್ಯಮ. ಇಲ್ಲಿ ಕೆಲಸಮಾಡುವವರು ಅಂದರೆ ರಂಗಕರ್ಮಿಗಳು, ಅಲ್ಪಸಂಖ್ಯಾತರು ತಮ್ಮ ಸ್ವಂತಿಕೆಯನ್ನು ಉಳಿಸಿಕೊಳ್ಳುವುದಕ್ಕೆ ನಾಡು, ನುಡಿ, ನಡೆ ಅಂದರೆ ಪ್ರದೇಶ ಭಾಷೆ, ಉಪಭಾಷೆಗಳನ್ನು ತಮ್ಮ ಐಡೆಂಟಿಟಿಯಾಗಿ ರಕ್ಷಿಸಿಕೊಳ್ಳುವುದಕ್ಕೆ ರಂಗಭೂಮಿ ಬಿಟ್ಟರೆ ಬೇರೆ ಮಾಧ್ಯಮವಿಲ್ಲ.

[illegible]

ಇಂತಹ ರಂಗಭೂಮಿ ಆಧುನಿಕವಾಗಿ ಭಾರತದಲ್ಲಿ ಪಾಶ್ಚಾತ್ಯರ ಪ್ರಭಾವದಿಂದ ಪ್ರಾರಂಭವಾಗಿ ಇಡೀ ಭಾರತಾದ್ಯಂತ ಈ ಪ್ರಭಾವವು ದಕ್ಷಿಣ ಭಾರತದ ಕಡೆಯೂ ಹರಡಿತು, ಕರ್ನಾಟಕವನ್ನು ಪ್ರವೇಶಿಸಿತು. ನಾಡು ನುಡಿಯ ಅಭಿಮಾನದಿಂದ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದಲ್ಲಿ ತಲೆಯೆತ್ತಿದ ಈ ಹೊಸ ರಂಗಭೂಮಿ ಮುಂದೆ ಹಲವಾರು ಮಹಾನ್ ಕಲಾವಿದರಿಂದ ಭಾರತದಾದ್ಯಂತ ರಂಗಭೂಮಿಯ ಅಭಿವೃದ್ಧಿಗೆ ಕಾರಣವಾಯಿತು.

ಈ ಕರ್ನಾಟಕ ರಂಗಭೂಮಿಯ ಇತಿಹಾಸದಲ್ಲಿ ಉತ್ತರ ಕರ್ನಾಟಕದ ಪಾತ್ರ ಎಷ್ಟು ಮುಖ್ಯವಾಗಿತ್ತೋ ಅಷ್ಟೇ ಮುಖ್ಯ ಪಾತ್ರ ದಕ್ಷಿಣ ಕರ್ನಾಟಕದ್ದು. ಇಂತಹ ದಕ್ಷಿಣ ಕರ್ನಾಟಕದಲ್ಲಿ ಕನ್ನಡ ರಂಗದ ಶ್ರೇಷ್ಠ ದರ್ಜೆಗೆ ಸೇರಿದ ನಟರು ಕನ್ನಡ ರಂಗವನ್ನು ಭದ್ರ ಬುನಾದಿಯ ಮೇಲೆ ನಿಲ್ಲಿಸಿದ ಕೆಲವು ವ್ಯಕ್ತಿಗಳು ಕಾಣಿಸಿಕೊಂಡರು ಅಂತವರ ಸಾಲಿನಲ್ಲಿ ಪ್ರಮುಖವಾಗಿ ಕಾಣುವವರು ನಮ್ಮ ನಾಟಕ ರತ್ನ 'ಡಾ.ಗುಬ್ಬಿವೀರಣ್ಣವನರು' ಇಂತಹವರ ಇಡೀ ಜೀವನವನ್ನು ಕುರಿತು ಅಧ್ಯಯನ ಮಾಡುವ ಉದ್ದೇಶ ನನ್ನದು.

'ಕನ್ನಡ ರಂಗಭೂಮಿ ಮತ್ತು ಗುಬ್ಬಿವೀರಣ್ಣ' ಎಂಬ ಈ ಸಂಪ್ರಬಂಧವನ್ನು ಅಧ್ಯಯನ ಮಾಡಲು ಮತ್ತೊಂದು ಉದ್ದೇಶವೆಂದರೆ ಗುಬ್ಬಿಯು ತುಮಕೂರು ಜಿಲ್ಲೆಯಲ್ಲಿ ಒಂದು ತಾಲ್ಲೂಕು ಆಗಿದೆ. ಗುಬ್ಬಿ ಈ ಜಿಲ್ಲೆಯಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಪೂರ್ವದಿಂದಲೂ ಅದು ಸಾಹಿತ್ಯ, ಕಲೆ, ಸಂಸ್ಕೃತಿಯ ಪ್ರತೀಕ ಎನಿಸಿದ್ದು, ಆಕರ್ಷಣೀಯ ಕೇಂದ್ರವಾಗಿದೆ. ಇಂತಹ ನೆಲದಲ್ಲಿ ಜನಿಸಿದವರು ವೀರಣ್ಣನವರು ಇಂತಹವರು ಜನಿಸಿದ ನೆಲವು ತನ್ನ ತವರೂರಾಗಿದೆ. ನಾನು ಹುಟ್ಟಿ ಬೆಳೆದ ನನ್ನ ಊರಿನ ಒಬ್ಬ ಕಲಾವಿದನ ಸಂಪೂರ್ಣ ಚರಿತ್ರೆಯನ್ನು ತಿಳಿಯಬೇಕೆಂಬ ಕುತೂಹಲ ನನಗೆ.

ವೀರಣ್ಣನವರು ಗುಬ್ಬಿಯ ಕೀರ್ತಿಯೂ ಕರ್ನಾಟಕದಾದ್ಯಂತ ಅಲ್ಲದೆ ಇಡೀ ದಕ್ಷಿಣ ಭಾರತದಾದ್ಯಂತ ಹರಡಲು ಕಾರಣರಾಗಿದ್ದಾರೆ. ಮತ್ತು ರಂಗಭೂಮಿಯ ಇತಿಹಾಸದಲ್ಲಿ ಗುಬ್ಬಿ ಪಟ್ಟಣಕ್ಕೆ ತನ್ನದೇ ಆದ ಪ್ರತ್ಯೇಕ ಸ್ಥಾನವನ್ನು ಕೊಡಿಸಿದ್ದಾರೆ. ಇದರಿಂದಾಗಿ ವೀರಣ್ಣನವರ ಬಗ್ಗೆ ಅಪಾರ ಗೌರವ ಮತ್ತು ವಿಶ್ವಾಸ. ಮುಖ್ಯವಾಗಿ ವೀರಣ್ಣನವರು ಬಹುಮುಖ ಪ್ರತಿಭೆಯನ್ನು ಉಳ್ಳವರಾಗಿದ್ದು, ಯಾವುದೇ ಜಾತಿ, ಬೇಧ, ಮತ, ವರ್ಗಗಳ ತಾರತಮ್ಯವಿಲ್ಲದೇ ಎಲ್ಲಾ ಜನರಿಗೂ ಪ್ರಾಶಸ್ತ್ಯವಿತ್ತು ತಮ್ಮ

ಪ್ರತಿಭೆಯನ್ನು ಪ್ರದರ್ಶಿಸಿದರು. ಇದೂ ಕೂಡ ಅವರ ಯಶಸ್ಸಿಗೆ ಕಾರಣವಾಯಿತು. ಆದ್ದರಿಂದ ಇವರ ಬಗೆಗಿನ ಅಧ್ಯಯನ ನನಗೆ ಆಸಕ್ತಿಯನ್ನುಂಟುಮಾಡಿದೆ.

ಕನ್ನಡ ರಂಗಭೂಮಿಯ ಇತಿಹಾಸ, ಭಾರತದಲ್ಲಿ ಅದರಲ್ಲಿಯೂ ಕರ್ನಾಟಕದಲ್ಲಿ ಆಧುನಿಕ ರಂಗಭೂಮಿ ಹೇಗೆ ಹುಟ್ಟಿತು ಅದು ದಕ್ಷಿಣ ಕರ್ನಾಟಕದಲ್ಲಿ ಹುಟ್ಟಿ ತನ್ನ ಕಾರ್ಯತತ್ಪರತೆಯನ್ನು ಮುಂದುವರಿಸಿಕೊಂಡು ಹೋದ ಬಗೆ, ಅಲ್ಲಿನ ಪ್ರಮುಖ ನಾಟಕ ಕಂಪನಿಯಾದ ಗುಬ್ಬಿ ಕಂಪನಿಯ ಇತಿಹಾಸ, ಅಲ್ಲಿಗೆ ವೀರಣ್ಣನವರು ಕಂಪನಿಗೆ ಪ್ರವೇಶಿಸಿದ ಸಂದರ್ಭ, ಅವರ ಜೀವನ ಚರಿತ್ರೆ, ಕನ್ನಡ ರಂಗಭೂಮಿಗೆ ನೀಡಿದ ಕೊಡುಗೆ, ಚಿತ್ರರಂಗಕ್ಕೆ ನೀಡಿದ ಕೊಡುಗೆ, ವೀರಣ್ಣನವರ ಇಡೀ ಕುಟುಂಬ ಹೇಗೆ ಕನ್ನಡ ರಂಗಭೂಮಿಗೆ ತನ್ನ ಸೇವೆಯನ್ನು ಸಲ್ಲಿಸಿದೆ ಎಂಬುದು ಈ ಅಧ್ಯಯನದ ವ್ಯಾಪ್ತಿಯೊಳಗೆ ಬರುತ್ತದೆ.

ಅಧ್ಯಾಯ - ೨

ಕನ್ನಡ ರಂಗಭೂಮಿಯ ಇತಿಹಾಸ

ಕನ್ನಡ ರಂಗಭೂಮಿಯ ಉಗಮ ಎಂದು ಹೇಗೆ ಆಯಿತೆಂಬುದು ಸ್ಪಷ್ಟ-ವಾಗಿಲ್ಲವಾದರೂ ಇದರ ಪರಂಪರೆ ಅತ್ಯಂತ ಪ್ರಾಚೀನವಾದ್ದೆಂಬುದರಲ್ಲಿ ಸಂದೇಹವಿಲ್ಲ. ಇಂದು ದೊರೆತಿರುವ ಕನ್ನಡ ನಾಟಕಗಳಲ್ಲಿ ತುಂಬ ಹಳೆಯದು ಚಿಕ್ಕದೇವರಾಜರ ಆಸ್ಥಾನದಲ್ಲಿದ್ದ ಸಿಂಗರಾರ್ಯ ರಚಿಸಿದ ಮಿತ್ರವಿಂದಾ ಗೋವಿಂದ. ಇದು ಹದಿನೇಳನೆಯ ಶತಮಾನದ ಅಂತ್ಯಭಾಗದಲ್ಲಿ ರಚಿತವಾದ ಕೃತಿ. ಶ್ರೀ ಹರ್ಷನ ರತ್ನಾವಳೀ ನಾಟಕದ ಕನ್ನಡ ರೂಪ.

ಪ್ರಾಚೀನ ನಾಟಕ ಶಾಲೆಗಳು

ಕನ್ನಡ ನಾಡಿನಲ್ಲಿ ಹಿಂದೆ ಅನೇಕ ನಾಟಕ ಶಾಲೆಗಳಿದ್ದುವೆಂದು ತಿಳಿಯಲು ಆಧಾರಗಳಿವೆ. ಮೈಸೂರಿನ ಕಂಠೀರವ ನರಸರಾಜರ (೧೬೩೮-೧೬೫೯) ಅರಮನೆಯಲ್ಲಿ ಮನೋಹರವಾದ ನಾಟಕಶಾಲೆ ಇತ್ತೆಂದು ಆ ರಾಜರ ಚರಿತ್ರೆಯನ್ನು ರಚಿಸಿದ ಗೋವಿಂದ ವೈದ್ಯ ಕವಿ ತನ್ನ ಕಾವ್ಯದಲ್ಲಿ ಹೇಳಿದ್ದಾನೆ. ಕೆಳದಿಯ ವೆಂಕಟಪ್ಪ ನಾಯಕ (೧೫೮೨-೧೬೨೯) ತನ್ನ 'ಇಕ್ಕೇರಿಯರಮನೆಯೊಳ್ ಚಿತ್ರಕರ ರಚನಾಕೌಶಲ್ಯದಿಂ ನಾಟಕಶಾಲೆಯಂ ನಿರ್ಮಿಸಿದನ್' ಎಂದು ಲಿಂಗಣ್ಣ ಕವಿಯ ಕೆಳದಿನೃಪ ವಿಜಯದಲ್ಲಿ ಖಚಿತವಾದ ಮಾತಿದೆ. ಅದಕ್ಕಿಂತ ನೂರು ವರ್ಷಗಳ ಹಿಂದೆ ಕವಿ ರತ್ನಾಕರವರ್ಣಿ ತನ್ನ ಭರತೇಶ ವೈಭವ ಕಾವ್ಯದ ಪೂರ್ವನಾಟಕ ಸಂಧಿ ಉತ್ತರನಾಟಕ ಸಂಧಿಗಳಲ್ಲಿ ಶೃಂಗಾರಮಯವಾದ ನಾಟಕಶಾಲೆಯ ವರ್ಣನೆಯನ್ನು ಕೊಡುತ್ತಾನೆ.

ವಿಜಯನಗರ ಸಾಮ್ರಾಜ್ಯದ ಸಂಪತ್ಸಮೃದ್ಧಿಯ ಕಾಲದಲ್ಲಿಯಂತೂ ಕೃಷ್ಣದೇವರಾಯನ ರಾಜಧಾನಿಯಲ್ಲಿದ್ದ ನಾಟಕಶಾಲೆಯಲ್ಲದೆ ಇಕ್ಕೇರಿ ತಂಜಾವೂರು ಮೊದಲಾದ ಪ್ರಾದೇಶಿಕ ಕೇಂದ್ರಗಳಲ್ಲೂ ರತ್ನಖಚಿತವಾದ ಅಲಂಕಾರಗಳನ್ನು ಹೊಂದಿದ್ದ ನಾಟಕಶಾಲೆಗಳಿದ್ದುವೆಂದು ಬಿ.ಎ.ಸಾಲೆತೊರೆಯವರು ಹೇಳಿದ್ದಾರೆ. ಇದೆಲ್ಲಕ್ಕಿಂತ ಹಿಂದೆ, ಕ್ರಿ.ಶ. ೧೦೪೫ರಲ್ಲಿ ಧಾರವಾಡದ ಸಮೀಪದ ಮುಗುಂದದಲ್ಲಿ (ಇಂದು ಮುಗದ ಎಂಬ ಹಳ್ಳಿ) ನಿಲ್ಲಿಸಿ ಇಂದಿಗೂ ಬಿಸಿಲು ಮಳೆಗಾಳಿಗಳಿಗೆ ಮೈಯೊಡ್ಡಿ ನಿಂತಿರುವ ದೊಡ್ಡದೊಂದು ಶಿಲಾಫಲಕ –

ಶ್ರೀಮನ್ಮಹಾಸಾಮನ್ತಂ ಮಾರ್ತಾಣ್ಡಯ್ಯಂ
ತಮ್ಮ ಮುತ್ತಯ್ಯಂ ಮಾಡಿಸಿದ ಬಸದಿಯು ಪಡಿಸಲಿಸಿ
ನಾಟಕಶಾಲೆಯಂ ಮಾಡಿಸಿ, ತನ್ನ ಕೀರ್ತಿಶಿಳಂಸ್ತಂಭಮಂ
ಅಚಂದ್ರಾರ್ಕತಾರಂಬರಂ ನಿಲಿಸಿದಂ

ಎಂದು ಹನ್ನೊಂದನೆಯ ಶತಮಾನದ ಕನ್ನಡ ನಾಟಕಶಾಲೆಯ ಕತೆಯನ್ನು ಹೇಳುತ್ತಿದೆ.

ನಾಟಕದ ಪ್ರಾಚೀನತೆ

ನಾಟಕ ಎಂಬ ಮಾತು ಕನ್ನಡನಾಡಿನಲ್ಲಿ ತುಂಬ ಹಳೆಯದು. ಗೋವಿಂದ ವೈದ್ಯ, ರತ್ನಾಕರವರ್ಣಿಗಳ ಕೃತಿಗಳಲ್ಲಿ ನಾಟಕ ಎಂಬ ಪದವೂ ನಾಟಕದ ವರ್ಣನೆಯೂ ಕಂಡುಬರುತ್ತವೆ. ಹದಿನೇಳನೆಯ ಶತಮಾನದ ಆದಿಭಾಗದಲ್ಲಿದ್ದ ಭಟ್ಟಾಕಳಂಕ ಕಾವ್ಯ ನಾಟಕಾಲಂಕಾರ ಕಲಾಶಾಸ್ತ್ರ ವಿಷಯಾಣಾಂಚ "ಬಹೂನಾಂ ಗ್ರಂಥಾನಾಂಪಿ ಭಾಷಾಕೃತಾನಾಮುಪಲಭ್ಯಮಾನತ್ವಾತ್" – ಎಂದು ಬರೆದಿದ್ದಾನೆ.

ಕುಮಾರವ್ಯಾಸ ಕವಿ ನಾಟಕ ಎಂಬ ಮಾತನ್ನು ಅನೇಕ ಕಡೆಗಳಲ್ಲಿ ಉಪಯೋಗಿಸಿದ್ದಾನೆ. ಬಸವಪುರಾಣವನ್ನು ರಚಿಸಿದ ಭೀಮಕವಿ, ಶೃಂಗಾರಗೊಂಡು ಒಡವೆಗಳಿಂದ ಅಲಂಕೃತವಾಗಿ ನಾಟಕಕ್ಕಳವಟ್ಟ ರೀತಿಯೊಳೊಪ್ಪಿ ನಡೆತಂದ ಚದುರೆ ಸೋಮಲದೇವಿಯನ್ನು ವರ್ಣಿಸಿದ್ದಾನೆ.

ಮಹಾದೇವೀ, ರೂಪಾದೇವೀ ಎಂಬ ರಾಣಿಯರು ಸೀತೆ–ರಾಮರಾಣಿ ಕೃತಕ ನಾಟಕಮನಾಡಿದ ರೀತಿಯನ್ನು ಪಂಚತಂತ್ರ ಕೃತಿಕಾರ ದುರ್ಗಸಿಂಹ ತಿಳಿಸಿದ್ದಾನೆ. ಹೆಸರಾಂತ ಹೊಯಿಸಳ ದೊರೆ ವೀರಬಲ್ಲಾಳ ಕಲಾವಂತನಾದ ನಟನಾಗಿದ್ದನೆಂದು ಸೊರಬದ ಶಿಲಾಶಾಸನದಲ್ಲಿ (೧೨೦೮) ಹೇಳಿದೆ. ನೀಲಾಂಜನೆ ನಾಟಕವಾಡಿದುದರ ಬಣ್ಣನೆ ಪಂಪನ ಆದಿಪುರಾಣದಲ್ಲಿದೆ. ಪೊನ್ನಕವಿ ತನ್ನ ಶಾಂತಿಪುರಾಣದಲ್ಲಿ ಚಂದ್ರೋದಯವನ್ನು ನಾಟಕಾರಂಭಕ್ಕೆ ಹೋಲಿಸುತ್ತ, ನಕ್ಷತ್ರಗಳು ಸೂತ್ರಧಾರ ಪೂಸಿದ ಪುಷ್ಪಗಳೆಂದೂ ಸರಿದುಹೋಗುತ್ತಿರುವ ಕತ್ತಲೆಯೆ ಮೇಲೇರುತ್ತಿರುವ ತೆರೆಯೆಂದೂ ರಾತ್ರಿಯ ನಾಲ್ಕು ಪ್ರಹಾರಗಳು ನಾಟಕದ ನಾಲ್ಕು ಅಂಕಗಳು ಎಂದು ವರ್ಣಿಸಿದ್ದಾನೆ.

ಹಿಂದಿನ ನಾಟಕಗಳ ಸ್ವರೂಪ

ಅಂದಿನ ಆ ನಾಟಕಗಳ ರೂಪರೇಷೆಗಳೇನು ಎಂಬ ಪ್ರಶ್ನೆಗೆ ನಿಶ್ಚಿತವಾದ ಉತ್ತರವಿನ್ನೂ ದೊರೆತಿಲ್ಲ. ಗೋವಿಂದ ವೈದ್ಯನ ಅಥವಾ ರತ್ನಾಕರವರ್ಣಿ ಬಣ್ಣಿಸಿದ

ನಾಟಕದ ವರ್ಣನೆಯನ್ನು ಗಮನಿಸಿದರೆ ಅದು ನಾಟ್ಯ ಅಥವಾ ಭಾವಪ್ರಧಾನವಾದ ನೃತ್ಯದ ವರ್ಣನೆಯೇನೋ ಎನಿಸುತ್ತದೆ. ರತ್ನಾಕರ ಚಿತ್ರಿಸಿದ ತಾಳ ಹಿಡಿದ ಸೂತ್ರಧಾರನೂ ಬಸವಪುರಾಣದ ನಾಟಕ ಪಂಡಿತನಂತೆ ಇಂದಿನ ಯಕ್ಷಗಾನದ ಭಾಗವತನನ್ನೇ ಹೋಲುತ್ತಾನೆ.

ಕವಿ ಕಾಮದೇವನೂ ನಾಟಕವೆಂದರೆ ಅಭಿನಯಪ್ರಧಾನವಾದ ನೃತ್ಯಕಲೆಯೆಂದು ಸೂಚಿಸುವಂತಿದೆ. ಆದಿಪಂಪ ನೀಲಾಂಜನೆಯ ನೃತ್ಯವನ್ನು ಬಣ್ಣಿಸುವಾಗ ನಾಟಕ ಎಂಬ ಪದವನ್ನು ಪ್ರಯೋಗಿಸುತ್ತಾನೆ. ಕೃತಾನುಕರಣವು ನಾಟಕಮಪ್ಪುದು ಎಂದು ಆತ ಹೇಳಿದರೂ ಆ ಅನುಕರಣದಲ್ಲಿ ಪಾತ್ರಕ್ಕೆ ಆಡುವ ಮಾತಿದೆಯೇ ಎಂಬುದು ಸಪಷ್ಟವಾಗುವುದಿಲ್ಲ. ಈ ಎಲ್ಲದರಿಂದಾಗಿ, ಭರತೇಶವೈಭವ ಕಾವ್ಯದ ಜಲಕನ್ನಿಕಾನಾಟ್ಯ, ದಿಕ್ಕನ್ನಿಕಾನಾಟ್ಯಗಳಂತೆ ಅಭಿನಯಪ್ರಧಾನವಾದ ನೃತ್ಯಗಳೇ ಕನ್ನಡದ ಪ್ರಾಚೀನ ನಾಟಕಗಳಾಗಿದ್ದಿರಬೇಕು ಎನಿಸುತ್ತದೆ.

ಅಭಿನವ ಮಂಗರಾಜನ ಅಭಿನವಾಭಿದಾನ ಎಂಬ ನಿಘಂಟಿನಲ್ಲಿಯೂ ನಾಟಕಕ್ಕೆ ಇದೇ ಅರ್ಥವನ್ನು ತರುವ ವಿವರಣೆ ಇದೆ. ಈ ಎಲ್ಲ ಮಾತುಗಳನ್ನೂ ವಿವೇಚಿಸಿದಾಗ, ಕೆ.ಜಿ.ಕುಂದಣಗಾರರು ಬರೆದಂತೆ, ಕನ್ನಡನಾಡಿನ ಪ್ರಾಚೀನ ನಾಟಕ ಇಂದಿನ ಕಥಕಳಿಯಂತೆ, ಬಾವ ಮತ್ತು ಗೀತ ಪ್ರಧಾನವಾದ, ಆಡುಮಾತಿಲ್ಲದ ಒಂದು ನೃತ್ಯಪ್ರಕಾರವಾಗಿರಬೇಕು ಎನಿಸುತ್ತದೆ. ಅಂದಿನ ರಂಗಭೂಮಿಗೆ ಆಶ್ರಯವಿತ್ತ ರಾಜಾಸ್ಥಾನಗಳಲ್ಲಿ ಸಂಕೇತಪ್ರಧಾನವಾದ ಇಂಥ ಪ್ರಯೋಗಗಳೇ ಹೆಚ್ಚು ಪ್ರಿಯವಾಗಿ, ಆಡುಮಾತಿನ ನಾಟಕಗಳು ಕಡಿಮೆ ಇದ್ದಿರಬೇಕು.

ಇದರ ಜೊತೆಗೆ ಕನ್ನಡ ರಾಯರ ಆಸ್ಥಾನಗಳಲ್ಲಿ ಆಡುಮಾತಿನ ನಾಟಕಗಳನ್ನೂ ಆಡುತ್ತಿದ್ದರು ಎನ್ನುವುದಕ್ಕೆ ಕೆಲವೊಂದು ಆಧಾರಗಳಿವೆ. ಚಿಕ್ಕದೇವರಾಜರ ಆಸ್ಥಾನದಲ್ಲಿ ಮಿತ್ರವಿಂದಾ ಗೋವಿಂದ ಪ್ರದರ್ಶಿತವಾಯಿತು. ಸಂಸ್ಕೃತದಲ್ಲೂ ಆಡುಮಾತಿನ ನಾಟಕಗಳು ಇನ್ನೂ ಹಿಂದಿನ ಕಾಲದಿಂದಲೂ ಆಸ್ಥಾನಗಳಲ್ಲಿ ಪ್ರದರ್ಶಿತವಾಗುತ್ತಿದ್ದವು. ವಿಜಯನಗರದ ಅರಸ ಕೃಷ್ಣದೇವರಾಯ ಸಂಸ್ಕೃತದಲ್ಲಿ ರಚಿಸಿದ ಜಾಂಬವತೀಕಲ್ಯಾಣಂ ಎಂಬ ನಾಟಕವನ್ನು ಚೈತ್ರೋತ್ಸವದಂದು ನೆರೆದ ಮಹಾಪ್ರಜೆಗಳ ಸಮ್ಮುಖದಲ್ಲಿ ಪ್ರದರ್ಶಿಸಲಾಯಿತು.

ಜನಪದ ರಂಗಭೂಮಿ

ಹಿಂದೆ ಹೇಳಿದ್ದು ರಾಜಾಶ್ರಯದಲ್ಲಿದ್ದ ರಂಗಭೂಮಿಯ ನಾಟಕಗಳ ಮಾತು. ಆದರೆ ಜನಪದ ರಂಗಭೂಮಿ ಅದಕ್ಕಿಂತ ಹಳೆಯದು. ಮೆಟ್ಟಿಲುಮೆಟ್ಟಿಲಾಗಿ ಕಾಲಮಾನದಲ್ಲಿ ಹಿಂದೆ ಹಿಂದೆ ಹೋಗಿ ಪರೀಕ್ಷಿಸಿದರೆ ಕನ್ನಡ ನಾಡಿನ ಜನಪದಭೂಮಿ ಸಾವಿರ ವರ್ಷಕ್ಕಿಂತ ಹಿಂದಿನದು ಎಂದು ತಿಳಿಯುತ್ತದೆ. ದಶಾವತಾರದ ಮಾತನ್ನೇ ಎತ್ತಿಕೊಳ್ಳೋಣ. ೧೮೧೨ರಲ್ಲೇ ಧರ್ಮಸ್ಥಳದ ಯಕ್ಷಗಾನ ಮೇಳವೊಂದು ಮೈಸೂರಿನ ಮುಮ್ಮಡಿ ಕೃಷ್ಣರಾಜರ ಆಸ್ಥಾನದಲ್ಲಿ ರಾಜಾಶ್ರಯ ಪಡೆಯಿತು. ಅದಕ್ಕಿಂತ ಹಿಂದೆ ಹದಿನೇಳನೆಯ ಶತಮಾನದ ಉತ್ತರಾರ್ಧದಲ್ಲಿ ಬಿದನೂರಿನ ವೀರಭದ್ರನಾಯಕ ದಶಾವತಾರ ನಾಟಕವೊಂದನ್ನು ಬಿಜಾಪುರದ ಬಾದಷಹನ ಸಮ್ಮುಖದಲ್ಲಿ ಆಡಿ ತೋರಿಸಿ, ರಂಜನೆಗೊಂಡ ಆತನಿಂದ ತನ್ನ ಶತ್ರುಗಳನ್ನು ಓಡಿಸಲು ಸಹಾಯ ಪಡೆದನಂತೆ. ಕನ್ನಡ ಜನಪದ ರಂಗಭೂಮಿಯ ಮೂಲ ಅಂಶಗಳೂ ದೈವಾರಾಧನೆಯಲ್ಲಿಯೇ ಕಂಡುಬರುತ್ತವೆ. ದೈವವನ್ನೋ ದೆವ್ವವನ್ನೋ ತೃಪ್ತಿಪಡಿಸಿ, ಅದರಲ್ಲಿ ತಮ್ಮ ಏಳಿಗೆಯನ್ನು ಕಂಡುಕೊಳ್ಳುತ್ತಿದ್ದ ಹಳ್ಳಿಗರ ಆರಾಧನೆಯಲ್ಲಿ ಆ ದೈವ ಅಥವಾ ದೆವ್ವದ ಅನುಕರಣ ಅನಿವಾರ್ಯವಾಯಿತು. ಇಂಥ ಅನುಕರಣ ಇಂದಿಗೂ ಕನ್ನಡನಾಡಿನ ಕರಾವಳಿಯ ಹಳ್ಳಿಗಳಲ್ಲಿರುವ ಭೂತಸ್ಥಾನಗಳಲ್ಲಿ ಕೋಲ ಮೊದಲಾದ ಉತ್ಸವಗಳಲ್ಲಿ ಕಂಡುಬರುತ್ತದೆ.

ಈ ಅನುಕರಣ ಜನ ನಂಬುವಷ್ಟು ಪ್ರಭಾವಶಾಲಿಯಾಗುವಂತೆ ಮಾಡುವ ಸಲುವಾಗಿ ಬಳಸಿದ ಮುಖ ವರ್ಣಿಕೆ, ವೇಷಭೂಷಣ, ಅಲಂಕಾರ, ಆಯುಧಾದಿಗಳಿಂದ ಹಿಡಿದು, ಮಾತುಗೀತೆ ಕುಣಿತಗಳವರೆಗೆ ಎಲ್ಲವೂ ನಾಟಕದ ಮೂಲ ಅಂಶಗಳೇ. ಕನ್ನಡನಾಡಿನಲ್ಲಿ ನಾಟಕದ ಮೂಲಪ್ರಕಾರವೆನಿಸುವ ವೈದ್ಯರ ಕುಣಿತ ನಾಗನೃತ್ಯಗಳು ಇಂದಿಗೂ ಕರಾವಳಿಯ ಹಳ್ಳಿಗಳಲ್ಲಿ ಆಗಾಗ ನೋಡಸಿಗುತ್ತವೆ.

ದಾಸರ ಆಟ

ರಂಗ ಕಲೆ ಇನ್ನೂ ಪ್ರಬುದ್ಧವಾದಾಗ, ನಾಟಕದ ಚೌಕಟ್ಟಿನಲ್ಲಿಯೇ ಬರುವಂಥ ಜಾನಪದ ರಂಗ ಪ್ರಕಾರಗಳು ಮೈತಳೆದು ಬಂದುವು. ಇವುಗಳಲ್ಲಿ ಉತ್ತರ ಮೈಸೂರಿನ ದಾಸರಾಟ ಮುಖ್ಯವಾದುದು. ಗಂಡು ಮತ್ತು ಹೆಣ್ಣು ದಾಸರ ಮೇಳವನ್ನೊಳಗೊಂಡ ಈ ಮನೋರಂಜನಪ್ರಕಾರದಲ್ಲಿ ರಂಗದ ಮೇಲೆ ನಾಯಕ ಗೊಡ್ಡಿ ಭೀಮಣ್ಣ, ನಾಯಿಕೆ ಚಿಮಣಾ ಮತ್ತು ವಿದೂಷಕ ಒಟ್ಬಾರಿ ಇವರು ಗಂಡು ಹೆಜ್ಜೋ ಹೆಣ್ಣು ಹೆಜ್ಜೋ ಎಂಬ

ವಸ್ತುವಿನ ಮೇಲೆ ಎಲ್ಲೆಲ್ಲಿಂದಲೋ ಎಳೆದು ತಂದ ಆಧಾರಗಳನ್ನೆಲ್ಲ ಉಪಯೋಗಿಸಿ, ನೋಡುವವರ ಕಣ್ಣು ಮನತಣಿಯುವ ರೀತಿಯಲ್ಲಿ ನಾಟಕವಾಡುತ್ತಾರೆ.

ನೃತ್ಯ-ಗೀತ ಸಂಭಾಷಣೆಗಳ ಸರಸ ಸಂಗಮವಾದ ಈ ಆಟವೇ ಮಹಾರಾಷ್ಟ್ರದ ತಮಾಷಾ ಆಗಿ ಪರಿವರ್ತನೆಗೊಂಡು ಅಲ್ಲಿ ಮತ್ತಷ್ಟು ಪರಿಷ್ಕಾರಗೊಂಡಮೇಲೆ ಉತ್ತರ ಕನ್ನಡ ರಂಗಭೂಮಿಗೆ ರಾಧಾನ ಆಟ ಎಂಬ ಹೆಸರಿನಿಂದ ಹಿಂದಿರುಗಿ ಬಂದಿತು. ಈ ಆಟದಲ್ಲಿಯೂ ನಿರ್ದಿಷ್ಟವಾದ ರಂಜಕವಾದ ಕಥಾವಸ್ತು ಇಲ್ಲದಿದ್ದರೂ ಮನಸ್ಸನ್ನು ಆಹ್ಲಾದಗೊಳಿಸುವ ಹಾಡುಗಳಿಂದಾಗಿ, ಕುಣಿತದಿಂದಾಗಿ, ತಡೆಯರಿಯದ ಹಾಸ್ಯದಿಂದಾಗಿ, ಪಾತ್ರಪೋಷಣೆಯಿಂದಾಗಿ ಇಂದೂ ಉತ್ತರ ಮೈಸೂರಿನಲ್ಲಿ ಜನರ ಅನುರಾಗ ಗಳಿಸಿದೆ.

ಬೊಂಬೆಯಾಟ:

ಕನ್ನಡ ಜನಪದ ರಂಗಭೂಮಿಯಲ್ಲಿ ಬಹಳ ಜನಾನುರಾಗ ಗಳಿಸಿದ ಒಂದು ಮನೋರಂಜನ ಪ್ರಕಾರವೆಂದರೆ ಬೊಂಬೆಯಾಟ. ಬೊಂಬೆಗಳಿಗೆ ಪಾತ್ರಗಳಂತೆ ವೇಷತೊಡಿಸಿ ಅಲಂಕಾರಮಾಡಿ, ಅವುಗಳಿಂದ ಮಾನವ ಚಟುವಟಿಕೆಗಳ ಅನುಕರಣಮಾಡಿಸುವ ಕಲೆ ಅದು. ತುಂಬ ಹಿಂದಿನ ಕಾಲದಿಂದ ಈ ಕಲೆ ಅನೇಕ ಪೌರಸ್ತ್ಯ ದೇಶಗಳಲ್ಲಿ ಬೆಳದುಬಂದಿದೆ. ಸೂತ್ರದ ಬೊಂಬೆ ಎಂದು ಕರೆಸಿಕೊಳ್ಳುವ ಈ ಕಲೆ ಕನ್ನಡನಾಡಿನಲ್ಲಿ ಹಿಂದಿನ ಕಾಲದಿಂದ ಇದ್ದಿರಬೇಕು. ಭರತೇಶನ ಆಸ್ಥಾನಕ್ಕೆ ಆಗಮಿಸಿದ ಆಟಗಾರರಲ್ಲಿ ಗೊಂಬೆಯಾಡಿಸಿದವರೂ ಇದ್ದರೆಂದು ರತ್ನಾಕರವರ್ಣಿ ಹಾಡಿದ್ದಾನೆ. ವಿಜಯನಗರ ಕಾಲದ ಶಿಲಾಶಾಸನಗಳಲ್ಲಿಯೂ ಬೊಂಬೆಯಾಟವನ್ನು ಕುರಿತು ಮಾತುಗಳಿವೆ.

ಪಾತ್ರಗಳಂತೆ ವೇಷಭೂಷಣಗಳನ್ನು ಧರಿಸಿದ ಬೊಂಬೆಗಳನ್ನು ಸೂತ್ರ ಹಿಡಿದು ಆಡಿಸುವವನೇ ಸೂತ್ರಧಾರ. ರಾಮಾಯಣ, ಮಹಾಭಾರತ, ಭಾಗವತಗಳ ಅನೇಕ ನಾಟಕೀಯ ಕಥಾವಸ್ತುಗಳನ್ನು ಬೊಂಬೆಯಾಟಕ್ಕೆ ಅಳವಡಿಸಿಕೊಳ್ಳಲಾಗಿದೆ. ಬೊಂಬೆಗಳು ಆಡುವಾಗ, ಕುಣಿಯುವಾಗ, ಯುದ್ಧ ಮಾಡುವಾಗ, ಅಭಿನಯ ಮಾಡುವಾಗ ಹಿಮ್ಮೇಳದ ಗೀತೆ ಮಾತು ಶಬ್ಧ ವಿಶೇಷಗಳ ಸಂಯೋಜನೆಯನ್ನು ಪರದೆಯ ಹಿಂದೆ ನಿಂತು ಬೊಂಬೆಗಳ ಅವಯವಗಳಿಗೆ ಕಟ್ಟಿದ ಸೂತ್ರಧಾರ ಹಾಗೂ ಮೇಳದವರು ಒದಗಿಸುತ್ತಾರೆ.

ಅತ್ಯಂತ ನಿಷ್ಕಲ್ಮಷವಾದ ಸಾಧನೆಯಿಂದ ಕರಗತಮಾಡಿಕೊಂಡಿದ್ದ ಕಲೆ ಅದು. ಹಿಂದಿನ ಕಾಲದ ಜಾತ್ರೆ ಉತ್ಸವಗಳಲ್ಲಿನ ಮುಖ್ಯ ಮನೋರಂಜನ ಪ್ರಕಾರವಾಗಿದ್ದ ಬೊಂಬೆಯಾಟ ಇಂದು ಕನ್ನಡನಾಡಿನಲ್ಲಿ ಇಳಿಮುಖವಾಗುತ್ತಿದೆ.

ತೊಗಲು ಬೊಂಬೆ

ತೊಗಲು ಬೊಂಬೆ ಕನ್ನಡದ ಜನಪದರಂಗದ ಇನ್ನೊಂದು ಪ್ರಮುಖ ಮನೋರಂಜನ ಪ್ರಕಾರ. ಬಲು ತೆಳ್ಳಗಾಗುವಂತೆ ಚರ್ಮವನ್ನು ಹದಮಾಡಿ ಮಾನವ ಮತ್ತು ಪ್ರಾಣಿಪಕ್ಷಿಗಳ ಆಕಾರ ಬರುವಂತೆ ಕತ್ತರಿಸಿ, ಮಡಿಸಿ ಪಟ್ಟೆಗಳನ್ನು ಹೆಣೆದು, ಕತ್ತರಿಯಿಂದಲೇ ಕುಸುರಿ ಕೆಲಸಮಾಡಿ, ಅಂಗ ಉಡುಪು ಕೇಶಗಳನ್ನು ಸೂಚಿಸುವಂತೆ ಬೇರೆ ಬೇರೆ ಬಣ್ಣಗಳನ್ನು ಸೂಕ್ತವಾಗಿ ತುಂಬಿ. ಆ ಆಕೃತಿಯ ಎರಡೂ ತುದಿಗಳನ್ನು ಸೀಳುಬೆತ್ತಕ್ಕೆ ಸಿಕ್ಕಿಸಿದ ಅನಂತರ ಅವನ್ನು ಬಿಳಿಯ ಪರದೆಯ ಹಿಂದೆ ಹಿಡಿದು ಅದರ ಹಿಂದಿನಿಂದ ತೀಕ್ಷ್ಣವಾದ ಬೆಳಕನ್ನು ಬೀಳಿಸುತ್ತಾರೆ. ಪರದೆಯ ಮೇಲೆ ಬಿದ್ದ ಆ ವರ್ಣರಂಜಿತ ಆಕಾರಗಳು ಹತ್ತು ತಲೆಯ ರಾವಣ, ಸಾವಿರ ಹೆಡೆಯ ಆದಿಶೇಷ, ಬೃಹತ್ತಾಗಿ ಬೆಳೆದು ಆಕಾಶವನ್ನು ಅಳೆಯುವ ತ್ರಿವಿಕ್ರಮ, ಇಂತಹವಂತೂ ಬಲು ಪರಿಣಾಮಕಾರಿಯಾದ ಚಿತ್ರಗಳಾಗುತ್ತವೆ. ನಡೆದಾಡುವಂತೆ, ಹಾರುವಂತೆ, ಕುಣಿಯುವಂತೆ, ಕದನವಾಡುವಂತೆ, ಸಂಭಾಷಿಸುವಂತೆ ಕೈಚಳಕದಿಂದ ಆಡಿಸುತ್ತಾರೆ. ಪರದೆಯ ಮುಂದೆ ಕುಳಿತ ಜನಕ್ಕೆ ವರ್ಣರಂಜಿತ ಚಲನಚಿತ್ರವನ್ನೇ ನೋಡಿದ ಅನುಭವವಾಗುತ್ತವೆ.

ಮೂಡಲಪಾಯ

ಕರಾವಳಿಯ ಯಕ್ಷಗಾನವನ್ನು ಸ್ಥೂಲವಾಗಿ ಹೋಲುತ್ತ, ಘಟ್ಟದ ಮೇಲಿನ ಮೈದಾನ ಪ್ರದೇಶಗಳಲ್ಲಿ ಪ್ರಸಿದ್ಧವಾಗಿರುವ ಜನಪದ ರಂಗಭೂಮಿಯ ಮತ್ತೊಂದು ಪ್ರಕಾರ ಮೂಡಲಪಾಯ. ಈ ಆಟಕ್ಕೆ ಅಟ್ಟದಾಟ, ಬಯಲಾಟ, ದೊಡ್ಡಾಟ, ದೊಂಬಿದಾಸರ ಕುಣಿತ, ದಶಾವತಾರದ ಆಟ ಎಂಬ ಹೆಸರುಗಳೂ ಇವೆ.

ಪುರಾಣದ ಪ್ರಸಂಗಗಳೇ ಮೂಡಲಪಾಯದ ಕಥಾವಸ್ತುಗಳು. ರಾತ್ರಿಯಿಂದ ಮುಂಜಾವಿನವರೆಗೆ ನಡೆಯುವ ರಂಗದ ಮೇಲಿನ ಈ ಆಟಗಳಲ್ಲಿ ಹಾಡು ಕುಣಿತ, ಹಾಸ್ಯ, ಮಾತು ಯಥೇಚ್ಛವಾಗಿರುತ್ತವೆ. ಮೂಡಲಪಾಯದಲ್ಲಿ ಪ್ರಧಾನಪಾತ್ರವೆಂದರೆ ಕಥಾನಾಯಕನಲ್ಲ, ಖಳನಾಯಕ ಎಂದರೆ ಇಲ್ಲಿ ರಾಮನಿಗಿಂತ ರಾವಣನಿಗೆ ಹೆಚ್ಚಿನ ಮಹತ್ವ ಕೊಟ್ಟು ಆ ಪಾತ್ರವನ್ನು ತುಂಬ ಎಚ್ಚರಿಕೆಯಿಂದ ಸಿದ್ಧಗೊಳಿಸುತ್ತಾರೆ.

ಖಳನಾಯಕನ ಪಾತ್ರಕ್ಕೆ ಬಣ್ಣದ ವೇಷ ಎಂದೂ ಹೆಸರು. ಬಣ್ಣದ ವೇಷ ಕಟ್ಟುವ ಕಲಾವಿದ, ಚಾವಡಿಯಲ್ಲೋ ತನ್ನ ಹಟ್ಟಿಯಲ್ಲೋ ರೌದ್ರಾಲಂಕಾರ ಮಾಡಿಕೊಂಡು, ವೇಷಭೂಷಣಗಳನ್ನು ಧರಿಸಿ ಬೆಳಕಿನ ಮಧ್ಯ, ಓಲಗ ತಮಟೆ ತುತ್ತೂರಿಗಳನ್ನು ಮುಂದೆ ಮಾಡಿಕೊಂಡು ಮೆರವಣಿಗೆಯಲ್ಲಿ ರಂಗಮಂಚಕ್ಕೆ ಬರುವುದು ವಾಡಿಕೆ.

ಮೂಡಲಪಾಯ ಕನ್ನಡನಾಡಿನ ಬಯಲುಸೀಮೆಯ ಹಳ್ಳಿಗಳಲ್ಲಿನ ಒಂದು ಅದ್ಭುತ ರಮ್ಯ ಮನೋರಂಜನ ಪ್ರಕಾರ. ಇಂದು ಅವರ ಮೇಲೆ ಪಟ್ಟಣಗಳಲ್ಲಿನ ವೃತ್ತಿನಿರತ ರಂಗಭೂಮಿಯ ಪ್ರಭಾವ ಹೆಚ್ಚಾಗಿ ಬಿದ್ದು ಅದರ ಮೂಲರೂಪ ಬದಲಾಗುತ್ತ ನಡೆದಿದ್ದರೂ ಉತ್ತರ ಮೈಸೂರಿನಲ್ಲಿ ಹೆಚ್ಚು ಪ್ರಚಲಿತವಾಗಿರುವ ಕೃಷ್ಣಪಾರಿಜಾತದಂಥ ದೊಡ್ಡಾಟದ ಪ್ರಕಾರಗಳ ಪ್ರಭಾವ ವೈಶಿಷ್ಟ್ಯಗಳು ಇನ್ನೂ ಮಾಸಿ ಹೋಗಿಲ್ಲ.

ಸಣ್ಣಾಟ

ಮೂಡಲಪಾಯದ ಛಾಯೆಯನ್ನೇ ಪಡಿಮೂಡಿಸುತ್ತಿದ್ದರೂ ವೃತ್ತಿನಿರತ ನಾಟಕದ ಪರದೆ, ಪರಿಕರಣಗಳನ್ನು ಬಳಸಿಕೊಂಡು ಇತ್ತೀಚೆಗೆ ಹೆಸರು ಪಡೆಯುತ್ತಿರುವ ಮತ್ತೊಂದು ಜಾನಪದ ಪ್ರಕಾರವೆಂದರೆ ಸಣ್ಣಾಟ. ಮೂಡಲಪಾಯಕ್ಕೂ ವೃತ್ತಿನಿರತ ರಂಗಭೂಮಿಗೂ ಮಧ್ಯದ ಮೈಲುಗಲ್ಲು ಇದು. ಮೂಡಲಪಾಯದಂತೆ ಇಲ್ಲೂ ಭಾಗವತನೂ ಹಿಮ್ಮೇಳದವರೂ ಕಥೆಯ ಸೂತ್ರಗಳನ್ನು ಪದ್ಯರೂಪದಲ್ಲಿ ಹೇಳಿದಮೇಲೆ ಪಾತ್ರಗಳು ಮಾತನಾಡಿ ಅಭಿನಯಿಸುತ್ತವೆ. ಆದರೆ ಇಲ್ಲಿಯ ವೇಷಭೂಷಣ, ರಂಗಸಜ್ಜಿಕೆ, ಪಾತ್ರಾಲಂಕಾರಗಳೆಲ್ಲ ಕಂಪನಿಯ ನಾಟಕಗಳನ್ನೇ ಅನುಕರಿಸಿ ಮಾಡಿದಂಥವು. ಅಲ್ಲದೆ ಇದರ ಕಥಾವಸ್ತು ಪೌರಾಣಿಕವಲ್ಲ. ಸಾದುಸಂತರ ಜೀವನಗಳನ್ನು ಕುರಿತು ಕಟ್ಟಿದ ಆಟಗಳು ಇವು. ನೀತಿ ಪ್ರಸಾರವೇ ಸಣ್ಣಾಟದ ಗುರಿ.

ವೃತ್ತಿ ನಿರತ ರಂಗಭೂಮಿ

ಕಲಿತವರ ಮನೋರಂಜನೆಯ ಸಲುವಾಗಿ, ಸಂಸ್ಕೃತ ನಾಟಕಗಳನ್ನು ಆಧಾರವಾಗಿಟ್ಟುಕೊಂಡಿದ್ದ ಅರಮನೆ ರಂಗಭೂಮಿಗೂ ಕಲಿಯದವರ ಮನೋರಂಜನೆ ಮಾಡುತ್ತಿದ್ದ ಜಾನಪದ ರಂಗಭೂಮಿಗೂ ನಡುವೆ, ಜನಸಾಮಾನ್ಯರ ಎಂದರೆ ಮಧ್ಯಮವರ್ಗದ ಜನತೆಯನ್ನು ರಂಜಿಸುವ ಧ್ಯೇಯದಿಂದ, ಹುಟ್ಟಿದುದೇ ವೃತ್ತಿನಿರತರಂಗಭೂಮಿ. ಭಾರತದಲ್ಲಿ ಇದರ ಬೆಳವಣಿಗೆಯಾಗಿರುವುದು ಕಳೆದ ಸುಮಾರು ನೂರೈವತ್ತು ವರ್ಷಗಳ ಕಾಲದಲ್ಲಿ ಅಷ್ಟೆ. ಪಾಶ್ಚಾತ್ಯ ಸಂಪರ್ಕದಿಂದಾಗಿ

ರಂಗಕಲೆಯ ಬಗ್ಗೆ ಜನರಲ್ಲಿ ಬಂದ ಹೊಸ ಅರಿವು ಭಾರತದ ವೃತ್ತಿ ರಂಗಭೂಮಿಯ ಸ್ಥಾಪನೆಗೆ ಪ್ರಚೋದನೆ ಕೊಟ್ಟಿತು. ದುಡ್ಡಿಗಾಗಿ ದುಡಿಯುವ ಈ ರಂಗಭೂಮಿ ೧೭೭೫–೭೬ರಲ್ಲಿ ಮೊದಲಿಗೆ ಕಲ್ಕತ್ತದಲ್ಲಿ ಪ್ರಾರಂಭವಾಯಿತು. ೧೮೪೨ರ ಹೊತ್ತಿಗೆ ಬೊಂಬಾಯಿಯಲ್ಲಿ ಬಾಡಿಗೆಗೆ ಕೊಡಮಾಡುವ ರಂಗಶಾಲೆಗಳನ್ನು ನಿರ್ಮಿಸಲಾಯಿತು. ಮೂವತ್ತು ವರ್ಷಗಳ ಅನಂತರ ಪಾರ್ಸಿ ಹಾಗೂ ಮರಾಠೀ ನಾಟಕ ಕಂಪನಿಗಳು ಉತ್ತರ ಕರ್ನಾಟಕ ಹಾಗೂ ಮೈಸೂರಿಗೆ ಭೇಟಿಯಿತ್ತು ನಾಟಕಗಳನ್ನು ಪ್ರದರ್ಶಿಸಿದ ಮೇಲೆ ಕನ್ನಡನಾಡಿನಲ್ಲಿ ವೃತ್ತಿನಿರತ ರಂಗಭೂಮಿಯ ಅವತಾರವಾಯಿತೆನ್ನಬೇಕು.

ಕನ್ನಡ ವಿಲಾಸಿ ರಂಗಭೂಮಿ

ನಾಟಕ ಕಲೆಯನ್ನು ಕಸಬಿಗಾಗಿ ಅಥವಾ ಸಂಪಾದನೆಗಾಗಿ ಕಲಿಯದೆ ಆತ್ಮವಿನೋದಕ್ಕಾಗಿ ಅಭ್ಯಾಸಮಾಡಿ ಅಭಿನಯಿಸುವವರ ವಿಲಾಸಿ ರಂಗಭೂಮಿ ಅಥವಾ ಹವ್ಯಾಸಿ ರಂಗಭೂಮಿ ಕನ್ನಡದಲ್ಲಿ ಈ ಕಲೆಯ ಬೆಳವಣಿಗೆಗೆ ತಕ್ಕಮಟ್ಟಿಗೆ ಕಾರಣವಾಗಿದೆ. ಕನ್ನಡ ರಂಗಭೂಮಿಯ ಬೆಳವಣಿಗೆಯಲ್ಲಿ ಒಂದು ಕಾಲದಲ್ಲಿ ವೃತ್ತಿನಿರತರ ಕಂಪನಿಗಳು ಪ್ರಮುಖಪಾತ್ರವಹಿಸಿ ಜನತೆಯಲ್ಲಿ ಅಭಿಮಾನ ಮೂಡಿಸಿದ್ದವು.

ಸುಮಾರು ೧೯೩೦ರ ದಶಕದಲ್ಲಿ ವೃತ್ತಿ ರಂಗಭೂಮಿಯ ಇಳಿಮುಖದ ಸೂಚನೆಗಳು ಕಾಣತೊಡಗಿದವು. ಬದಲಾಗುತ್ತಿದ್ದ ಸಮಾಜಕ್ಕೆ ಕಂಪನಿ ನಾಟಕಗಳು ರುಚಿಸದೇ ಹೋದವು. ಆ ನಾಟಕಗಳ ವಸ್ತು ಮತ್ತು ಶೈಲಿ ಅವುಗಳಿಗೆ ವ್ಯಯವಾಗುತ್ತಿದ್ದ ಕಾಲ, ಚಲನಚಿತ್ರಗಳ ಪ್ರವೇಶ ಮೊದಲಾದವು ಕಂಪನಿ ನಾಟಕಗಳು ರುಚಿಸದೆ ಇದ್ದುದಕ್ಕೆ ಕಾರಣಗಳು. ಇದೇ ಸಮಯಕ್ಕೆ ಸರಿಯಾಗಿ ಕಾಲೇಜುಗಳಲ್ಲಿ ಇಂಗ್ಲಿಷ್ ನಾಟಕಗಳು ಪ್ರಯೋಗಿಸಲ್ಪಡುತ್ತಿದ್ದವು. ವಿದ್ಯಾವಂತ ಜನಕ್ಕೆ ತಾವೂ ಕನ್ನಡದಲ್ಲಿ ನಾಟಕಗಳನ್ನು ಪ್ರಯೋಗಿಸಬೇಕೆಂಬ ಅಭಿಲಾಷೆ ಉಂಟಾಯಿತು. ಕಾಲೇಜು ದಿನಾಚರಣೆ ಇತ್ಯಾದಿಗಳಲ್ಲಿ ನಾಟಕ ಪ್ರಯೋಗ ಅನಿವಾರ್ಯವೆನಿಸಿತ್ತು. ಇದಕ್ಕಾಗಿ ಆಡಲು ಹೊಸ ನಾಟಕಗಳು ಬೇಕಾದವು. ಈ ನಾಟಕಗಳ ಬರವಣಿಗೆ ಪ್ರಧಾನವಾಗಿ ಗದ್ಯ, ಪೌರಾಣಿಕ ಐತಿಹಾಸಿಕ ನಾಟಕಗಳಿಗೆ ಬೇಕಾಗುವಂತೆ ಹೆಚ್ಚು ಪಾಲು ನಾಟಕಗಳಿಗೆ ಉಡಿಗೆತೊಡಿಗೆಗಳಾಗಲಿ, ರಂಗಸಜ್ಜಿಕೆಯಾಗಲಿ, ದೀಪಾಲಂಕಾರವಾಗಲಿ ಬೇಕಿರಲಿಲ್ಲ. ಇದರಿಂದಾಗಿ ಹಲವು ನಾಟಕಗಳು ಕನ್ನಡದಲ್ಲಿ ಬಂದವು.

ಈ ರೀತಿಯಾದ ಬೆಳವಣಿಗೆ ಕಾಲೇಜುಗಳಿಗೇ ಸೀಮಿತವಾಗಿರಲಿಲ್ಲ. ಬೇರೆ ಬೇರೆ ರೀತಿಯ ನಾಗರಿಕ ಸಂಘಸಂಸ್ಥೆಗಳೂ ಈ ದಿಸೆಯಲ್ಲಿ ಕೆಲಸ ಮಾಡಲು ಪ್ರಾರಂಭಿಸಿದ್ದವು. ಕನ್ನಡ ನಾಡಿನ ವಿವಿಧ ಭಾಗಗಳಲ್ಲಿ ಒಂದು ಕಾಲಕ್ಕೆ ವೃತ್ತಿನಿರತ ನಾಟಕ ಕಂಪನಿಗಳು ಹುಟ್ಟಿಕೊಂಡಂತೆ ವಿಲಾಸಿ ತಂಡಗಳು ಹುಟ್ಟಿಕೊಂಡದ್ದು ಆಗ.

ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಪ್ರಾರಂಭವಾದ ಭರತ ಕಲೋತ್ತೇಜಕ ಸಂಗೀತ ಸಭಾ ಮೊದಲ ವಿಲಾಸಿ ತಂಡವೆಂದು ಹೇಳಬಹುದು. ಇದು ಹೆಚ್ಚು ಕಾಲ ಬಾಳದೆ ಹೋದರೂ ಉತ್ತರ ಕರ್ನಾಟಕದಲ್ಲಿ ಅನೇಕ ವಿಲಾಸಿ ತಂಡಗಳು ಹುಟ್ಟಿಕೊಳ್ಳಲು ಕಾರಣವಾಯಿತು.

ಬಾಗಲಕೋಟೆಯ ವಾಸುದೇವ ವಿನೋದಿನೀ ಸಭಾವನ್ನು ಪ್ರಮುಖ ವಿಲಾಸೀ ತಂಡಗಳ ಸಾಲಿನಲ್ಲಿ ಹೆಸರಿಸುವುದು ಅವಶ್ಯಕ. ಈ ವಿಲಾಸಿ ತಂಡ ಪ್ರಮುಖವಾಗಿ ಮೊದಲಿಗೆ ಕೆರೂರು ವಾಸುದೇವಾಚಾರ್ಯರ, ಅನಂತರ ಶ್ರೀರಂಗರ ನಾಟಕಗಳನ್ನೇ ಪ್ರದರ್ಶಿಸಿತು. ಈ ತಂಡ ಕರ್ನಾಟಕದ ವಿವಿಧ ಭಾಗಗಳಲ್ಲಿ ನಾಟಕಗಳ ಪ್ರದರ್ಶನವನ್ನು ಏರ್ಪಡಿಸುತ್ತಿತ್ತು ಎಂದು ತಿಳಿದುಬರುತ್ತದೆ. ಕನ್ನಡ ನಾಟ್ಯವಿಲಾಸಿ ಸಂಘ ಧಾರವಾಡದಲ್ಲಿ ಶ್ರೀರಂಗರ ನೇತೃತ್ವದಲ್ಲಿ ಆರಂಭವಾಯಿತು. ಶ್ರೀರಂಗರೇ ಈ ತಂಡಕ್ಕೆ ನಾಟಕಗಳನ್ನು ಬರೆದರು. ಭಾರತದ ವಿವಿಧ ಭಾಗಗಳಲ್ಲಿ ಆಡಿಸಿದರು. ಧಾರವಾಡದ ಕಲೋಪಾಸಕ ಮಂಡಳಿಯೂ ಧಾರವಾಡದ ವಿಲಾಸಿ ತಂಡಗಳಲ್ಲಿ ಮುಖ್ಯವಾದದ್ದು. ಈ ತಂಡ ದ.ರಾ.ಬೇಂದ್ರೆಯವರ ಎಲ್.ಜಿ.ಬೇಂದ್ರೆಯವರ ಮತ್ತು ಹುಯಿಲಗೋಳ ನಾರಾಯಣರಾಯರ ನಾಟಕಗಳನ್ನು ಅಭ್ಯಾಸಮಾಡಿ ಉತ್ತರ ಕರ್ನಾಟಕದ ಪ್ರಮುಖ ಊರುಗಳಲ್ಲಿ, ಮಹಾರಾಷ್ಟ್ರದ ವಿವಿಧ ಭಾಗಗಳಲ್ಲಿ ಪ್ರದರ್ಶಿಸಿತ್ತು.

ಬೆಂಗಳೂರಿನ ಅಮೆಚ್ಯೂರ್ ಡ್ರಮಾಟಿಕ್ ಅಸೋಸಿಯೇಷನ್ (ಎ.ಡಿ.ಎ) ಬಹಳ ಹಳೆಯ ಹಾಗೂ ಬಹುಮುಖ್ಯ ವಿಲಾಸಿತಂಡ. ಆಧುನಿಕ ಕನ್ನಟ ನಾಟಕಗಳ ಜನಕ ಕೈಲಾಸಂ ಅವರ ಮೊದಲ ನಾಟಕವಾದ ಟೊಳ್ಳುಗಟ್ಟಿಯ ಜನನಕ್ಕೆ ಎ.ಡಿ.ಎ. ಕಾರಣ.

ನಾಟಕ ರಂಗದಲ್ಲಿ ಕ್ರಾಂತಿಯನ್ನುಂಟು ಮಾಡಿದ ಇನ್ನೊಂದು ಹೆಸರು ಶ್ರೀರಂಗ. ಶ್ರೀರಂಗರ ಹೊಸ ರೀತಿಯ ನಾಟಕಗಳು ಬೆಂಗಳೂರಿನ ರಂಗಭೂಮಿಯ ಮೇಲೆ ಆಗಾಗ ಕಾಣಿಸಿಕೊಳ್ಳುತ್ತಿದ್ದವು. ಹೊಸ ಹೊಸ ತಂತ್ರ ಹಾಗೂ ಹೊಸ ಹೊಸ

ಪ್ರಯೋಗಗಳನ್ನು ಮಾಡುವುದರಲ್ಲಿ ಇವರು ಎತ್ತಿದ ಕೈ. ಉತ್ತಮ ನಟರೂ ನಾಟಕಕಾರರೂ ಆದ ಪರ್ವತವಾಣಿ ಮತ್ತು ಎಚ್.ಕೆ.ರಂಗನಾಥ್ ಅವರೂ ಬೆಂಗಳೂರಿನ ವಿಲಾಸಿ ರಂಗಭೂಮಿಯ ಮೇಲೆ ಆಗಾಗ್ಗೆ ಕಾಣಿಸಿಕೊಳ್ಳುವುದೇ ಅಲ್ಲದೆ ಈ ದಿಸೆಯಲ್ಲಿ ಕೆಲಸ ಮಾಡುತ್ತಿದ್ದವರಿಗೆ ಮಾರ್ಗದರ್ಶಕರಾಗಿದ್ದರು.

ದಕ್ಷಿಣ ಕನ್ನಡದಲ್ಲಿ ಹವ್ಯಾಸಿ ರಂಗಭೂಮಿಗಾಗಿ ಶಿವರಾಮ ಕಾರಂತರು ಅನೇಕ ಪ್ರಯೋಗಗಳನ್ನು ಮಾಡಿದ್ದಾರೆ. ಕನ್ನಡ ನಾಡಿನ ಮುಖ್ಯನಗರಗಳಾದ ಬೆಂಗಳೂರು ಮೈಸೂರುಗಳನ್ನು ಬಿಟ್ಟು ಕನ್ನಡ ನಾಡಿನ ಉಳಿದ ಭಾಗಗಳಲ್ಲೂ ವಿಲಾಸಿ ತಂಡಗಳು ಕೆಲಸ ಮಾಡಿಕೊಂಡು ಬರುತ್ತಿದ್ದವು. ಹೆಗ್ಗೋಡಿನ ಶ್ರೀ ನೀಲಕಂಠೇಶ್ವರ ನಾಟ್ಯ ಸೇವಾ ಸಂಘ, ಸಾಗರದ ಎನ್.ಆರ್.ಮಾಸೂರ್ ಮತ್ತು ಮಿತ್ರರು, ಧಾರವಾಡದ ಎನ್.ವಿ.ಜಗನ್ನಾಥರಾವ್ ಮತ್ತು ಮಿತ್ರರು ಮೊದಲಾದವರನ್ನು ಇಲ್ಲಿ ಹೆಸರಿಸಬಹುದು.

ದೇಶದ ಪ್ರಮುಖ ವಿಲಾಸಿ ತಂಡಗಳಿಂದ ಪ್ರಯೋಗಗಳನ್ನು ಏರ್ಪಡಿಸುವುದರ ಮೂಲಕ ಇದು ಹವ್ಯಾಸಿ ರಂಗಭೂಮಿಯನ್ನು ಜೀವಂತವಾಗಿಟ್ಟಿದೆ ಎನ್ನಬಹುದು. ನಾಟಕ ಕೇವಲ ಹವ್ಯಾಸವಷ್ಟೇ ಅಲ್ಲ. ಅದೊಂದು ಶಾಸ್ತ್ರ, ಅದರ ಅಭ್ಯಾಸ ಹಾಗೂ ಪ್ರಯೋಗ ವೈಜ್ಞಾನಿಕ ಎಂಬುದನ್ನು ಮೈಸೂರು ವಿಶ್ವವಿದ್ಯಾನಿಲಯವೂ ಗಮನಿಸಿ ಆ ಶಾಸ್ತ್ರವನ್ನು ಅಭ್ಯಾಸಕ್ಕಿಟ್ಟಿದೆ. ಇದರಿಂದ ಉತ್ಸಾಹೀ ಹವ್ಯಾಸಿಗಳನ್ನು ಈ ದಿಸೆಯಲ್ಲಿ ಪ್ರೋತ್ಸಾಹಿಸುತ್ತಿದೆ ಎನ್ನಬಹುದು.

ಆಧುನಿಕ ನಾಟಕ

ಕಲಾವಿಲಾಸಿ ಸಂಘಗಳ ಮೇಲ್ಮೆಯ ಕಾಲದಲ್ಲಿ ಕನ್ನಡದ ಹೊಸ ನಾಟಕ ನಾಲ್ಕಾರು ನಡೆಗಳಲ್ಲಿ ಮುಂದುವರೆದು, ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ರಂಗನಾಟಕಗಳ ಜೊತೆಜೊತೆಯಲ್ಲಿ ಗೀತನಾಟಕಗಳೂ ಛಾಯಾನಾಟಕಗಳೂ, ಆಶುನಾಟಕಗಳೂ, ನೃತ್ಯನಾಟಕಗಳೂ, ಸಮಸ್ಯಾತ್ಮಕ ನಾಟಕಗಳೂ ಪ್ರಸಾರನಾಟಕಗಳೂ ಬೆಳದುಬಂದಿವೆ. ಮೊದಲಿಗೆ ನಾರಾಯಣರಾವ್ ಹುಯಿಲಗೋಳ ಅವರೂ ಕೆರೂರು ವಾಸುದೇವಾಚಾರ್ಯರೂ ಉತ್ತರ ಕರ್ನಾಟಕದಲ್ಲಿಯೂ ಕೈಲಾಸಂ ಮತ್ತು ಅ.ನ.ಕೃ. ಮೈಸೂರಿನಲ್ಲಿಯೂ ಸಾಮಾಜಿಕ ನಾಟಕಗಳಿಗೆ ಮಹತ್ವದ ಸ್ಥಾನವನ್ನು ಕಲ್ಪಿಸಿಕೊಟ್ಟರು. ಸಮಾಜದ ಅಂಧಶ್ರದ್ಧೆ, ಸಂಪ್ರದಾಯ, ಸಂಕುಚಿತಮನೋಭಾವದ ಆಚಾರವಿಚಾರ-ಗಳನ್ನು ಅವಹೇಳನಮಾಡುತ್ತಾ ಅವಿರತವಾಗಿ ವಿಡಂಬನಾತ್ಮಕ ನಾಟಕಗಳನ್ನು ರಚಿಸಿದ ಕೈಲಾಸಂ, ಶ್ರೀರಂಗ ಮತ್ತು ಶಿವರಾಮಕಾರಂತರು ಕನ್ನಡ ರಂಗಭೂಮಿಯ ಹೊಸ

ಯುಗದ ತ್ರಿಮೂರ್ತಿಗಳೆನಿಸಿಕೊಂಡರು. ಉದ್ಧಾರ, ಸಾಯೋ ಆಟಗಳಂಥ ಕ್ರಾಂತಿಕಾರಕ ಸಾಮಾಜಿಕ ನಾಟಕಗಳನ್ನು ದ.ರಾ.ಬೇಂದ್ರೆ ಬರೆದರು. ಹ.ಪಿ.ಜೋಷಿ, ವಿ.ಕೃ.ಗೋಕಾಕ, ರಂ.ಶ್ರೀ.ಮುಗಳಿ, ಎನ್ಕೆ ಮೊದಲಾದ ಪ್ರತಿಭಾವಂತ ಸಾಹಿತಿಗಳು ತಮ್ಮ ವೈವಿಧ್ಯಪೂರ್ಣವಾದ ನಾಟಕಗಳಿಂದಾಗಿ ಉತ್ತರ ಕರ್ನಾಟಕದ ನಾಟಕ ಸಾಹಿತ್ಯಕ್ಕೆ ಕಳೆಯನ್ನು ತಂದುಕೊಟ್ಟಿದ್ದಾರೆ. ಇತ್ತ ಮೈಸೂರಿನಲ್ಲಿ ಕೈಲಾಸಂ ಪ್ರಾರಂಭಿಸಿದ ಮನೆಮಾತಿನ ನಾಟಕಗಳಿಂದಾಗಿ ಉತ್ತರ ಕರ್ನಾಟಕದ ನಾಟಕ ಸಾಹಿತ್ಯಕ್ಕೆ ಕಳೆಯನ್ನು ತಂದುಕೊಟ್ಟರು.

ಇತ್ತ ಮೈಸೂರಿನಲ್ಲಿ ಕೈಲಾಸಂ ಪ್ರಾರಂಭಿಸಿದ ಮನೆಮಾತಿನ ನಾಟಕ ಸಂಪ್ರದಾಯಕ್ಕೆ ನರಕದ ನ್ಯಾಯದಂಥ ವರ್ಚಸ್ವೀ ನಾಟಕಗಳನ್ನು ಬರೆದ ರಾಜರತ್ನಂ ಚಾಲನೆಕೊಟ್ಟರು. ಪರ್ವತವಾಣಿಯವರು ಈ ದಿಶೆಯಲ್ಲಿ ಇನ್ನೂ ಮುಂದುವರಿದು, ಮೀನಾಮದುವೆ, ವಾರ್ಷಿಕೋತ್ಸವ, ಪದ್ಮಾವತೀ ಪರಿಣಯಗಳಂಥ ಉತ್ತಮ ರಂಗನಾಟಕಗಳನ್ನು ರಚಿಸಿದರು.

ಭಾರತದ ಇತರ ಪ್ರಾದೇಶಿಕ ರಂಗಭೂಮಿಗಳಲ್ಲಿರುವಂತೆ, ಕನ್ನಡನಾಡಿನಲ್ಲಿ ಇಂದು ಸಾಮಾಜಿಕ ಮತ್ತು ಸಮಸ್ಯಾಪರ ನಾಟಕಗಳು ರಂಗಭೂಮಿಯ ಮೇಲಿವೆ. ಆಡುಮಾತಿನ ಏಕಾಂಕಗಳು ವಿಫಲವಾಗಿವೆ. ಆದರೂ ಕನ್ನಡನಾಟಕ ಸಾಹಿತ್ಯದಲ್ಲಿನ ವೈವಿಧ್ಯ ಕಡಿಮೆಯದಲ್ಲ.

ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದ ಮೇಲೆ ದೊರೆತ ಪ್ರೋತ್ಸಾಹದಿಂದಾಗಿ ಕನ್ನಡ ರಂಗಭೂಮಿಯೂ ತನ್ನ ಹಿರಿಮೆಯನ್ನು ಸಾರಲು ಸಾಧ್ಯವಾಗಿತ್ತು. ಯಕ್ಷಗಾನ ಮತ್ತೊಮ್ಮೆ ತನ್ನ ಮೊದಲ ಸ್ಥಾನವನ್ನು ಗಳಿಸಿಕೊಂಡಿತು. ಜೆ.ಎಚ್.ವೀರಣ್ಣ, ಎಂ.ಸಿ.ಮಹಾದೇವಸ್ವಾಮಿ, ಪುಟ್ಟಯ್ಯ ಗವಾಯಿ ಮೊದಲಾದವರ ನೇತೃತ್ವದಲ್ಲಿ ವೃತ್ತಿನಿರತ ರಂಗಭೂಮಿ ಮತ್ತೆ ಚೇತರಿಸಿಕೊಂಡಿತು.

ಟಿ.ರಾಘವಂ ಹಿರಿತನದಲ್ಲಿ ಹತ್ತಾರು ವರ್ಷಗಳ ಕಾಲ ಅತ್ಯಂತ ಪ್ರಭಾವಶಾಲಿಯಾಗಿ ಮೆರೆದು ಇಪ್ಪತ್ತು ವರ್ಷಗಳ ಹಿಂದೆಯೇ ಮುಳುಗಿಹೋದ ಬೆಂಗಳೂರಿನ 'ಅಮೆಚ್ಯೂರ್ ಡ್ರಮಾಟಿಕ್ ಅಸೋಸಿಯೇಷನ್' ಸಂಘವನ್ನು ನೆನಪಿಗೆ ತರುವಷ್ಟು ಘನವಾದ ಕಲಾವಿಲಾಸಿ ಸಂಸ್ಥೆಗಳು ಕನ್ನಡನಾಡಿನ ಅನೇಕ ಕಡೆಗಳಲ್ಲಿ ಮುಡಿ ಬಂದಿತ್ತು. ಕನ್ನಡ ನಾಡಿನ ಪ್ರತಿಯೊಂದು ಮುಖ್ಯಪಟ್ಟಣದಲ್ಲಿಯೂ ಸುಸಜ್ಜಿತವಾದ ರಂಗಮಂಟಪವನ್ನು ಕಟ್ಟುವ ಯೋಜನಕಾರ್ಯಗತವಾಯಿತು.

ಸಮಾವೇಶವಾಗುತ್ತಿರುವ ನಾಟ್ಯ ಸಮ್ಮೇಳನ, ನಾಟ್ಯೋತ್ಸವ, ನಾಟಕಸ್ಪರ್ಧೆಗಳು ರಂಗಭೂಮಿಯ ಮುನ್ನಡೆಗೆ ಒತ್ತಾಸೆ ನೀಡಿದವು. ಇಂದಿನ ಪ್ರೇಕ್ಷಕರು ಹೆಚ್ಚು ಹೆಚ್ಚು ವಿಚಾರಶೀಲರೂ ವಿಮರ್ಶಕರೂ ಆಗುತ್ತಿದ್ದಾರೆ. ಈ ಎಲ್ಲದರಿಂದಾಗಿ ಕನ್ನಡ ರಂಗಭೂಮಿಯ ಹಳೆಯ ಹಿರಿಮೆಗಳಿಗೆ ಸರಿತೂಗುವಂಥ ಉಜ್ವಲವಾದ ಭವಿಷ್ಯವೂ ಅದಕ್ಕೆ ಇದೆಯೆಂದು ನಂಬಬಹುದು.[೧]

---

೧. ಕನ್ನಡ ವಿಶ್ವಕೋಶ, ಸಂಪುಟ – ೨, ೧೯೭೧, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

ಅಧ್ಯಾಯ – ೩

ಆಧುನಿಕ ಭಾರತೀಯ ರಂಗಭೂಮಿಯ ಹುಟ್ಟು

ವಿಶಾಲ ಅರ್ಥದಲ್ಲಿ ನೋಡಿದರೆ ಮನುಷ್ಯ ಹುಟ್ಟಿದಾಗಲೇ ರಂಗಭೂಮಿ ಹುಟ್ಟಿತು. ಅನುಕರಣೆ ಮಾನವನ ಹುಟ್ಟುಗುಣ. ಕಾರಣವಿದ್ದೋ ಇಲ್ಲದೆಯೋ ಮನುಷ್ಯ ಅನುಕರಣೆ ಮಾಡುತ್ತಾ ಬಂದಿದ್ದಾನೆ. ರಂಜನೆಗಾಗಿ ಅವನು ಅನುಕರಿಸುವುದುಂಟು. ಅನುಕರಣೆ ಮನುಷ್ಯನ ಸಹಜಗುಣಗಳಲ್ಲಿ ಒಂದು. ಇಲ್ಲೇ ರಂಗಭೂಮಿ ಹುಟ್ಟಿತು. ನಾಟಕ ಹುಟ್ಟುವುದಕ್ಕೆ ಮೊದಲೇ ರಂಗಭೂಮಿ ಇತ್ತು ಎನ್ನುವುದು ಭರತನ ನಾಟ್ಯಶಾಸ್ತ್ರದಿಂದ ತಿಳಿದುಬರುತ್ತದೆ.

ಭಾರತದಲ್ಲಿ ಆಧುನಿಕ ನಾಟಕ ಕಲೆ ನಿಜವಾಗಿ ಜೀವಂತವಾಗಿ ಉಳಿದು ಬೆಳೆದುಕೊಂಡು ಬಂದದ್ದು ಜನಸಾಮಾನ್ಯರಲ್ಲಿ ಜನಪದ ಕಲೆಯಾಗಿ ಸುಸಂಸ್ಕೃತರೆನಿಸಿಕೊಂಡವರ ಕೃತಿಗಳಿಂದಲೂ ರಾಮಾಯಣ, ಮಹಾಭಾರತ ಮತ್ತು ಪುರಾಣಗಳಿಂದಲೂ ಇವು ಸ್ಫೂರ್ತಿ ಪಡೆದುದ್ದಾದರೂ ಇವು ಜನಜೀವನದಲ್ಲಿ ಆಳವಾಗಿ ಬೇರುಬಿಟ್ಟಿದ್ದವು. ಪ್ರಾದೇಶಿಕ ವೈಶಿಷ್ಟ್ಯಗಳಿಂದ ಕೂಡಿದ್ದವು. ಇವು ಆಯಾ ಜನರಿದ್ದ ಪರಿಸರದಲ್ಲಿಯೇ ನಡೆಯುತ್ತಿದ್ದ ಪ್ರಯೋಗಗಳು.

ಉತ್ತರದ ಕಡೆಗಳಲ್ಲಿ

ಬಂಗಾಳದಲ್ಲಿ:

ಭಾರತದ ಆಧುನಿಕ ರಂಗಭೂಮಿ ಹುಟ್ಟಿದ್ದು ಬಂಗಾಳದಲ್ಲಿ, ಬ್ರಿಟೀಷರ ಆಗಮನದ ಅನಂತರ ಭಾರತೀಯರ ಮೇಲೆ ಬ್ರಿಟಿಷರು ಹಲವು ಬಗೆಯಾಗಿ ತಮ್ಮ ಪ್ರಭಾವ ಬೀರಿದರು. ಭಾರತೀಯ ರಂಗಭೂಮಿಗೆ ಆಧುನಿಕತೆ ತಂದರು. "ಬಂಗಾಳದ ರಂಗಭೂಮಿ ಅಸ್ತಿತ್ವಕ್ಕೆ ಬರಲು ಮುಖ್ಯವಾಗಿ ಪ್ರೇರಕಶಕ್ತಿಯಾಗಿದ್ದುದು. 'ಕಲ್ಕತ್ತ ಥಿಯೇಟರ್', ಕಲ್ಕತ್ತ ನಗರದ ಶ್ರೀಮಂತರಿಂದ ಸಹಾಯಧನ ಪಡೆದು ಈ ರಂಗಮಂದಿರವನ್ನು ಕಟ್ಟಲಾಯಿತು. ಇಲ್ಲಿ ಷೇಕ್ಸ್‌ಪಿಯರ್‌ನ 'ಹ್ಯಾಮ್ಲೆಟ್', 'ದಿಚರ್ಡ್‌ದಿ–ಪರ್ಡ್' ಸೇರಿದಂತೆ ಹಲವು ನಾಟಕಗಳನ್ನು ಆಡುತ್ತಿದ್ದರು. 'ಮಿಸಿಸ್ ಬ್ರಿಸ್ಟೂವ್ಸಾ ಥಿಯೇಟರ್ಸ್' ಎಂಬ ಸಂಸ್ಥೆ ೧೭೭೯ರಲ್ಲಿ ತನ್ನ ಮೊದಲ ಪ್ರಯೋಗವನ್ನು ಮಾಡಿತು."[೧]

---

೧. ಡಾ. ಸಿಂಧುವಳ್ಳಿ ಅನಂತಮೂರ್ತಿ, ಗುಬ್ಬಿ ಕಂಪನಿ, ಮೈ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್, ಮೈಸೂರು, ಪು. ೩೩.

ಈ ಸಂಸ್ಥೆಯನ್ನು ನಡೆಸುತ್ತಿದ್ದವಳು ಮಿಸಿಸ್ ಬ್ರಿಸ್ಟೂವ್. ಇದರಿಂದಾಗಿ ಈಕೆಯ ಹೆಸರು ಭಾರತೀಯ ರಂಗಭೂಮಿಯ ಇತಿಹಾಸದಲ್ಲಿ ಉಳಿದುಕೊಳ್ಳುವಂತಾಯಿತು.

ಬಂಗಾಳವು ತಮ್ಮದೇ ಆದ ರಂಗಭೂಮಿಯನ್ನು ಸ್ಥಾಪಿಸಲು ಬಹುಮಟ್ಟಿಗೆ ಪ್ರಭಾವ ಬೀರಿದ ಸಂಸ್ಥೆ ಎಂದರೆ "ದಿ ಬೌರಿಂಗ್ ಥಿಯೇಟರ್' ಇದರೊಡನೆ ಪಾಶ್ಚಾತ್ಯ ಪ್ರತಿಭಾವಂತರ ಹಾಗೂ ಭಾರತೀಯರು ನಿಕಟ ಸಂಪರ್ಕ ಹೊಂದಿದ್ದರು. ಭಾರತೀಯರು ತಮ್ಮದೇ ಆದ ರಂಗಭೂಮಿಯನ್ನು ನಿರ್ಮಾಣ ಮಾಡಿಕೊಳ್ಳಲು ಇದು ಕಾರಣವಾಯಿತು. ಈ ಸಂಸ್ಥೆ ಕೆಲವು ವರ್ಷಗಳ ಕಾಲ ಮಹತ್ವಪೂರ್ಣವಾದ ಕೆಲಸ ಮಾಡಿ ೧೮೪೯ರಲ್ಲಿ ಕೊನೆಗೊಂಡಿತು. ಬಂಗಾಳ ರಂಗಭೂಮಿಯ ಇತಿಹಾಸದ ಆ ಮೊದಲ ದಿನಗಳಲ್ಲಿ ಒಳ್ಳೆಯ ಕೆಲಸ ಮಾಡಿದ ಇನ್ನೆರಡು ಸಂಸ್ಥೆಗಳೆಂದರೆ "ದಿ ಸ್ಯಾನ್ಸ್ ಸಾಸಿ ಥಿಯೇಟರ್' ಮತ್ತು ದಿ ಲೀವಿಸ್ ಥಿಯೇಟರ್".[೧]

"ಬಂಗಾಳಿ ರಂಗಭೂಮಿಯ ಇತಿಹಾಸದಲ್ಲಿ ೧೮೫೭ ಬಹಳ ಮಹತ್ವ ಪೂರಿತವಾದ ವರ್ಷ. ಆ ವರ್ಷ ಬಂಗಾಳಿ ಭಾಷೆಯ ಸಾಮಾಜಿಕ ದುರಂತ ನಾಟಕ 'ಕುಲೀನ ಕುಲ ಸರ್ವಸ್ವ' ಎಂಬ ನಾಟಕದ ಪ್ರಯೋಗವಾಯಿತು."[೨] ಅಂದಿನ ದೃಷ್ಟಿಯಿಂದ ಇದೊಂದು ಆಧುನಿಕ ಪ್ರಯೋಗವಾಗಿತ್ತು. ಇಲ್ಲಿಂದ ಮುಂದೆ ಕಲ್ಕತ್ತಾ ರಂಗಭೂಮಿಯ ಮೇಲೆ ಭಾರತೀಯ ನಾಟಕಗಳು ಬರಲು ಪ್ರಾರಂಭಿಸಿದವು. ಆದ್ದರಿಂದ ಈ ನಾಟಕ ಪ್ರಯೋಗ ಬಹಳ ಮಹತ್ವಪೂರ್ಣವಾದದ್ದೆನ್ನಬಹುದು.

ಹಿಂದಿನಂತೆ ಒಂದು ಮನೆಯ ವಿವಿಧ ಭಾಗಗಳಲ್ಲಿ ಈ ನಾಟಕಗಳ ಪ್ರಯೋಗವಾಗದೇ ಅದಕ್ಕೆಂದೇ ಸಿದ್ಧವಾದ ಸ್ಥಳಗಳಲ್ಲಿ ಇದನ್ನು ಪ್ರದರ್ಶಿಸಲಾಯಿತು. ಮುಂದೆ ಇದಕ್ಕೆ ಸಂಗೀತವನ್ನು ಅಳವಡಿಸಿ ಸುಸಜ್ಜಿತ ರಂಗಮಂದಿರದಲ್ಲಿ ಇದರ ಪ್ರಯೋಗ ನಡೆಯಿತು. ನಂತರ ರಂಗಸಜ್ಜಿಕೆ ಬಣ್ಣದ ಪರದೆ, ವಾದ್ಯಗೋಷ್ಠಿ ಮತ್ತು ಸಂಗೀತಗಳೊಂದಿಗೆ ನಾಟಕಗಳನ್ನು ಪ್ರಯೋಗಿಸಿದರು.

ಇಂಥ ಪ್ರಯೋಗಗಳ ಚಟುವಟಿಕೆ ಹೀಗೆ ಮುಂದುವರೆಯುತ್ತಿದ್ದಂತೆ ಸಾಮಾಜಿಕ ನಾಟಕಗಳೂ ರಂಗದ ಮೇಲೆ ಬಂದವು. "ಮೈಕೆಲ್ ಮಧೂಸೂಧನ ದತ್ತರ 'ಏಕೀಕಿ ಬೋಲೆ ಸಭ್ಯತಾ'ವನ್ನು 'ಶೋಭಾ ಬಜಾರ್ ಸಂಸ್ಥೆ' ಪ್ರಯೋಗಿಸಿತು.

---

೧. ಡಾ. ಎಚ್.ಕೆ. ರಂಗನಾಥ್, ವೃತ್ತಿ ರಂಗದರ್ಶನ, ಲಕ್ಷ್ಮೀ ಮುದ್ರಣಾಲಯ, ಚಾಮರಾಜ ಪೇಟೆ, ಬೆಂಗಳೂರು, ಪು. ೩

೨. ಎನ್.ಎಸ್.ವೆಂಕಟರಾಮ್, ರಂಗಭೂಮಿ, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ.ಲಿ. ಎಂಜಿನ್ ಸೆಂಟರ್. ಕ್ರೆಸೆಂಟ್ ರಸ್ತೆ, ಪು.೧೭

ಇದು ವಿಶೇಷ ಹೆಸರು ಗಳಿಸಿತು. ಇದರ ಪ್ರಯೋಗಗಳು ನಗರದಲ್ಲಿ ಮನೆಮಾತಾದವು. ಜನ ಅಧಿಕ ಸಂಖ್ಯೆಯಲ್ಲಿ ಬರತೊಡಗಿದರು. ನೂಕು ನುಗ್ಗುಲನ್ನು ತಡೆಯಲು ಟಿಕೇಟ್ ಹಾಕಲಾಯಿತು. ಹಣ ತೆಗೆದುಕೊಳ್ಳುವಂತಿರಲಿಲ್ಲ. ಈ ಪ್ರಯೋಗಗಳು ಖಾಸಗೀ ಸಂಸ್ಥೆಯಲ್ಲಿ ನಡೆಯುತ್ತಿದ್ದರಿಂದ ಅವರಿಗೆ ಬೇಕಾದವರನ್ನು ಮಾತ್ರ ಆಹ್ವಾನ ಮಾಡುತ್ತಿದ್ದರು. ಇದರಿಂದ ಮಧ್ಯಮ ವರ್ಗದ ಜನ ವಂಚಿತರಾದರು. ಇದನ್ನು ಅರ್ಥಮಾಡಿಕೊಂಡ 'ಗಿರೀಶ್ ಚಂದ್ರ ಘೋಷ್ ಎಲ್ಲರಿಗಾಗಿ 'ರಾಷ್ಟ್ರೀಯ ರಂಗಮಂದಿರ' ಸ್ಥಾಪಿಸಿದರು. ಇಲ್ಲಿನವರೆಗೆ ಸಂಬಳ ದೊರಕಿತ್ತು. ನಾಟಕ ನೋಡಬೇಕಾದವರು ಟಿಕೆಟ್ ತೆಗೆದುಕೊಂಡು ಬರಬೇಕಿತ್ತು. ಇದರ ಆಶ್ರಯದಲ್ಲಿ ದುರಂತ ನಾಟಕ, ಸುಖಾಂತ ನಾಟಕ, ಪ್ರಶಂಸನ, ಸಂಗೀತ ಪ್ರಹಸನ ಮೊದಲಾದವು ಪ್ರಯೋಗಗೊಳ್ಳುತ್ತಿದ್ದವು. ಇವು ಅಂದಿನ ದೃಷ್ಟಿಯಲ್ಲಿ ಆಧುನಿಕ ಪ್ರಯೋಗ ತಂತ್ರಗಳಿಂದ ಕೂಡಿದ್ದವು. ಈ ಸಾರ್ವಜನಿಕ ರಂಗಮಂದಿರದ ಸ್ಥಾಪನೆ ಬಂಗಾಳ ರಂಗಭೂಮಿಯಲ್ಲಿ ಒಂದು ಪ್ರಮುಖ ಘಟ್ಟ.

ಮಹಾರಾಷ್ಟ್ರ:

ಬಂಗಾಳದ ಆಧುನಿಕ ರಂಗಭೂಮಿಯು ಅಸ್ತಿತ್ವಕ್ಕೆ ಬರಲು ಸಂಪೂರ್ಣವಾಗಿ ಆಂಗ್ಲರೂ ಕಾರಣರಾದರೆ, ಮಹಾರಾಷ್ಟ್ರದಲ್ಲಿಯ ಹಿನ್ನೆಲೆಯೆ ಬೇರೆ. ಮಹಾರಾಷ್ಟ್ರ ರಂಗಭೂಮಿಗೆ ಮುಖ್ಯ ಹಿನ್ನೆಲೆ ಕರ್ನಾಟಕ. ಅನಂತರ ಮುಂಬೈ, ಪಾರ್ಸಿ ಕಂಪನಿಗಳು. ಇವರು ಇಂಗ್ಲಿಷರ ನಾಟಕಗಳನ್ನು ಮಾದರಿಯಾಗಿಟ್ಟುಕೊಂಡು ಹಿಂದೂಸ್ತಾನಿಯಲ್ಲಿ ನಾಟಕಗಳನ್ನು ಪ್ರಯೋಗಿಸಲು ತೊಡಗಿದರು. ಭಾರತದ ಆಧುನಿಕ ರಂಗಭೂಮಿಯ ಅಸ್ತಿತ್ವದ ಹಿನ್ನೆಲೆಯಲ್ಲಿ ಇವರದೂ ಮುಖ್ಯ ಪಾತ್ರ.

ಕರ್ನಾಟಜದ ಯಕ್ಷಗಾನ ಮರಾಠಿ ನಾಟಕಗಳ ರಚನೆಗೆ ಸ್ಫೂರ್ತಿ ನೀಡಿತು. ಸಾಂಗ್ಲಿ ಸಂಸ್ಥಾನದ ಆಶ್ರಯದಲ್ಲಿದ್ದ ಕರಣಿಕ, ವಿಷ್ಣುಪಂತ, ಬಾವೆ, ಯಕ್ಷಗಾನದ ಮಾದರಿಯಲ್ಲಿ ಮರಾಠಿಯಲ್ಲಿ ನಾಟಕಗಳನ್ನು ರಚಿಸಿದರು. ಇವರ ಪ್ರಯೋಗಗಳು ಮುಂಬಯಿಯಲ್ಲಿ ಜನ ಮೆಚ್ಚುಗೆ ಗಳಿಸಿದ್ದವು.

ಇವರ ಮೊದಲ ನಾಟಕವೇ 'ಸೀತಾ ಸ್ವಯಂವರ' ಮುಂದೆ ತನ್ನ ಆಶ್ರಯದಾತ ತೀರಿಕೊಂಡ ನಂತರ ಬಾವೆ ಇದನ್ನೇ ತನ್ನ ವೃತ್ತಿಯನ್ನಾಗಿ ಮಾಡಿಕೊಂಡು ರಂಗಸಜ್ಜಿಕೆ, ರಂಗವಿನ್ಯಾಸ ಮೊದಲಾದವುಗಳಿಗೆ ಗಮನ ನೀಡಿದರು. ಮುಂದೆ 'ಸಾಂಗ್ಲಿಕರ್ ಸಂಗೀತ ನಾಟಿಕ ಮಂಡಳಿ'ಯಾಗಿ ಕೆಲಸ ಮಾಡಿದವು.

ಮುಂದೆ ೧೮೮೦ರಲ್ಲಿ ಅಸ್ತಿತ್ವಕ್ಕೆ ಬಂದ 'ಕಿರ್ಲೋಸ್ಕರ್ ನಾಟಕ ಮಂಡಳಿ' ಮರಾಠಿ ರಂಗಭೂಮಿಯ ಇತಿಹಾಸದಲ್ಲಿ ಒಂದು ಮುಖ್ಯ ಘಟ್ಟ. ಇವರ ನೇತೃ 'ಅಣ್ಣಾ ಸಾಹೇಬ್'[೧] ಇವರು ಮಹಾರಾಷ್ಟ್ರದವರಾದರೂ ಜನಿಸಿದ್ದು ಕರ್ನಾಟಕದಲ್ಲಿ ಇವರು ೨೦ನೇ ವಯಸ್ಸಿನಲ್ಲಿಯೇ ಮರಾಠಿ ಕಂಪನಿಯೊಂದನ್ನು ಸೇರಿದ್ದರಲ್ಲದೆ ಸುಮಾರು ೬ ನಾಟಕಗಳನ್ನು ಬರೆದಿದ್ದರು. ಇಂತಹ ನಾಟಕದಲ್ಲಿ ಸರಳ ಮರಾಠಿ ಹಾಡುಗಳನ್ನು ಸೇರಿಸಿದರು. ಸರಳ ಗದ್ಯ ನಿರೂಪಣೆ ರಂಜನೆಯ ಹಾಡುಗಳು ಇವೆರಡೂ ಕೂಡಿದ್ದರಿಂದ ಈ ಪ್ರಯೋಗ ಜನಪ್ರಿಯವಾಯಿತು. ಕಿರ್ಲೋಸ್ಕರರು ಪ್ರಾರಂಭಿಸಿದ ಈ ವಿಧಾನ ಒಂದು ಸಂಪ್ರದಾಯವಾಗಿ ಪರಿಣಮಿಸಿ ಹಲವು ವರ್ಷ ಉಳಿಯಿತು. ಈ ರೀತಿಯ ರಚನೆ ಸಾಂಪ್ರದಾಯಿಕ ಹಾಗೂ ಪೌರಾಣಿಕ ನಾಟಕಗಳಿಗೆ ಬಹಳ ಸೂಕ್ತವಾದವು ಮತ್ತು ಇಂಥ ರಚನೆಗಳು ಜನಪ್ರಿಯವಾದವು.

ಪ್ರತಿಭಾವಂತ ನಟನೆ ಮತ್ತು ಉತ್ತಮ ರಂಗ ಸಂಗೀತಗಳಿಂದಾಗಿ ಮರಾಠಿ ರಂಗಭೂಮಿ ಭದ್ರ ಬುನಾದಿಯ ಮೇಲೆ ನಿಂತಿತು. ಉತ್ತಮವಾದ ಮತ್ತು ಜನಪ್ರಿಯವಾದ ವಸ್ತುಗಳುಳ್ಳ ನಾಟಕಗಳು ರಂಗದ ಮೇಲೆ ಬಂದವು. ಸಾರ್ವಜನಿಕ ಜೀವನದಲ್ಲಿ ಬೇರೆ ಬೇರೆ ರಂಗಗಳಲ್ಲಿ ಪ್ರಸಿದ್ಧರಾದ ಪ್ರತಿಭಾವಂತರು ಈ ಕ್ಷೇತ್ರದಲ್ಲಿ ಪ್ರವೇಶಿಸಿದರು. ಸಮಕಾಲೀನ ಸಾಮಾಜಿಕ ವಸ್ತುಗಳ ನಾಟಕಗಳು ಹೊಸ ಹೊಸ ತಂತ್ರದೊಂದಿಗೆ ಪ್ರಯೋಗವಾಗತೊಡಗಿದವು. ರಂಗ ಸಂಗೀತ, ಅಭಿನಯ, ಕಥಾವಸ್ತು, ರಂಗತಂತ್ರ ಮೊದಲಾದವು ಪ್ರೇಕ್ಷಕರನ್ನು ಸೆರೆ ಹಿಡಿದವು. ನಾಟಕಗಳು ಜನಪ್ರಿಯವಾದವು. ರಂಗಭೂಮಿ ಭದ್ರವಾದ ನೆಲೆಗಟ್ಟಿನ ಮೇಲೆ ನಿಂತಿತು.

"ರಂಗಭೂಮಿಯ ಇತಿಹಾಸದಲ್ಲಿ ೧೮೫೩ ಬಹಳ ಮುಖ್ಯ ವರ್ಷ. ಭಾರತದ ಆಧುನಿಕ ರಂಗಭೂಮಿಯ ನಿರ್ಮಾಣದಲ್ಲಿ ಪಾರ್ಸಿಗಳ ಪಾತ್ರ ಬಹಳ ಮುಖ್ಯವಾದದ್ದು. ಇವರು ಮುಖ್ಯವಾಗಿ ವಾಸಿಸುತ್ತಿದ್ದುದು ಮುಂಬಯಿಯಲ್ಲಿ. ಇವರು ನಾಟಕ ಪ್ರಯೋಗ ಹಾಗೂ ಕಂಪನಿ ನಿರ್ವಹಣೆಯನ್ನು ಇವರು ವ್ಯಾಪಾರವೆಂದೇ ಪರಿಗಣಿಸಿದ್ದರು. ಕಂಪನಿ ನಡೆಸುವುದು ಒಂದು ವೃತ್ತಿಯಾಯಿತು. 'ಪಾರ್ಸಿ' ಕಂಪನಿ ಎಂದೇ ಇವರ ಕಂಪನಿ ಪ್ರಸಿದ್ಧವಾಯಿತು."[೨] ಇವರು ಕಂಪನಿಯನ್ನು ಉತ್ತರದಿಂದ

---

೧. ಡಾ. ಸಿಂಧುವಳ್ಳಿ ಅನಂತಮೂರ್ತಿ, ಗುಬ್ಬಿಕಂಪನಿ, ಪು. ೩೫.
೨. ಡಾ.ಸಿಂಧುವಳ್ಳಿ ಅನಂತಮೂರ್ತಿ, ಗುಬ್ಬಿಕಂಪನಿ, ಪು. ೩೭.

ದಕ್ಷಿಣದವರೆಗೂ ತಂದರು. ಈ ಕಂಪನಿ ಹೋದಲ್ಲೆಲ್ಲಾ ಇವರ ಪ್ರಭಾವ ಹುಟ್ಟಿತು. ಹೀಗೆ ಉತ್ತರದ ಕಡೆಗಳಲ್ಲಿ ನಾಟಕಗಳು ಹೆಚ್ಚಾಗಿ ಮೂಡಿಬಂದವು.

ದಕ್ಷಿಣ ಕಡೆಗಳಲ್ಲಿ

ದಕ್ಷಿಣ ಭಾರತದ ಉಳಿದ ಪ್ರದೇಶಗಳಾದ ಆಂಧ್ರ, ತಮಿಳುನಾಡು ಹಾಗೂ ಕೇರಳದಲ್ಲಿ ಕರ್ನಾಟಕಕ್ಕಿಂತ ಮೊದಲೇನೂ ಆಧುನಿಕ ರಂಗಭೂಮಿ ಇರಲಿಲ್ಲ. ಆಂಧ್ರ ಮತ್ತು ತಮಿಳುನಾಡಿನ ಆಧುನಿಕ ರಂಗಭೂಮಿಗೆ ಕರ್ನಾಟಕವೇ ಸ್ಫೂರ್ತಿ ನೀಡಿತು ಎನ್ನುವುದಕ್ಕೆ ಸಾಕಷ್ಟು ಆಧಾರಗಳಿವೆ.

ಕರ್ನಾಟಕದಿಂದ ಸ್ಫೂರ್ತಿ ಪಡೆದ ಬಳ್ಳಾರಿಯ ಕೃಷ್ಣಮಾಚಾರ್ಲು ಅವರೇ ತಮ್ಮ ಕಂಪನಿಯೊಡನೆ ತಮಿಳುನಾಡಿಗೆ ಹೋಗಿ ತೆಲಗು ನಾಟಕಗಳನ್ನು ಆಡಿದರು. ಆದ್ದರಿಂದ ರಂಗಭೂಮಿ ಅಸ್ತಿತ್ವಕ್ಕೆ ಬರಲ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಕರ್ನಾಟಕ ರಂಗಭೂಮಿ ಕಾರಣವಾಯಿತು.

ಒಟ್ಟಿನಲ್ಲಿ ಭಾರತದ ರಂಗಭೂಮಿಯ ಬೆಳವಣಿಗೆಗೆ ಆಂಗ್ಲರೇ ಸ್ಫೂರ್ತಿ ನೀಡಿದರೆನ್ನಬಹುದು. ಇವರು ಅನೇಕ ಇಂಗ್ಲಿಷ್ ನಾಟಕಗಳನ್ನು ಆಡಿದರು. ಮುಂದೆ ಸಂಸ್ಕೃತ, ಇಂಗ್ಲಿಷಿನಲ್ಲಿ ಅನುವಾದಗೊಂಡ ಅನೇಕ ನಾಟಕಗಳುಬಂದವು. ಇದಕ್ಕೆ ಮನೆಯೇ ರಂಗಮಂದಿರ, ವಿವಿಧ ಕೊಠಡಿಗಳಲ್ಲಿ ಬೇರೆ ಬೇರೆ ದೃಶ್ಯಗಳನ್ನಭಿನಯಿಸ ಲಾಗುತ್ತಿತ್ತು. ಇದು ಒಂದು ರೀತಿಯಲ್ಲಿ ನಾಟಕ ಪ್ರಯೋಗದಲ್ಲಿ ಒಂದು ಎಕ್ಸ್‌ಪೆರಿಮೆಂಟ್ ಎಂದೇ ಹೇಳಬೇಕು. ಕಾಲೇಜು ವಾತಾವರಣ ಹಾಗೂ ಅವರ ಪ್ರಾಧ್ಯಾಪಕರ ಪ್ರಭಾವದಿಂದಾಗಿ ಆಗಿನ ಯುವಕರು ಇಂಗ್ಲಿಷ್ ನಾಟಕಗಳಿಗೆ ಜೋತು ಬಿದ್ದರಾದರೂ ಈ ಮೋಹದಿಂದ ಭಾರತೀಯ ರಂಗಭೂಮಿಯ ಬೆಳವಣಿಗೆಗೆ ಅಷ್ಟೇನೂ ಅಡ್ಡಿ ಉಂಟಾಗಲಿಲ್ಲ. ಭಾರತೀಯ ನಾಟಕಗಳು ಪ್ರೇಕ್ಷಕರನ್ನು ಸೆರೆಹಿಡಿದಿದ್ದವು. ಈ ಕಡೆ ಆಧುನಿಕ ರಂಗಭೂಮಿಗಾಗಿ ಕೆಲಸ ಮಾಡುತ್ತಿದ್ದವರು ಭಾರತೀಯ ನಾಟಕಗಳ ಬೆಳವಣಿಗೆಗೆ ಶ್ರಮಿಸಿದರು. ಈ ಬೆಳವಣಿಗೆಯ ಅಂಗವಾಗಿ ನಾಟಕ ಮಾಡಲೆಂದೇ ರಂಗಮಂದಿರಗಳು ಸಿದ್ಧವಾದವು. ಜೊತೆಗೆ ಪ್ರಯೋಗ ತಂತ್ರಗಳ ಕಡೆಗೂ ಗಮನ ಹರಿದು ನಾಟಕಗಳು ಯಶಸ್ಸು ಗಳಿಸಿದವು. ಹೀಗೆ ಬಂಗಾಳಿ, ಮರಾಠಿ, ಹಿಂದಿ, ರಂಗಭೂಮಿಯು ಬೆಳೆದು ಬಂದವು. ದಕ್ಷಿಣ ಭಾರತದ ರಂಗಭೂಮಿಯಲ್ಲಿ ಕರ್ನಾಟಕದ್ದೆ ಮೊದಲ ಹೆಸರು.

"ಕ್ಲಾಸಿಕಲ್ ಸಂಸ್ಕೃತ ನಾಟಕದ ಅವನತಿಯಿಂದ ಆಧುನಿಕ ಭಾರತೀಯ ನಾಟಕದ ಉಗಮದವರೆಗಿನ ಸುಮಾರು ಐದು ಅಥವಾ ಆರು ಶತಮಾನಗಳ ಕಾಲಾವಧಿಯು ಸಾಮಾನ್ಯವಾಗಿ ಭಾವಿಸಿರುವಂತೆ ಕತ್ತಲ ಯುಗವಲ್ಲ. ಅದು ಆಧುನಿಕ ಭಾರತೀಯ ನಾಟಕದ ಉಜ್ವಲ ಅರುಣೋದಯ" ಎನ್ನುತ್ತಾರೆ 'ಶ್ರೀರಂ'.[೧]

ಕರ್ನಾಟಕದಲ್ಲೂ ಆಧುನಿಕ ರಂಗಭೂಮಿಯ ಹುಟ್ಟು

ಕರ್ನಾಟಕದಲ್ಲಿ ಆಧುನಿಕ ರಂಗಭೂಮಿಯ ಉದಯ ಉತ್ತರ ಕರ್ನಾಟಕದಲ್ಲಿ ಆಯಿತು. ಇದಕ್ಕೆ ಹಲವಾರು ಕಾರಣಗಳು ಇವೆ. "ಸುಮಾರು ೧೮೫೦ ರಿಂದ ಮೂರು ದಶಕಗಳ ಕಾಲ ಉತ್ತರ ಕರ್ನಾಟಕದಲ್ಲಿ ಮರಾಠಿ ನಾಟಕಗಳ ಹೊಯಿಲೇ ಹಬ್ಬಿ ಹೊಯಿತೆನ್ನಬೇಕು. ಹೊಸ ಬಗೆಯ ರಂಗಸಾಧನೆ, ಕಣ್ಣು ಕೋರೈಸುವ ಬೆಳಕು, ಸುಧಾರಿತವಾದ ವೇಷ ಭೂಷಣ, ಅಲಂಕಾರ, ಸೊಗಸಾದ ರಂಗಸಂಗೀತ, ಹೋಲಿಸಿದ್ದಲ್ಲಿ ಸಹಜವೇ ಆದ ಅಭಿನಯ ಹೊಸ ಹೊಸ ಕಥಾವಸ್ತುವನ್ನೊಳಗೊಂಡ ಇಂಥ ನಾಟಕಗಳನ್ನು ನೋಡಿದ ಜನತೆಗೆ ಕರೆನಾಡಿನ ಯಕ್ಷಗಾನದಲ್ಲಿ ಆಸಕ್ತಿ ಕಡಿಮೆಯಾಯಿತು. ನಾಟಕದ ಮಾತು ಅರ್ಥವಾಗದಿದ್ದರೂ ನಾನು ಮುಂದೆ ತಾನು ಮುಂದೆ ಎಂದು ದುಡ್ಡು ಸುರಿದು ರಂಗಮಂದಿರನೊಳಕ್ಕೆ ನುಗ್ಗುತ್ತಿದ್ದ ಕನ್ನಡ ಜನರ ರೀತಿ ಒಗಟಾಯಿತು. ನಮ್ಮ ರಂಗಕಲೆಯ ಬಗೆಗೆ ಆಸ್ಥೆಯನ್ನಿಟ್ಟುಕೊಂಡಿದ್ದ ಕಲಾವಿದರಿಗೆ, ವಿಮರ್ಶಕರಿಗೆ, ಪಂಡಿತರಿಗೆ ತಮ್ಮ ಅಭಿಮಾನದ ಮೇಲೆ ಬರೆ ಎಳೆದಂತಾಯಿತು. ಹೀಗೆ ಮರಾಠೀ ನಾಟಕದ ಧಾಳಿ ಮುಂದುವರಿದರೆ ಕನ್ನಡ ರಂಗಭೂಮಿಯು ತನ್ನತನವನ್ನು ಸಂಪೂರ್ಣವಾಗಿ ಕಳೆದುಕೊಳ್ಳುವುದೆಂದು ಅವರು ಸಹಜವಾಗಿಯೇ ಭಾವಿಸಿದರು."[೨]

ಮೇಲಿನ ಕಾರಣದಿಂದ ಕನ್ನಡಿಗರಿಗೆ ಕನ್ನಡ ನೆಲದ ಮೇಲೆ ತಮ್ಮದೇ ಆದ ರಂಗವನ್ನು ನಿರ್ಮಿಸುವ ನಿರ್ಧಾರ ಅನಿವಾರ್ಯವಾಯಿತು. ಈ ಚಳುವಳಿಗೆ 'ಸಕ್ಕರಿ ಬಾಳಾಚಾರ್ಯರು' ನೇತೃವಾದರು. 'ಶಾಂತಕವಿ' ಎಂದು ಮುಂದೆ ಪ್ರಸಿದ್ಧರಾದವರು ಇವರೇ. ಇವರು ಅನೇಕ ಉತ್ಸಾಹಿ ತರುಣರನ್ನು ಕೂಡಿಸಿಕೊಂಡು ೧೮೭೪ರಲ್ಲಿ 'ಕರ್ನಾಟಕ ನಾಟಕ ಕಂಪನಿಯನ್ನು ಗದಗ್‌ನಲ್ಲಿ ಸ್ಥಾಪಿಸಿದರು. ಇವರ ಆಶ್ರಯದಲ್ಲಿ

---

೧. ಡಾ. ಎಚ್.ಕೆ.ರಂಗರಾವ್, ವೃತ್ತಿ ರಂಗದರ್ಶನ, ಪು. ೩೦

೨. ಎಚ್.ಕೆ.ರಂಗನಾಥ್, ಕರ್ನಾಟಕ ರಂಗಭೂಮಿ, ವೆಂಕಟೇಶ್ವರ ಪ್ರಿಂಟರ್ಸ್, ಕೆಂಪೇಗೌಡ ನಗರ, ಬೆಂಗಳೂರು–೧೯, ಪು.೧೧೯.

'ಕೀಚಕವಧಾ' ಸೀತಾರಣ್ಯ ಪ್ರವೇಶ' 'ಶಂಕುತಲೋತ್ಪತ್ತಿಯಂತಹ' ಮೊದಲಾದ ನಾಟಕಗಳು ಹೊರಬಂದವು." [೧]

ಮರಾಠಿಗರು ಕನ್ನಡ ರಂಗದ ಮೇಲೆ ಪ್ರಯೋಗಿಸುತ್ತಿದ್ದ ನಾಟಕಗಳಿಗೆ ವಿರೋಧವಾಗಿ, ಅದಕ್ಕಿಂತ ಕಡಿಮೆ ಇಲ್ಲ ಎಂಬುದಾಗಿ ಇವರು ಕನ್ನಡ ಪ್ರಯೋಗಗಳನ್ನು ಪ್ರದರ್ಶಿಸಿದರು. ಇವರಿಗೆ ಕನ್ನಡಾಭಿಮಾನದ ಜೊತೆಗೆ ತಮ್ಮ ಕೆಲಸದಲ್ಲಿ ಸಮಕಾಲೀನ ರಂಗ ಪ್ರಜ್ಞೆಯು ಇರುವುದು ತಿಳಿಯುತ್ತದೆ. ಇದರಿಂದಾಗಿ ಅನೇಕ ಮರಾಠಿ ನಾಟಕಗಳು ಉತ್ತರ ಕರ್ನಾಟಕದಿಂದ ಹಿಂತೆಗೆದವು. ಇವರ ಸ್ಫೂರ್ತಿಯಿಂದ ಅನೇಕ ಕನ್ನಡ ನಾಟಕ ಕಂಪನಿಗಳು ಹುಟ್ಟುಕೊಂಡವು.

ಬಾಳಾಚಾರ್ಯರಿಗೆ ಕನ್ನಡದ ಅಭಿಮಾನ ಇದ್ದಂತೆಯೇ ವ್ಯವಹಾರ ಜ್ಞಾನವೂ ಇತ್ತು. ಒಂದು ಕಡೆ ಅಭಿಮಾನ ಮತ್ತೊಂದು ಕಡೆ ಪ್ರೇಕ್ಷಕವರ್ಗ ಈ ಎರಡನ್ನು ಗಮನದಲ್ಲಿಟ್ಟುಕೊಂಡು ಕನ್ನಡ ನಾಟಕಗಳನ್ನು ರಂಗದ ಮೇಲೆ ತಂದಿದ್ದರಿಂದಲೇ ಕನ್ನಡ ರಂಗಭೂಮಿಯು ಅಸ್ತಿತ್ವಕ್ಕೆ ಬಂತೆಂದು ಹೇಳಬೇಕು.

ಇದೇ ಮಾರ್ಗದಲ್ಲಿ ಕಂಪನಿ ಹದಿನೈದು ಹದಿನಾರು ವರ್ಷಗಳ ಕಾಲ ಮುಂದುವರೆಯಿತು. ನಂತರ ಬಾಳಾಚಾರ್ಯರ ಮರಣದಿಂದಾಗಿ ಕಂಪನಿ ತನ್ನ ಕೆಲಸವನ್ನು ನಿಲ್ಲಿಸಬೇಕಾಯಿತು. "ಇದೇ ಸಮಯದಲ್ಲಿ ಬೆಳಗಾವಿ ಜಿಲ್ಲೆಯ ಹಲಸಂಗಿಯಲ್ಲಿ 'ಹಲಸಂಗಿ ನಾಟಕ ಮಂಡಳಿ' ಅಸ್ತಿತ್ವಕ್ಕೆ ಬಂತು. ಈ ಕಂಪನಿಯ ಅಡಿಯಲ್ಲಿ ಕೆಲಸ ಮಾಡಿದವರು ಸುಸಂಸ್ಕೃತ ವಿದ್ಯಾವಂತ ಜನ. ಇವರು ಬೆಳಗಾವಿಯಿಂದ ಹಿಡಿದು ಬಳ್ಳಾರಿಯವರೆವಿಗೂ ಪ್ರವೇಶ ಮಾಡಿದಂತೆ ಕಂಡುಬರುತ್ತದೆ. ಇವರು ಹೋದಲೆಲ್ಲಾ ಮತಾಚಾರದ ಸಂಪ್ರದಾಯಗಳಿಗೆ ಹೆಚ್ಚಿನ ಗಮನ ಕೊಡುತ್ತಿದ್ದುದರಿಂದ ನಾಟಕ ಪ್ರಯೋಗ ಒಂದು ಹವ್ಯಾಸದಂತೆ ಕಂಡುಬರುತ್ತದೆ."[೨]

'ಕರ್ನಾಟಕ ನಾಟಕ ಕಂಪನಿ' ಮತ್ತು 'ಹಲಸಂಗಿ ನಾಟಕ ಮಂಡಳಿ'ಗಳಿಗಿಂತ ಧಾರವಾಡದ 'ತಂತುಪುರಸ್ತ ನಾಟಕ ಮಂಡಳಿ' ಒಂದು ಹೆಜ್ಜೆ ಮುಂದೆ ಹೋಯಿತು. ಇದು ಕನ್ನಡ ನಾಡಿನಲ್ಲಲ್ಲದೇ ಬೇರೆ ಬೇರೆ ರಾಜ್ಯಗಳಲ್ಲಿ ನಾಟಕಗಳ ಪ್ರದರ್ಶನ ನಡೆಯಿತು. ಹೀಗೆ ಕೆಲಸ ಮಾಡುತ್ತಿದ್ದ ಕಂಪನಿಗಳು ಹಲವು ಕಾರಣಗಳಿಂದಾಗಿ ತಮ್ಮ

---

೧. ಡಾ.ಸಿಂಧುವಳ್ಳಿ ಅನಂತಮೂರ್ತಿ, ಗುಬ್ಬಿಕಂಪನಿ, ಪು. ೩೮.

೨. ಕನ್ನಡ ರಂ. ಶತ ಸ್ಮಾರಕ ಸಮಿತಿ, ಕನ್ನಡರಂಗಭೂಮಿ ಶತಮಾನೋತ್ಸವ ಸ್ಮಾರಕ ಗ್ರಂಥ, ಪು.೩೯

ಕೆಲಸವನ್ನು ನಿಲ್ಲಿಸಿದವು. ಈ ಮಧ್ಯೆ 'ಭರತ ಕಲೋತ್ತೇಜಕ ಸಂಗೀತ ಸಮಾಜ' ವೆಂಬ ಕನ್ನಡ ನಾಟಕಗಳನ್ನೇ ಅಭಿನಯಿಸಿ ನಮ್ಮ ರಂಗವನ್ನು ಸಮೃದ್ಧವನ್ನಾಗಿ ಮಾಡಬೇಕೆಂದು ತೀರ್ಮಾನಿಸಿ ಪರಿಷ್ಕರಿಸಿದ ಹಳೆಯ ನಾಟಕಗಳನ್ನು ಉತ್ತಮ ಅನುವಾದಗಳನ್ನು ರಂಗದ ಮೇಲೆ ತಂದು ಜನಮೆಚ್ಚುಗೆ ಗಳಿಸಿತು. ಹಣ ಸಂಪಾದನೆಗಿಂತಲೂ ಕನ್ನಡ ರಂಗವನ್ನು ಉಳಿಸಿ ಬೆಳೆಸುವುದೇ ಈ ಕಂಪನಿಯ ಮುಖ್ಯ ಉದ್ದೇಶವಾಗಿತ್ತು.

ಕನ್ನಡ ರಂಗಭೂಮಿಯನ್ನು ಉಳಿಸಿಕೊಳ್ಳಲು ಹಠತೊಟ್ಟು ಅರ್ಥಪೂರ್ಣವಾದ ಕೆಲಸ ಮಾಡಲು ಅನೇಕ ಕಂಪನಿಗಳು ಮುಂದೆ ಬಂದವು. ಅವುಗಳಲ್ಲಿ "ಶಿರಹಟ್ಟಿ ವೆಂಕೋಬರಾಯರು ಸ್ಥಾಪಿಸಿದ 'ಶ್ರೀ ಮಹಾಲಕ್ಷ್ಮಿ ಪ್ರಾಸಾವಿಕ ನಾಟಕ ಮಂಡಳಿ' ಮುಖ್ಯವಾದದ್ದು."[೧] ಈ ಸಂಸ್ಥೆಯಲ್ಲಿ ಒಳ್ಳೆಯ ನಟರಿದ್ದುದೇ ಅಲ್ಲದೇ ಪ್ರೇಕ್ಷಕರಿಗೆ ರುಚಿಸುವಂತಹ ನಾಟಕಗಳನ್ನು ರಂಗದ ಮೇಲೆ ತಂದರು. " 'ಕನ್ನಡ ಶಾಕುಂತಲಾ' 'ಪ್ರಹ್ಲಾದ ಚರಿತೆ' 'ಕೃಷ್ಣಲೀಲಾ' 'ರಾಮಾಯಣ' ಈ ಪೌರಾಣಿಕ ನಾಟಕಗಳ ಜೊತೆಗೆ 'ಕಾಳಿದಾಸ ಕಲ್ಪಿತ' ಎಂಬ ಸಾಮಾಜಿಕ ನಾಟಕಗಳನ್ನು ರಂಗದ ಮೇಲೆ ತಂದು ತುಂಬ ಯಶಸ್ವಿಯಾದರು."

"ರಂಗನಾಟಕವೆಂದರೆ ಒಂದು ಮಾಯಾಲೋಕದ ಸೃಷ್ಟಿ ಎಂಬುದಾಗಿ ನಂಬಿದ್ದ ವೆಂಕೋಬರಾಯರು ರಂಗಸಜ್ಜಿಕೆ ಹಾಗೂ ಪಾತ್ರಗಳ ವೇಷ ಭೂಷಣಗಳಿಗಾಗಿ ಹೇರಳವಾದ ದ್ರವ್ಯವನ್ನು ವೆಚ್ಚಮಾಡಿದರು." ಹೀಗೆ ಇನ್ನು ಅನೇಕ ಕಂಪನಿಗಳು ಉತ್ತರ ಕರ್ನಾಟಕದಲ್ಲಿ ಸ್ಥಾಪಿತವಾಗಿ ಅನೇಕ ನಾಟಕಗಳನ್ನು ಹೊಸ ಹೊಸ ರೀತಿಯಲ್ಲಿ ಪ್ರಯೋಗಿಸಿದವು.

ಹಳೆಯ ಮೈಸೂರು ಭಾಗದಲ್ಲಿ

ಉತ್ತರ ಕರ್ನಾಟಕದಲ್ಲಿ ಆಧುನಿಕ ರಂಗಭೂಮಿಯ ಉಗಮಕ್ಕಿಂತ ಭಿನ್ನವಾದ ಪರಿಸರ ಮೈಸೂರು ಭಾಗದಲ್ಲಿತ್ತು. ಮೈಸೂರಿನಲ್ಲಿ ರಾಜತ್ವವಿತ್ತು. ಅಲ್ಲಿನ ಜನರ ಆಸೆ ಆಕಾಂಕ್ಷೆಗಳನ್ನು ರಾಜರೇ ಪೂರೈಸುತ್ತಿದ್ದರು. "ಮರಾಠೀ ಕಂಪನಿಗಳು ಉತ್ತರ ಕನಾಟಕದ ಭಾಗಗಳಿಗೆ ಭೇಟಿಕೊಟ್ಟ ಮೇಲೆ ಅಲ್ಲಿ ನಿಲ್ಲಲು ಅವಕಾಶವಿಲ್ಲದಿದ್ದಾಗ ೧೮೭೫ರ ಅನಂತರ ಮೈಸೂರಿನ ಕಡೆಗೆ ಧಾವಿಸಿದವು. ಆವರೆಗೆ ಮೈಸೂರು ಜನ ಈ

೧. ಡಾ. ಸಿಂಧುವಳ್ಳಿಅನಂತಮೂರ್ತಿ, ಗುಬ್ಬಿಕಂಪನಿ, ಪು. ೪೦.

ಮಾದರಿಯ ನಾಟಕ ಪ್ರಯೋಗಗಳನ್ನು ನೋಡಿರಲಿಲ್ಲ."[೧] ಆಗ ಮರಾಠೀ ನಾಟಕ ಕಂಪನಿಗಳ ಪೈಕಿ ಮುಖ್ಯವಾದದ್ದು 'ಸಾಂಗ್ಲಿಕರ್ ನಾಟಕ ಮಂಡಳಿ' ಇವರು ಅನೇಕ ನಾಟಕಗಳನ್ನು ಪ್ರದರ್ಶಿಸಿದರು. ಈ ಎಲ್ಲಾ ಪ್ರಯೋಗಗಳು ಅರಮನೆಯವರೇ ಆದಿಯಾಗಿ ಮೈಸೂರು ಜನತೆಯನ್ನೆಲ್ಲಾ ದಂಗುಬಡಿಸಿದವು.

ಈ ಕಂಪನಿಗಳ ಪ್ರಯೋಗಗಳಲ್ಲಿ ಕಂಡು ಬಂದ ರಂಗಸಜ್ಜಿಕೆ ವಿನ್ಯಾಸ, ವೇಷಭೂಷಣ, ಬೆಳಕಿನ ವ್ಯವಸ್ಥೆ ಇವೇ ಮೊದಲಾದವುಗಳಿಗೆ ಜನ ಮಾರು ಹೋದರು. ಒಟ್ಟಿನಲ್ಲಿ ಈ ನಾಟಕಗಳಿಗೆ ಮೈಸೂರು ಅರಮನೆ ಹಾಗೂ ಜನತೆ ತಮ್ಮ ಮೆಚ್ಚುಗೆ ಗೌರವಗಳನ್ನು ಕೊಟ್ಟರು. ಇದರಿಂದಾಗಿ ಈ ನಾಟಕಗಳು ಬಹು ಜನಪ್ರಿಯವಾದವು. ಈ ಪ್ರಯೋಗಗಳು ನಗರ ಜನಗಳನ್ನೇ ಅಲ್ಲದೆ ಸುತ್ತ ಮುತ್ತಲಿನ ಹಳ್ಳಿಯವರನ್ನೂ ಆಕರ್ಷಿಸಿದವು. ಪರಿಣಾಮವಾಗಿ ಈ ಕಂಪನಿಗಳಿಗೆ ಸಂಪಾದನೆ ಚೆನ್ನಾಗಿ ಆಗುತ್ತಾ ಬಂತು ಒಂದೆಡೆ ಈ ನಾಟಕಗಳನ್ನು ಪ್ರಯೋಗಿಸಬೇಕೆಂಬ ಆಸಕ್ತಿ. ಇವುಗಳ ಪರಿಣಾಮವಾಗಿ ಮೈಸೂರು ಭಾಗದಲ್ಲಿ ಆಧುನಿಕ ರಂಗಭೂಮಿ ಅಸ್ತಿತ್ವಕ್ಕೆ ಬಂತು.[೨]

ಮರಾಠಿ ಹಾಗೂ ಪಾರ್ಸಿ ಕಂಪನಿಗಳು ಬಂದು ಹೋದ ಮೇಲೆ ಅವುಗಳ ಪ್ರಭಾವದಿಂದಾಗಿ ಚಾಮರಾಜ ಒಡೆಯರ 'ಅರಮನೆ ಕಂಪನಿ' ಸ್ಥಾಪಿತವಾಯಿತು. ಇವರು ಆಡಿದ ನಾಟಕಗಳು ಯಶಸ್ವಿಯಾದವು. ಮರಾಠಿ ಹಾಗೂ ಪಾರ್ಸಿ ಕಂಪನಿಗಳಂತೆ ಈ ಕಂಪನಿಯ ವೇಷಭೂಷಣ, ರಂಗಸಜ್ಜಿಕೆ ವಿನ್ಯಾಸ, ರಂಗಸಂಗೀತ ಮುಂತಾದ ಅಂಶಗಳಿಗೆ ಗಮನ ನೀಡಿತು. ಇದರಿಂದ ನಾಟಕ ಪ್ರದರ್ಶನ ಯಶಸ್ವಿಯಾಯಿತು. ಈ ಕ್ಷೇತ್ರದಲ್ಲಿ ಇನ್ನೊಂದು ಹೆಜ್ಜೆ ಇಡಲು ಇದು ಧೈರ್ಯ ನೀಡಿತು. 'ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ' ಜನ್ಮತಾಳಿತು. (೧೮೮೨)– ಇದರ ಸ್ಥಾಪನೆಗೆ ಶ್ರೀ ಚಾಮರಾಜೇಂದ್ರ ಒಡೆಯರ ಆಸಕ್ತಿಯು ದಿವಾನ್ ರಂಗಾಚಾರ್ಲು ಅವರ ಕರ್ತೃತ್ವ ಶಕ್ತಿಯು ಕಾರಣವಾದವು. 'ಶ್ರೀಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ' ಆರಂಭವಾದ ಸಮಯದಲ್ಲೇ ಅಂದರೆ ಸುಮಾರು ೧೮೮೦ರಲ್ಲಿ ಮರಾಠಿ ಹಾಗೂ ಪಾರ್ಸಿ ನಾಟಕ ಮಂಡಳಿಗಳಿಂದ ಪ್ರಭಾವಿತರಾದ 'ಮಂಡ್ಯಂ ರಂಗಾಚಾರ್ಯರು' ತಮ್ಮ ಸ್ನೇಹಿತರೊಡಗೂಡಿ 'ರಾಜಧಾನಿ ನಾಟಕ ಮಂಡಳಿ'ಯನ್ನು ಸ್ಥಾಪಿಸಿದರು. ಕೊನೆಗೆ

---

೧. ಹೆಚ್.ಕೆ.ರಂಗನಾಥ್, ವೃತ್ತಿರಂಗಭೂಮಿ, ಪು. ೮೭

೨. ಕೆ.ವಿ. ಆಚಾರಾ, ಕರ್ನಾಟಕ ರಂಗಭೂಮಿ, ಪು. ೩೪.

ಮಂಡ್ಯಂ ರಂಗಾಚಾರ್ಯರನ್ನು 'ಅರಮನೆ ಕಂಪನಿ'ಗೆ ಸೇರಿಸಿಕೊಂಡರು. ಇವರ ಜೊತೆ ಇನ್ನೂ ಕೆಲವು ಉತ್ತಮ ನಟರು 'ಅರಮನೆ ಕಂಪನಿ'ಗೆ ಬಂದು ಸೇರಿದರು. ಈ ಹಿನ್ನೆಲೆಯಲ್ಲಿ ಅರಮನೆ ಕಂಪನಿಗೆ ರೆಕ್ಕೆ ಮೂಡಿದವು.[೧]

ಚಾಮರಾಜ ಒಡೆಯರು 'ಅರಮನೆ ಕಂಪನಿ'ಯನ್ನು ಸ್ಥಾಪಿಸಿ ಒಳ್ಳೆಯ ಕಲಾವಿದರಿಗೆ ಪ್ರೋತ್ಸಾಹ ನೀಡಿದುದರ ಜೊತೆಗೆ ಮುಂಬೈಯಿಂದ ರಂಗ ಸಲಕರಣೆಗಳನ್ನು ತರಿಸಿಕೊಟ್ಟರು. ನಾಟಕಗಳ ಯಶಸ್ಸಿಗೆ ಏನೇನೂ ವ್ಯವಸ್ಥೆಗಳು ಆಗಬೇಕೋ ಅವೆಲ್ಲವನ್ನೂ ಮಾಡಿಸಿಕೊಟ್ಟರು. ಮೈಸೂರು ಭಾಗದಲ್ಲಿ ಆಧುನಿಕ ಕನ್ನಡ ರಂಗಭೂಮಿ ಭದ್ರವಾಗಿ ನೆಲೆಯೂರಲು ಒಡೆಯರು ಕಾರಣರಾದರು. ೧೮೮೨ರಲ್ಲಿ ಪ್ರಾರಂಭವಾದ 'ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ' ೧೯೧೭ರವರೆಗೂ ಕೆಲಸ ಮಾಡಿತು.[೨]

ನಂತರ 'ಶ್ರೀ ಚಾಮುಂಡೇಶ್ವರಿ ಕರ್ನಾಟಕ ನಾಟಕ ಸಭಾ' 'ರಾಜಧಾನಿ ನಾಟಕ ಮಂಡಳಿ', 'ಸರಸ್ವತೀ ವಿಲಾಸ ಕರ್ನಾಟಕ ನಾಟಕ ಸಭೆ', 'ಶ್ರೀಕಂಠೇಶ್ವರ ಕರ್ನಾಟಕ ನಾಟಕ ಸಭೆ', 'ಗೊಲ್ಲರ ಪೇಟೆ ನಾಟಕ ಸಭೆ', 'ಬುಳ್ಳಪ್ಪನ ಕಂಪನಿ' ಮೊದಲಾದ ಸಂಸ್ಥೆಗಳು ಹುರುಪಿನಿಂದ ಕೆಲಸ ಮಾಡುತ್ತಿದ್ದವು.

"ರಂಗಾಚಾರ್ಯರ ಕಂಪನಿಯಲ್ಲೇ ಹೆಸರು ಗಳಿಸಿದ್ದ ಗೌರೀ ನರಸಿಂಹಯ್ಯನವರು, ೧೮೮೭ರಲ್ಲಿ 'ಸರಸ್ವತೀ ವಿಲಾಸ ನಾಟಕ ಸಭೆ'ಯನ್ನು ಕಟ್ಟಿದರು. ಎ.ವಿ.ವರದಾಚಾರ್ಯರನ್ನು ರಂಗಕ್ಕೆ ತಂದ ಕೀರ್ತಿ ಇವರಿಗೆ ಸಲ್ಲುತ್ತದೆ."[೩]

'ರತ್ನಾವಳಿ ಥಿಯೋಟ್ರಿಕಲಾ ಕಂಪನಿ' ೧೯೦೪ರಲ್ಲಿ ಪ್ರಾರಂಭವಾಯಿತು. ಕರ್ನಾಟಕದ ವೃತ್ತಿ ಕಂಪನಿಗಳ ಸಾಲಿನಲ್ಲಿ ಈ ಕಂಪನಿಗೆ ಮಹತ್ವದ ಸ್ಥಾನವುಂಟು ಇದರ ನೇತೃತ್ವ 'ಎ.ವಿ.ವರದಾಚಾರ್ಯರು'. ಇವರು 'ನಿರುಪಮಾ' 'ಪ್ರಹ್ಲಾದ' 'ರಾಮವರ್ಮ ಲೀಲಾವತಿ' 'ರತ್ನಾವಳಿ' 'ಶಾಕುಂತಲಾ' 'ಮನ್ಮಥ ವಿಜಯ' 'ವಿಷ್ಣುಲೀಲೆ' ಮೊದಲಾದ ನಾಟಕಗಳನ್ನು ಕನ್ನಡ ಪ್ರೇಕ್ಷಕರಿಗೆ ನೀಡಿದರು.[೪]

---

೧. ಹೆಚ್.ಕೆ.ರಂಗನಾಥ್, ಕರ್ನಾಟಕ ರಂಗಭೂಮಿ, ಪು. ೩೪.
೨. ಕೆ.ವಿ.ರಂಗನಾಥ್, ಕರ್ನಾಟಕ ರಂಗಭೂಮಿ, ಪು. ೩೪.
೩. ಹೆಚ್.ಕೆ.ರಂಗನಾಥ್, ವೃತ್ತಿ ರಂಗಭೂಮಿ, ಪು. ೩೭.
೪. ಅದೇ, ಪು. ೩೭

ಮೈಸೂರಿನ ನಾಟಕರಂಗಕ್ಕೆ ವರದಾಚಾರ್ಯರ ಕೊಡುಗೆ ಹಲವಾರು ಬಗೆಯದು. ಅದರಲ್ಲಿ ಮುಖ್ಯವಾದುದೆಂದರೆ ರಂಗಸಂಗೀತದ ಸುಧಾರಣೆ ಬಹುಮಟ್ಟಿಗೆ ಮರಾಠಿ ಹಾಗೂ ಪಾರ್ಸಿ ಕಂಪನಿ ನಾಟಕಗಳನ್ನೇ ಇವರು ಅನುಕರಣೆ ಮಾಡಿದರು ಎಂಬ ಅಪವಾದವಿದ್ದರೂ ಆಧುನಿಕ ಕನ್ನಡ ರಂಗಭೂಮಿಯನ್ನು ಅಸ್ತಿತ್ವಕ್ಕೆ ತಂದುದ್ದಕ್ಕೆ ಇವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕು.

ಈ ಅವಧಿಯಲ್ಲಿ ಹತ್ತಾರು ಕಂಪನಿಗಳು ಸತ್ತವು. ಒಂದೇ ಕಂಪನಿಯಿಂದ ಬೇರೆ ಬೇರೆ ಕಂಪನಿಗಳು ಕವಲೊಡೆದದ್ದು ಉಂಟು. ಕಂಪನಿಗಳನ್ನು ಕಟ್ಟಿ ಬೆಳೆಸುವುದರಲ್ಲಿ ಅನುಭವವಿಲ್ಲದವರು ಈ ಕೆಲಸದಲ್ಲಿ ತೊಡಗಿದ್ದು ಅನೇಕ ಕಂಪನಿಗಳ ಸಾವಿಗೆ ಕಾರಣವಾಯಿತು. ಹೆಮ್ಮೆ ಪಟ್ಟುಕೊಳ್ಳಬೇಕಾದ ಸಂಗತಿ ಎಂದರೆ ಈ ಅವಧಿಯಲ್ಲಿ ಕನ್ನಡ ರಂಗದ ಶ್ರೇಷ್ಠ ದರ್ಜೆಗೆ ಸೇರಿದ ನಟರೂ ಕನ್ನಡ ರಂಗವನ್ನು ಭದ್ರ ಬುನಾದಿಯ ಮೇಲೆ ನಿಲ್ಲಿಸಿದ ಕೆಲವು ವ್ಯಕ್ತಿಗಳು ಕಾಣಿಸಿಕೊಂಡರು.

ಒಟ್ಟಿನಲ್ಲಿ ಈ ಅವಧಿ ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಬಹಳ ಮಹತ್ವದ್ದು. ನಮ್ಮ ರಂಗಭೂಮಿಯ ಬಗೆಗೆ ನಾಟಕಕಾರರಲ್ಲಿ, ನಟರಲ್ಲಿ, ಜನತೆಯಲ್ಲಿ ಹೊಸ ಜಾಗೃತಿಯನ್ನು ಉಂಟು ಮಾಡಿದ ಕೀರ್ತಿ ಅನೇಕ ಕಂಪನಿಗಳಿಗೆ ಸಲ್ಲುತ್ತದೆ. ಇಂತಹ ನಾಟಕ ಕಂಪನಿಗಳಲ್ಲಿ "ಗುಬ್ಬಿ ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಸಂಘ" ೧೮೮೪ರಲ್ಲಿ ಪ್ರಾರಂಭವಾಯಿತು. ಇಂತಹ ನಾಟಕ ಮಂಡಳಿಯನ್ನು ಉಳಿಸಿ ಬೆಳೆಸಿದ ಕೀರ್ತಿ, 'ಗುಬ್ಬಿ ವೀರಣ್ಣನವರಿಗೆ' ಸಲ್ಲುತ್ತದೆ. ಈ ಮಂಡಳಿ 'ಗುಬ್ಬಿ ಕಂಪನಿ'ಯೆಂದೇ ಹೆಸರು ಪಡೆಯಿತು.

ಹೀಗೆ ರಂಗಭೂಮಿ ಹಲವು ಜನರ ಪ್ರಭಾವದಿಂದಾಗಿ ಹುಟ್ಟಿ ಅದು ಕರ್ನಾಟಕದಲ್ಲಿ ತನ್ನದೇ ಆದ ಪ್ರಭಾವ ಬೀರಿ ಕನ್ನಡ ರಂಗಭೂಮಿಯ ಅಭಿವೃದ್ಧಿಗೆ ಕಾರಣವಾಯಿತು.

ಅಧ್ಯಾಯ – ೪

ವೀರಣ್ಣನವರ ಪೂರ್ವದಲ್ಲಿನ ಗುಬ್ಬಿ ಕಂಪನಿಯ ಇತಿಹಾಸ

ಮೈಸೂರು ವಿಭಾಗದಲ್ಲಿ ಆಧುನಿಕ ಕರ್ನಾಟಕ ರಂಗಭೂಮಿ ಅಸ್ತಿತ್ವಕ್ಕೆ ಬಂದದ್ದು ಅರಮನೆಯ ಆಶ್ರಯದಲ್ಲಿ ಎಂಬುದನ್ನು ನಾವು ತಿಳಿದಿದ್ದೇವೆ. 'ಅರಮನೆ ಕಂಪನಿ' ಎಂದು ಪ್ರಾರಂಭವಾಗಿ 'ಶಾಕುಂತಲಾ ಕರ್ನಾಟಕ ನಾಟಕ ಸಭಾ' ಎಂದು ಸ್ವಲ್ಪ ಕಾಲ ಹೆಸರು ಪಡೆದು ಅಲ್ಲಿಂದ ಮುಂದೆ 'ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ' ಆಗಿ ಇದು ಕೆಲಸ ನಿರ್ವಹಿಸಿತೆಂಬುದನ್ನು ಇಲ್ಲಿ ತಿಳಿಸಲಾಗಿದೆ.[೧]

ಕಲೆಯ ಬೆಳವಣಿಗೆಗೆ ರಾಜಾಶ್ರಯ ಮುಖ್ಯವಾದರೂ ಹಿಂದೆ ದೇವಸ್ಥಾನ–ಗಳಲ್ಲೂ, ಹಳ್ಳಿಗಳಲ್ಲಿನ ಮುಖ್ಯರಲ್ಲೂ ಕಲೆಗೆ ಆಶ್ರಯ ದೊರಕಿತ್ತು. ಬೆಂಗಳೂರು, ಮೈಸೂರುಗಳಲ್ಲಿ ಯಶಸ್ವಿಯಾದ 'ಶಾಕುಂತಲಾ ನಾಟಕ' ಪ್ರಯೋಗಗಳು ಸುತ್ತಮುತ್ತಲಿನ ಊರುಗಳ ಜನರನ್ನು ಆಕರ್ಷಿಸಿರಬೇಕು. ಹಳ್ಳಿಗಳ ಮುಖ್ಯರು ಮೈಸೂರು ಬೆಂಗಳೂರಿಗೆ ಯಾವುದಾದರೂ ಕೆಲಸಕ್ಕಾಗಿ ಹೋಗಿ ಬರುತ್ತಿದ್ದಿರಬಹುದು. ಆ ಸಮಯದಲ್ಲಿ ಇಲ್ಲಿಗೆ ಗುಬ್ಬಿಯ ಮುಖ್ಯರೂ ಹೋಗಿ ಬರುತ್ತಿದ್ದಿರಬಹುದು. ಆ ಸಮಯದಲ್ಲಿ ಇಲ್ಲಿನ ನಾಟಕ ಪ್ರಯೋಗಗಳು ಅವರ ಮೇಲೆ ಪ್ರಭಾವ ಬೀರಿರಬಹುದು.

ಅಂತ ಸೂಕ್ತ ಸಂದರ್ಭದಲ್ಲಿ ಜನ್ಮತಾಳಿತು 'ಗುಬ್ಬಿ ಕಂಪನಿ'. 'ನಾಡು ನುಡಿಗಳ ಆಶೋತ್ತರವನ್ನು ಪ್ರತಿಬಿಂಬಿಸುವಂತೆ ಮೂಡಿ ಬಂದು ಮುಂದೆ ಉದ್ದಕ್ಕೂ ದಾಖಲೆಗಳನ್ನು, ಮೈಲಿಗಲ್ಲುಗಳನ್ನು ಸ್ಥಾಪಿಸುತ್ತಾ 'ನಭೂತೋನಃಭವಿಷ್ಯತಿ' ಎಂಬಂತೆ ಎಲ್ಲರ ಮನೆಮಾತಾಯಿತು. 'ಗುಬ್ಬಿ ಕಂಪನಿ' ೧೮೮೪ರಲ್ಲಿ ಹುಟ್ಟಿತು. ಆ ಹೊತ್ತಿಗೆ ನಾಡಿನಲ್ಲಿ ಅನೇಕ ನಾಟಕ ಕಂಪನಿಗಳಿದ್ದವು. ಜನ ನಾಟಕದತ್ತ ವಾಲಿದ್ದರು. ಅರಮನೆ, ಗುರುಮನೆಗಳ ಜೊತೆಗೆ ನಾಡಿನ ಸಾವಿರಾರು ಗ್ರಾಮೀಣರು ನಾಟಕವನ್ನು ಆಸಕ್ತಿಯಿಂದ ನೋಡಿ ಸಂತೋಷಿಸಿದ್ದರು. ಇಷ್ಟಾದರೂ ಯಾವುದೋ ಅತೃಪ್ತಿ, ಇನ್ನೂ ಬೇಕೆಂಬ ಹಂಬಲ ಕಂಡುಬರುವಂತಿತ್ತು. ಅಂತಹ ಕೊರತೆಯನ್ನು ನೀಗಿ ಪರಿಪೂರ್ಣ ಕಂಪನಿಯಾಗಿ ಬೆಳೆದದ್ದು ಗುಬ್ಬಿ ಕಂಪನಿಯೇ".[೨]

---

೧. ಹೆಚ್.ಕೆ.ರಂಗನಾಥ, ವೃತ್ತಿರಂಗದರ್ಶನ, ಲಕ್ಷ್ಮೀ ಮುದ್ರಣಾಲಯ, ಚಾಮರಾಜಪೇಟೆ, ಬೆಂಗಳೂರು, ಪು. ೮೨.

೨. ಡಾ. ಸಿಂಧುವಳ್ಳಿ ಅನಂತಮೂರ್ತಿ, ಗುಬ್ಬಿಕಂಪನಿ, ಮೈ ಪ್ರಿಟಿಂಗ್ ಅಂಡ್ ಪಬ್ಲಿಷಿಂಗ್, ಮೈಸೂರು, ಪು. ೨.

ಈ ಕಂಪನಿಯ ಆರಂಭವೇ ಅತಿ ಸ್ವಾರಸ್ಯಕರ.

ಗುಬ್ಬಿ ಚಂದಣ್ಣ, ಅಬ್ದುಲ್ ಅಜೀಜ್ ಹಾಗೂ ಸಾಹುಕಾರ ನೀಲಕಂಠಪ್ಪ ಈ ಮೂವರು ಗುಬ್ಬಿ ಕಂಪನಿಯ ಸ್ಥಾಪಕರು. ಗುಬ್ಬಿ ಕಂಪನಿಯ ಪೂರ್ಣ ಹೆಸರು "ಗುಬ್ಬಿ ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಸಂಘ". ಇದು ಗುಬ್ಬಿ ಕಂಪನಿ ಎಂದೇ ಜನಪ್ರಿಯವಾಗಿದೆ. ಮೂವರು ಸೇರಿ ಸ್ಥಾಪಿಸಿದ ಈ ಕಂಪನಿಯ ಹಿಂದೆ ಊರಿನವರೆಲ್ಲರ ಆಶೀರ್ವಾದ ಇತ್ತು ಎನ್ನುವುದರಲ್ಲಿ ಸಂಶಯವಿಲ್ಲ.

ಈ ಮೂವರು ವ್ಯಕ್ತಿಗಳು ವಿಭಿನ್ನ ಧರ್ಮಕ್ಕೆ ಸೇರಿದವರು. ಬೇರೆ ಬೇರೆ ಜನಾಂಗಗಳ ಪ್ರತಿನಿಧಿಗಳಾಗಿದ್ದರು. ಚಂದಣ್ಣನವರು ಜೈನರು, ಅಬ್ದುಲ್ ಅಜೀಜ್ ಮುಸ್ಲಿಮರು, ನೀಲಕಂಠಪ್ಪನವರು ವೀರಶೈವರು."[೧] ಈಗಾಗಿ ಕಂಪನಿ ಎಲ್ಲರ ಪ್ರತಿನಿಧಿಯಂತಾಯಿತು. ಎಲ್ಲರ ಪ್ರೀತಿಗೆ ಪಾತ್ರವಾಯಿತು.

ಆರಂಭದಲ್ಲಿ ಕಂಪನಿಯ ಸೂತ್ರವನ್ನು ಹಿಡಿದವರು ಚಂದಣ್ಣನವರು. ಅವರು ಅಷ್ಟು ವಿದ್ಯಾವಂತರಲ್ಲ. ಆದರೆ ಉತ್ಸಾಹಿಯೂ, ವ್ಯವಹಾರ ಕುಶಲರೂ ಆಗಿದ್ದರು. ಉತ್ತಮ ವ್ಯವಸ್ಥಾಪಕರೂ, ಸಂಘಟನಾ ಚತುರರೂ ಆಗಿದ್ದರು. ಆದ್ದರಿಂದಲೇ ಚಂದಣ್ಣನವರಿಗೆ ಈ ಕೆಲಸವನ್ನು ವಹಿಸಲಾಯಿತು. ಚಂದಣ್ಣನವರು ತಾವೇ ನಾಟಕಾಭಿನಯದಲ್ಲಿ ಅಷ್ಟು ಚತುರರಲ್ಲದಿದ್ದರೂ ನಾಟಕಕ್ಕೆ ಬೇಕಾದ ನಟರೇ ಮೊದಲಾದ ಅಂಗಗಳನ್ನು ಆರಿಸಿ ಕೂಡಿಸುವುದರಲ್ಲಿ ಉತ್ಸಾಹಪರರಾಗಿದ್ದರು.

"ಆಗ ಗುಬ್ಬಿಯಲ್ಲಿ ಮುನಿಸಿಪಾಲಿಟಿ ಲಾಂದ್ರಗಳಿಗೆ ಎಣ್ಣೆ ಹಾಕಿ ದೀಪಗಳನ್ನು ಹಚ್ಚಲು ತಿಂಗಳಿಗೆ ಹದಿನೈದು ರೂಪಾಯಿಗಳಿಗೆ ಒಪ್ಪಿಕೊಂಡು ಹೆಗಲ ಮೇಲೆ ಏಣಿ, ಕೈಯಲ್ಲಿ ಸೀಮೆಎಣ್ಣೆ ಡಬ್ಬ ಹಿಡಿದುಕೊಂಡು ಮೇಲ್ಕಂಡ ಕಂಟ್ರ್ಯಾಕ್ಟ್ ಕೆಲಸವನ್ನು ಮಾಡುತ್ತಿದ್ದ ಚಂದಣ್ಣ ಎಂಬುವರು ಕಂಪನಿಯನ್ನು ಸೇರಿದರು. ಅವರು ಅವಿದ್ಯಾವಂತರಾದರು. ತುಂಬಾ ಧೈರ್ಯಶಾಲಿಗಳು, ಸಾಹಸವಂತರು, ಯಾವ ಗಲಾಟೆಗಳಿಗೂ ಹೆದರುವವರಲ್ಲ ಇದನ್ನು ಕಂಡು ಕಂಪನಿಯ ಜವಾಬ್ದಾರಿಯನ್ನು ಗುಬ್ಬಿಯ ವರ್ತಕರು ಚಂದಣ್ಣನವರಿಗೆ ವಹಿಸಿಕೊಟ್ಟರು."[೨]

---

೧. ಬಿ.ವಿ.ವೈಕುಂಠರಾಜು, ಕನ್ನಡ ರಂಗಭೂಮಿ, ಸನಾತನ ಪ್ರಕಾಶನ ಮುದ್ರಾಲಯ, ಪು. ೮೦.

೨. ಗುಬ್ಬಿ ವೀರಣ್ಣ, ಕಲೆಯೇ ಕಾಯಕ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು, ಪು. ೩.

ಚಂದಣ್ಣನವರು ಉತ್ಸಾಹಪರರು, ಧೈರ್ಯಶಾಲಿಗಳು, ಚತುರರು ಎಂಬುದು ವೀರಣ್ಣನವರ ಈ ಮಾತುಗಳಿಂದ ಗೊತ್ತಾಗುತ್ತದೆ.

ಹೀಗೆ ಪ್ರಾರಂಭವಾದ ನಾಟಕ ಸಂಸ್ಥೆ ನಾಟಕ ಆಡಬೇಕಿತ್ತು. ಇದಕ್ಕಾಗಿ ಕಲಾವಿದರನ್ನು ಹೊಂದಿಸಿಕೊಳ್ಳಬೇಕಿತ್ತು. ಮೈಸೂರು-ಬೆಂಗಳೂರುಗಳನ್ನು ಬಿಟ್ಟರೆ ಎಲ್ಲೂ ಅವರು ನಾಟಕ ಆಡಿರಲಿಲ್ಲ.

ಊರಿನಲ್ಲೇ ಆಸಕ್ತರಾದ ನಟನಾ ಸಾಮರ್ಥ್ಯವುಳ್ಳವರನ್ನು ಆರಿಸಿ ನಾಟಕ ತಂಡವೊಂದನ್ನು ಕಟ್ಟಲಾಯಿತು. ಇವರ ಜತೆಗೆ ಅದೇ ಊರಿನ ಅಥವಾ ಸುತ್ತಮುತ್ತಲಿನ ಹಳ್ಳಿಗಳಿಂದ ಹಾಡುವವರನ್ನು ಹಾಗೂ ವಾದ್ಯಗಾರರನ್ನು ಜಮಾಯಿಸಲಾಯಿತು. ಇದನ್ನು ಆಡಲು ನಾಟಕವೊಂದು ಬೇಕಿತ್ತು. ಆಗ ನಾಟಕ ಪ್ರಕಾರ ಎನ್ನುವುದು ಇರಲಿಲ್ಲ. ಇದ್ದದ್ದು ಯಕ್ಷಗಾನ ಮಾತ್ರ ಅರಮನೆಯವರಿಗಾದರೋ ತಮ್ಮ ಆಸ್ಥಾನ ಕವಿಗಳಿಂದ ಸಂಸ್ಕೃತ ನಾಟಕಗಳನ್ನು ಕನ್ನಡಕ್ಕೆ ಅನುವಾದ ಮಾಡಿಕೊಳ್ಳುವ ಅವಕಾಶವಿತ್ತು. ಈ ಸೌಲಭ್ಯ ಗುಬ್ಬಿ ಕಂಪನಿಯವರಿಗೆ ಇರಲಿಲ್ಲ. ಆಗ "ಕನ್ನಡದಲ್ಲಿ ಹೆಚ್ಚು ಯಕ್ಷಗಾನವನ್ನೇ ಅಭ್ಯಾಸಕ್ಕೆ ಆರಿಸಿಕೊಂಡು ಮಾರ್ಗಶಿರ ದಶಮಿಯ ದಿನ ಈ ಸಂಘದ ಪ್ರಥಮ ನಾಟಕ 'ಕುಮಾರರಾಮಕಥೆ'ಯನ್ನು ಪ್ರದರ್ಶಿಸಲು ಏರ್ಪಾಡಾಯಿತು."

ಈ ಸಂಸ್ಥೆಯ ಅದೃಷ್ಟದಿಂದಲೇ ಏನೋ ಅರಸರಾದ 'ಚಾಮರಾಜೇಂದ್ರ ಒಡೆಯರ್' ಅವರು ಅದೇ ದಿನ ಆ ಮಾರ್ಗವಾಗಿ ಪ್ರಯಾಣ ಮಾಡುತ್ತಿದ್ದರು. ಗುಬ್ಬಿಯ ಸಮೀಪ ಹೋಗುತ್ತಿದ್ದಾಗ ವಾದ್ಯ ಗಾಯನಗಳ ಧ್ವನಿ ಅವರನ್ನು ಆಕರ್ಷಿಸಿತು. ಕುತೂಹಲದಿಂದ ಆ ಕಡೆ ಹೋದರು. ಅನಿರೀಕ್ಷಿತವಾಗಿ ಮಹಾರಾಜರು ಬಂದಿದ್ದರಿಂದ ಜನಗಳ ಉತ್ಸಾಹ ದ್ವಿಗುಣಗೊಂಡಿತು. ಮಹಾರಾಜರನ್ನು ಸಂಭ್ರಮದಿಂದ ಸ್ವಾಗತಿಸಿ ನಾಟಕವನ್ನು ತುಂಬಾ ಉತ್ಸಾಹದಿಂದ ಪ್ರದರ್ಶಿಸಿದರು. ನಾಟಕವನ್ನು ನೋಡಿ ಸಂತೋಷಪಟ್ಟ ಮಹಾರಾಜರು "ನಾಟಕವು ಬಹಳ ಚೆನ್ನಾಗಿ ಅಭಿನಯಿಸಲ್ಪಟ್ಟಿತು. ನಟರು ಉತ್ಸಾಹಶಾಲಿಗಳಿಂದ ತರುಣರೂ ಚತುರರೂ ಆದುದರಿಂದ ಈ ಗ್ರಾಮದಲ್ಲಿ ನಾಟಕ ಕಲೆಯು ವಿಶೇಷವಾಗಿ ಅಭಿವೃದ್ಧಿ ಹೊಂದುವ ಸೂಚನೆಗಳು ಕಾಣುತ್ತಿವೆ."[೧] ಎಂದು ಹಾರೈಸಿದರು. ಅಂದು ಪ್ರಾರಂಭವಾದ ಈ ಸಂಘ

೧. ಕನ್ನಡ ರಂಗಭೂಮಿ, ಶತಮಾನೋತ್ಸವ ಸ್ಮಾರಕ ಸಮಿತಿ ಗ್ರಂಥ, ಕ.ರಂ.ಶ.ಸ್ಮಾ. ಸಮಿತಿ, ಪು. ೩೪.

ನೂರು ವರ್ಷ ಉಳಿದುಕೊಂಡು ಬಂದದ್ದು ಕನಾಟಕದ ಅದೃಷ್ಟ. ಚಾಮರಾಜರ ಪ್ರೋತ್ಸಾಹದಿಂದ ಗುಬ್ಬಿ ಕಂಪನಿಗೆ ಇನ್ನಷ್ಟು ಹುರುಪು ಬಂತು. ರಾಜಪ್ರೋತ್ಸಾಹದ ಜೊತೆಗೆ ಮೊದಲ ಪ್ರದರ್ಶನದ ಯಶಸ್ಸು ಇವರಿಗೆ ಉತ್ತೇಜಕವಾಗಿತ್ತು.

ನಂತರ ಗುಬ್ಬಿಯಲ್ಲಿಯೇ ವಾಸಿಸುತ್ತಿದ್ದ ಶಿವಕಥಾ ವಿದ್ವಾನ್ ವೀರಪ್ಪ ಶಾಸ್ತ್ರಿಗಳನ್ನು ತಮಗೆ ಬೇಕಾದ ನಾಟಕಗಳನ್ನು ರಚಿಸಿಕೊಡಬೇಕೆಂದು ಕೇಳಿಕೊಂಡು ಅವರನ್ನು ತಮ್ಮ ಕಂಪನಿಗೆ ಸೇರಿಸಿಕೊಂಡರು.

"ಶಿವಕಥಾ ವಿದ್ವಾನ್ ವೀರಪ್ಪಶಾಸ್ತ್ರಿಗಳಿಂದ ಚೋರಕಥೆ, ಜಗನ್ಮೋಹನ ಜಾತ್ರೆ ಎನ್ನುವ ನಾಟಕಗಳನ್ನು ಬರೆಯಿಸಿ ಪ್ರದರ್ಶಿಸಿದರು. ಈ ನಾಟಕಗಳನ್ನು ರಚಿಸಿದಾಗ ವೀರಪ್ಪಶಾಸ್ತ್ರಿಗಳು ಅಂದಿನ ಪ್ರೇಕ್ಷಕರ ಅಭಿರುಚಿಯನ್ನು ಗಮನದಲ್ಲಿಟ್ಟುಕೊಂಡಿದ್ದಂತೆ ತಿಳಿದು ಬರುತ್ತದೆ."[೧]

ಮೊದಲು ಈ ಸಂಸ್ಥೆಯವರು ಬೀದಿಯಲ್ಲಿಯೇ ನಾಟಕಗಳನ್ನು ಪ್ರದರ್ಶಿಸುತ್ತಿದ್ದರು. ನಾಟಕವನ್ನಾಡಲು ಅಟ್ಟಿಗೆಯೊಂದನ್ನು ನಿರ್ಮಿಸಿಕೊಳ್ಳುತ್ತಿದ್ದರು. "ಮಾಲೀಕರಾದ ಚಂದಣ್ಣ ಮತ್ತು ಅಬ್ದುಲ್ ಅಜೀಜ್ ಸಾಹೇಬರು ಮೈಸೂರು ಬೆಂಗಳೂರಿನಲ್ಲಿ ಪ್ರದರ್ಶಿತವಾಗಿದ್ದ ನಾಟಕಗಳಲ್ಲಿ ಹೊಸ ರೀತಿಯ ಉಡುಪು, ಸೀನರಿ ಮತ್ತು ಅಲಂಕಾರ ಮೊದಲಾದವುಗಳನ್ನು ನೋಡಿ ನಮ್ಮ ನಾಟಕಗಳಲ್ಲಿಯೂ ಅವುಗಳನ್ನು ಅಳವಡಿಸಿಕೊಳ್ಳಬೇಕೆಂದು ನಿರ್ಧರಿಸಿದರು. ಅದರಂತೆ ಉದ್ಯಾನವನ, ಅರಣ್ಯ, ಬೀದಿ ಮೊದಲಾದವುಗಳನ್ನು ತೋರಿಸಲು ಬಣ್ಣದ ಪರದೆಗಳನ್ನು ಸಲಕರಣೆಗಳನ್ನು ಸಿದ್ಧಪಡಿಸಿಕೊಂಡರು ಈ ಸಿದ್ಧತೆಯೊಡನೆ 'ಚೋರಕಥೆ' ಪ್ರಾರಂಭವಾಯಿತು."[೨]

ನಾಟಕವು ಪ್ರಾರಂಭವಾಗಿ ಪರದೆಗಳು ತಾವಾಗಿ ಸುತ್ತಿಕೊಂಡು ಮೇಲಕ್ಕೆ ಹೋಗಿ ಕೆಳಗೆ ಬರುತ್ತಿರುವುದನ್ನು ನೋಡಿದ ಹಳ್ಳಿಯ ಜನರು ಮೂಗಿನ ಮೇಲೆ ಬೆರಳಿಟ್ಟುಕೊಂಡರಂತೆ ಕೆಲವರಂತೂ ಇದು ಇಂದ್ರಜಾಲ, ಮಹೇಂದ್ರಜಾಲವೇ ಇರಬೇಕು ಎಂದು ಯೋಚಿಸಿದರಂತೆ. ಈ ಪ್ರಯೋಗದಿಂದ ದೊರೆತ ಪ್ರೋತ್ಸಾಹದಿಂದ ಕಂಪನಿಯವರು ಸುತ್ತಮುತ್ತಲಿನ ಊರುಗಳಿಗೂ ಹೋಗಿ ನಾಟಕವಾಡಲು ಪ್ರಾರಂಭಿಸಿದರು. ಅನಂತರ ವೀರಪ್ಪಶಾಸ್ತ್ರಿಗಳೇ ಬರೆದ

---

೧. ಬಿ.ವಿ.ವೈಕುಂಠರಾಜು, ಕನ್ನಡ ರಂಗಭೂಮಿ, ಸನಾತನ ಪ್ರಕಾಶನ ಮುದ್ರಣಾಲಯ, ಪು. ೮೧.

೨. ಅದೇ, ಪು. ೧೧.

'ಗುಲೇಬಕಾವಲಿ'ಯನ್ನು ಪ್ರದರ್ಶಿಸಿದರು. ಅದು ಯಶಸ್ವಿಯಾಯಿತು. ಇವರು ಬೇಸಿಗೆಯಲ್ಲಿ ನಾಟಕಗಳನ್ನು ಆಡುತ್ತಿದ್ದರು. ಇದಕ್ಕೆ ಎರಡು ಕಾರಣಗಳಿರಬಹುದು. ಮಳೆಗಾಲದಲ್ಲಿ ಪ್ರವಾಸ ಮಾಡುವುದಕ್ಕೆ ಆಗುವುದಿಲ್ಲ ಎಂಬುದು ಒಂದು ಕಾರಣ, ಮತ್ತೊಂದು ಬಹುಶಃ ಇವರು ವ್ಯವಸಾಯವನ್ನು ಅವಲಂಬಿಸಿದ್ದರಿಂದ ಮಳೆಗಾಲದಲ್ಲಿ ವಯವಸಾಯದ ಕೆಲಸ ಇದ್ದಿರಬೇಕು.

"ಗುಬ್ಬಿ ಕಂಪನಿ ಕ್ರಮೇಣ ಸುತ್ತಮುತ್ತಲ ಊರುಗಳಲ್ಲಿ ನಾಟಕಗಳನ್ನು ಪ್ರದರ್ಶಿಸಲು ಪ್ರಾರಂಭಿಸಿತು. ಸಂಘಕ್ಕೆ ಆದಾಯವು ಬರಲು ಪ್ರಾರಂಭವಾಯಿತು. ಕಲಾವಿದರಿಗೆ ಸಂಬಳವನ್ನು ಕೊಡುವ ಪದ್ಧತಿಯನ್ನು ಪ್ರಾರಂಭಿಸಿದರು. ೧೫ ಮಂದಿ ಕಲಾವಿದರೂ ಸೇರಿ ಸಂಸ್ಥೆಯಲ್ಲಿ ೩೦ ಮಂದಿಯಿದ್ದರು."[೧] ಸಂಘದವರು ಬೇಸಗೆಯಲ್ಲಿ ಮಾತ್ರ ನಾಟಕಗಳನ್ನಾಡಿ ಮಳೆಗಾಲ ಬಂದೊಡನೆ ಗುಬ್ಬಿಗೆ ಹಿಂತಿರುಗುತ್ತಿದ್ದರು.

ನಾಟಕಗಳನ್ನು ನೋಡಲು ಬರುವ ಪ್ರೇಕ್ಷಕರಿಗೆ ಟಿಕೆಟ್ ಮೂಲಕ ಪ್ರವೇಶ ಎಂದಿದ್ದರಿಂದ ರಂಗಮಂದಿರವನ್ನು ಸ್ವಲ್ಪ ಉತ್ತಮಗೊಳಿಸಬೇಕಾಗಿತ್ತು. ಹೀಗಾಗಿ ಆದಷ್ಟು ಹೆಚ್ಚಾಗಿ ರಂಗ ಸಲಕರಣೆಗಳನ್ನು ಹೊಂದಿಸಿಕೊಳ್ಳಲಾಯಿತು. ಸ್ವಂತ ಥಿಯೇಟರ್ ಕಟ್ಟಿಕೊಳ್ಳಲು ಸಾಧ್ಯತೆಗಳು ಬಹಳ ಕಡಿಮೆಯಾಗಿದ್ದವು. ಆದ್ದರಿಂದ ಇದ್ದುದರಲ್ಲೇ ಉತ್ತಮ ರಂಗಮಂದಿರವನ್ನು ತಯಾರಿ ಮಾಡಬೇಕಿತ್ತು.

"ಸುಮಾರು ೫೦-೬೦ ಅಡಿ ಉದ್ದ, ೩೦ ಅಡಿ ಅಗಲದಲ್ಲಿ ಡೇರಂ ಹಾಕಿ ೧೮ ಅಡಿಗಳಷ್ಟು ರಂಗಭೂಮಿಗೆ ಇಟ್ಟುಕೊಂಡು, ೧೪ ಅಡಿಗಳಷ್ಟು ಕುರ್ಚಿ ಕ್ಲಾಸಿಗೆ ಹಳ್ಳ, ೧೨ ಅಡಿಗಳಷ್ಟು ಚಾಪೆಯ ಕ್ಲಾಸಿಗೆ, ೧೪ ಅಡಿ ಎರಡಾಣಿ ಕ್ಲಾಸಿಗೆ ವಿಂಗಡಿಸಲಾಗುತ್ತಿತ್ತು. ಅದಕ್ಕೆ ತಕ್ಕಂತೆ ಸರಿಯಾಗಿ ಸರ್ವೆ ಮರಗಳನ್ನು ಹೂಳಿಕೊಂಡು ಮೇಲಿನ ಛಾವಣಿಗೆ ಅಳತೆ ಪ್ರಕಾರ ಮರದ ತುಂಡುಗಳನ್ನು ಕಟ್ಟಿ ಡೇರಾ ಎಳೆದುಕೊಂಡು ಪ್ರತಿ ಡೇರಾ ತುಂಡಿಗೆ ಮೂಟೆಯ ಹುರಿಯಿಂದ ಟಂಕು ಹಾಕಲಾಗುತ್ತಿತ್ತು. ಸುತ್ತಲೂ ಗೋಣಿ ತಟ್ಟಿನಿಂದ ೮-೧೦ ಅಡಿಗಳಿಗೆ ಒಂದರಂತೆ ಗಳ ನೆಟ್ಟು ಕಾಪೌಂಡಿನಂತೆ ಏರ್ಪಾಟು ಮಾಡುತ್ತಿದ್ದರು."[೨]

---

೧. ಡಾ.ಎಚ್.ಕೆ.ರಂಗನಾಥ್, ವೃತ್ತಿ ರಂಗ ದರ್ಶನ, ಲಕ್ಷ್ಮೀ ಮುದ್ರಣಾಲಯ, ಚಾಮರಾಜ ಪೇಟೆ, ಬೆಂಗಳೂರು, ಪು. ೮೫

೨. ಹೆಚ್.ಕೆ. ರಂಗನಾಥ, ಕರ್ನಾಟಕ ರಂಗಭೂಮಿ, ವೆಂಕಟೇಶ್ವರ ಪ್ರಿಂಟರ್ಸ್, ಕೆಂಪೇಗೌಡ ನಗರ, ಬೆಂಗಳೂರು, ಪು. ೧೬೫.

"ಚೋರಕಥೆ" ಪ್ರದರ್ಶನ ದೊರಕಿಸಿಕೊಟ್ಟ ಜನಪ್ರಿಯತೆಯಿಂದ ಕಂಪನಿ-ಯವರು ವೀರಪ್ಪ ಶಾಸ್ತ್ರಿಗಳಿಂದ 'ಗುಲೇಬಕಾವಲಿ' 'ಜಗನ್ಮೋಹನಚರಿತ್ರೆ' ನಾಟಕಗಳನ್ನು ಸಿದ್ಧಪಡಿಸಿಕೊಂಡರು. 'ಗುಲೇಬಕಾವಲಿ'ಯಲ್ಲಿ 'ಚೋರಕಥೆ' ಯಂತೆಯೇ ಜನಪ್ರಿಯ-ವಾಯಿತು. 'ಮಿಠಾಯಿ ಸಾಹುಕಾರ್' ಎಂಬ ಹಾಸ್ಯ ಪ್ರಧಾನವಾದ ದೃಶ್ಯವನ್ನು ಇವರು ನಾಟಕದ ಅಂತ್ಯದಲ್ಲಿ ಸೇರಿಸಿಕೊಳ್ಳುತ್ತಿದ್ದರು."[೧]

ಕನಾಟಕದಲ್ಲಿ ಆಧುನಿಕ ರಂಗಭೂಮಿ ಅಸ್ತಿತ್ವಕ್ಕೆ ಬರಲು ಪಾರ್ಸಿ ಕಂಪನಿ ಹಾಗೂ ಮಹಾರಾಷ್ಟ್ರದ ಕಂಪನಿ ಮುಖ್ಯ ಕಾರಣ ಎನ್ನುವುದಕ್ಕೆ ಈಗಾಗಲೇ ನೋಡಿರುತ್ತೇವೆ. ಇವರು ಕರ್ನಾಟಕದಲ್ಲಿ ಬಂದು ಆಡಿದ ನಾಟಕ ಪ್ರಯೋಗಗಳ ಪ್ರಭಾವ ಜನರಲ್ಲಿದ್ದ ಧರ್ಮದಲ್ಲಿನ ಶ್ರದ್ಧೆ, ವಿನೋದ ಪ್ರವೃತ್ತಿ ಇವೇ ಮೊದಲಾದವು. ಈ ಮೇಲೆ ತಿಳಿಸಿದ ನಾಟಕ ಪ್ರಯೋಗಗಳಿಗೆ ಕಾರಣವೆಂದು ಊಹಿಸಬಹುದು.

ನಾಟಕಗಳಿಗೆ ಹೇಗೆ ಪಾರ್ಸಿ ಕಂಪನಿ ಸ್ಫೂರ್ತಿಯೂ ಹಾಗೆಯೇ ರಂಗಸಜ್ಜಿಕೆ ವಿನ್ಯಾಸಗಳಿಗಾಗಿಯೂ ಅದೇ ಸ್ಫೂರ್ತಿ. ನಾಟಕ ಪ್ರದರ್ಶನವೂ ಅವರಿಗೆ ಹಣ ಸಂಪಾದನೆಗಾಗಿಯೇ ಅಂದ ಮೇಲೆ ಅವರು ಆಕರ್ಷಣೀಯವಾದ ರಂಗಸಜ್ಜಿಕೆ ರಂಗವಿನ್ಯಾಸಗಳನ್ನು ತಮ್ಮ ನಾಟಕ ಪ್ರದರ್ಶನಗಳಿಗೆ ಉಪಯೋಗಿಸುತ್ತಿದ್ದರು. ಗುಬ್ಬಿ ಕಂಪನಿಯು ಇವರ ಪ್ರಭಾವಕ್ಕೆ ಒಳಗಾಗದೆ ಇರಲಿಲ್ಲ. ಹೀಗೆ ಗುಬ್ಬಿ ಕಂಪನಿ ಅವರನ್ನು ಅನುಕರಿಸಲು ಹೋಗಿ ತನ್ನ ನಾಟಕಗಳಿಗೆ ರಂಗಸಜ್ಜಿಕೆ ಮಾಡಿಕೊಂಡರು.

ಉಡುಗೆ ತೊಡುಗೆ ಅಲಂಕಾರಗಳಿಗೂ ಪಾರ್ಸಿ ಕಂಪನಿ ನಾಟಕಗಳೇ ಸ್ಫೂರ್ತಿಯಾಗಿದ್ದವು. ಆ ಕಂಪನಿಯನ್ನೇ ಇವರು ಈ ವಿಚಾರದಲ್ಲೂ ಅನುಕರಣ ಮಾಡಿಟ್ಟಿರಬಹುದು. ಇಲ್ಲಿ ಸ್ತ್ರೀ ಪಾತ್ರಗಳಿಗೆ ಅಲ್ಲೇ ಎರವಲು ಪಡೆಯುತ್ತಿದ್ದುದು ಉಂಟು. "ಆಗಿನ ಕಾಲದಲ್ಲಿ ನಾಟಕ ನೋಡಲು ಬಂದಿದ್ದ ಸ್ತ್ರೀಯರು ಕಣ್ಣಿಗೆ ಚೆನ್ನಾಗಿ ಕಾಣಿಸುವ ಆಭರಣ ಅಂದರೆ ಅಡ್ಡಿಕೆ, ಚೋಮಾಲಿ, ಗುಂಡಿನಸರ ವಗೈರೆ ಆಭರಣಗಳನ್ನು ಹಾಕಿಕೊಂಡು ಬಂದಿದ್ದರೆ ಅವುಗಳನ್ನು ಸಹ ತರಿಸಿಕೊಂಡು ಧರಿಸಿ ಪಾತ್ರ ಮಾಡುತ್ತಿದ್ದವು. ಆಗ ಅದನ್ನು ಕೊಟ್ಟಿದ್ದ ಸ್ತ್ರೀಯರು ರಂಗಭೂಮಿಯಲ್ಲಿ ತಾವು ಧರಿಸಿದ್ದ ಅವರ ಆಭರಣಗಳನ್ನು ನೋಡಿ ಪಕ್ಕದಲ್ಲಿದ್ದ ಇತರರಿಗೆ ಅವುಗಳನ್ನು ತೋರಿಸಿ

---

೧. ಗುಬ್ಬಿವೀರಣ್ಣ, ಕಲೆಯೇ ಕಾಯಕ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು, ಪು. ೧೨.

ಹೆಮ್ಮೆ ಪಡುತ್ತಿದ್ದರು. ಈಗಿನಂತೆ ಆಗ ಹೇರಳವಾಗಿ ನಾಟಕದ ಆಭರಣಗಳು ದೊರೆಯುತ್ತಿರಲಿಲ್ಲ."[೧]

ಆಗಿನ ನಾಟಕಾಭಿನಯದ ಬಗ್ಗೆ ಹೆಚ್ಚು ಹೇಳುವಂಥದೇನೂ ಇಲ್ಲ, ಆಗ ನಿರ್ದೇಶಕ ಎನ್ನುವ ವ್ಯಕ್ತಿಯೇ ಇರಲಿಲ್ಲ. ನಾಟಕವನ್ನು ಬರೆದವರು ಇಲ್ಲವೇ ಹೆಚ್ಚಿನ ಅನುಭವ ಇದ್ದವರು ಸ್ವಲ್ಪ ಹೇಳಿಕೊಟ್ಟಿರಬಹುದು. ಆಗಿನ ನಟರು ಮಾತನ್ನು ಬಾಯಿಪಾಠ ಮಾಡಿ ಪ್ರೇಕ್ಷಕರ ಮುಂದೆ ಒಪ್ಪಿಸುತ್ತಿದ್ದರೆಂದು ಮಾತ್ರ ಹೇಳಬಹುದು. ಇನ್ನು ಚಲನವಲನಗಳು ಪಾತ್ರಧಾರಿಗಳು ತಮಗೆ ಇಷ್ಟಬಂದರೆ ರಂಗದ ಮೇಲೆ ಓಡಾಡುತ್ತಿದ್ದಿರಬಹುದು. ಅಭಿಯದಲ್ಲಿ ಸಾಕಷ್ಟು ಪ್ರಮಾದಗಳಾಗುತ್ತಿದ್ದುದುಂಟು. ಕೆಲವು ಉದಾಹರಣೆಯನ್ನು ನೋಡಬಹುದು. ಅಂದು ಸ್ತ್ರೀ ಪಾತ್ರಗಳನ್ನು ಸ್ತ್ರೀಯರು ವಹಿಸುತ್ತಿರಲಿಲ್ಲ. ಅದನ್ನು ಗಂಡಸರೇ ತಮ್ಮ ನಲವತ್ತನೆಯ ವಯಸ್ಸಿನವರೆಗೂ ಮಾಡಬೇಕಾಗಿತ್ತು. ಇದರಿಂದ ಹಾಸ್ಯಾಸ್ಪದವಾಗಿ ತೋರುತ್ತಿದ್ದುದುಂಟು. ಅಭಿನಯ-ದಲ್ಲಿ ಒಮ್ಮೊಮ್ಮೆ ಹೀಗೆ ಅಭಾಸಗಳಾಗುತ್ತಿದ್ದುವಾದರೂ ಹಾಸ್ಯ ಸನ್ನಿವೇಶಗಳನ್ನು ಚೆನ್ನಾಗಿ ಚಿತ್ರಿಸುತ್ತಿದ್ದರು ಎನ್ನುವುದಕ್ಕೆ ಆಧಾರಗಳಿವೆ. ಅಂದು ಗುಬ್ಬಿ ಕಂಪನಿಯವರು ಆಡುತ್ತಿದ್ದ ಜನಪ್ರಿಯ ನಾಟಕಗಳಲ್ಲಿ ಪಾಂಡವ ವಿಜಯವೂ ಒಂದು.

ಒಟ್ಟಿನಲ್ಲಿ ಆಗಿನ ಅಭಿನಯದ ಬಗ್ಗೆ ಇಷ್ಟು ಹೇಳಬಹುದು. ಪಾತ್ರ ತನ್ನ ಮಾತು ಇದ್ದಾಗ ಮಾತ್ರ ಚಲಿಸುವುದು. ಇಲ್ಲದ ವೇಳೆಯಲ್ಲಿ ಸುಮ್ಮನಿರುವುದು. ಮುಖ್ಯ ಗಂಡು ಪಾತ್ರಗಳು ಪೀಠದ ಮೇಲೆ ಕುಳಿತಾಗ ಅನಗತ್ಯವಾಗಿ ಕಾಲನ್ನು ಅಲ್ಲಾಡಿಸಿ ಪದೇ ಪದೇ ಮೀಸೆಯ ಮೇಲೆ ಕೈಹಾಕುವುದು, ಹೆಣ್ಣು ಪಾತ್ರವಾದರೆ ಲಜ್ಜೆಯಿಂದಿರುವುದು, ಹಾಸ್ಯ ಪಾತ್ರಗಳಾಗಿದ್ದರೆ ಅರ್ಥವಿಲ್ಲದೇ ರಂಗದ ಮೇಲೆ ಓಡಾಡುವುದು ಮುಖವಿಕಾರವಾಗಿ ಮಾಡುವುದು ಇತ್ಯಾದಿ.

ಕಂಪನಿ ತನ್ನ ಕೆಲಸವನ್ನು ಸಮರ್ಪಕವಾಗಿ ಮಾಡಿಕೊಂಡು ಹತ್ತು ಹನ್ನೆರಡು ವರ್ಷಗಳ ಕಾಲ ಕೆಲಸ ಮಾಡಿತ್ತು. ಆವರೆಗೆ ಕಂಪನಿಯಲ್ಲಿ ಗುಬ್ಬಿಯವರು ಮತ್ತು ಗುಬ್ಬಿಗೆ ಬಹಳ ಹತ್ತಿರದವರು ಮಾತ್ರ ಕೆಲಸ ಮಾಡುತ್ತಿದ್ದರು. ಯಾವಾಗ ಕಂಪನಿಯ ಚಟುವಟಿಕೆಗಳು ವಿಸ್ತರಿಸಿ ಕಂಪನಿಯ ನಾಟಕಗಳು ಜನಪ್ರಿಯವಾದವೋ ಆಗ ದೂರದವರನ್ನು ಕಂಪನಿ ಆಕರ್ಷಿಸಿತು. ಆಡುತ್ತಿದ್ದ ನಾಟಕಗಳ ಸಂಖ್ಯೆ ಹೆಚ್ಚಿತು,

೧. ಡಾ. ಸಿಂಧುವಳ್ಳಿ ಅನಂತಮೂರ್ತಿ, ಗುಬ್ಬಿ ಕಂಪನಿ, ಮೈ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, ಪು. ೭೨.

ಆದಾಯವೂ ಹೆಚ್ಚಾಯಿತು, ನಂತರ ವಾದ್ಯಗಾರರ ಸಂಖ್ಯೆ ಹೆಚ್ಚಾಯಿತು. ಆಗಲೂ ಜಾತಿ ಪಂಗಡಗಳಿಗೆ ಹೆಚ್ಚಿನ ಮಹತ್ವವಿತ್ತು. ಕಂಪನಿ ಮನೆಯಲ್ಲಿ ಬ್ರಾಹ್ಮಣರಿಗೆ, ವೀರಶೈವರಿಗೆ ಹಾಗೂ ಜೈನರಿಗೆ ಪ್ರತ್ಯೇಕ ಅಡುಗೆ ವ್ಯವಸ್ಥೆ ಇತ್ತು.

"೧೯೦೦ರ ಹೊತ್ತಿಗೆ ಕಂಪನಿಯ ಸಂಖ್ಯೆ ಮೂವತ್ತೈದಕ್ಕೆ ಏರಿ ತಿಂಗಳಿಗೆ ಸರಾಸರಿ ಒಂದು ಸಾವಿರ ರೂಪಾಯಿ ಖರ್ಚಾಗುತ್ತಿತ್ತು. ಈ ಖರ್ಚಿನಲ್ಲಿ ಕಂಪನಿಯವರ ಸಂಬಳ ಊಟದ ಖರ್ಚು ಇತರ ಖರ್ಚು ಸೇರಿದ್ದವು. ಕಂಪನಿಯ ಆದಾಯ ಆಗ ಒಂದು ನಾಟಕಕ್ಕೆ ನೂರೈವತ್ತು ರೂಪಾಯಿಗಳಿಂದ ಮುನ್ನೂರು ರೂಪಾಯಿಗಳವರೆಗೂ ಇತ್ತು."[೧]

ಈ ಸಮಯದಲ್ಲಿ ಕಂಪನಿಯನ್ನು ಸೇರಿದ ಇಬ್ಬರು ಮಹಿಳೆಯರಿಂದ ಹೆಣ್ಣು ಪಾತ್ರಗಳಿಗೆ ಇದ್ದ ಕೊರತೆಯನ್ನು ತುಂಬಿದರು. ಒಟ್ಟಿನಲ್ಲಿ ಕಂಪನಿಗೆ ನಟರನ್ನು ಸೇರಿಸಿಕೊಳ್ಳಲು ಪ್ರಾರಂಭಿಸಿದ್ದು ಸ್ವಲ್ಪಕಾಲದ ಅನಂತರ ಸ್ತ್ರೀ ಪಾತ್ರಗಳಿಗೆ ಸ್ತ್ರೀಯರೇ ಇದ್ದರೆ ಒಳ್ಳೆಯದು ಎಂದು ತಿಳಿದು ಅವರನ್ನೇ ಆರಿಸಿದ್ದು ಕಂಪನಿಯ ವ್ಯವಸ್ಥಾಪಕರ ಬುದ್ಧಿವಂತಿಕೆಯನ್ನು ಸೂಚಿಸುತ್ತದೆ. ಇದರಿಂದ ಇವರ ನಾಟಕಗಳಿಗೆ ಪ್ರೇಕ್ಷಕರಿಂದ ಹೆಚ್ಚಿನ ಪ್ರೋತ್ಸಾಹ ಸಿಕ್ಕಿದ್ದಿರಬೇಕು.

ಕಾಲಧರ್ಮಕ್ಕೆ ಅನುಗುಣವಾಗಿ ಕಂಪನಿ ಜನರಿಗೆ ತಕ್ಕ ವ್ಯವಸ್ಥೆಯನ್ನು ಅಂದರೆ ಊಟ, ಸಂಬಳ ಈ ಬಗೆಗೆ ಸಮರ್ಪಕವಾದ ವ್ಯವಸ್ಥೆ ಮಾಡಿತು. ಈವರೆಗೆ ಆಡುತ್ತಿದ್ದ ನಾಟಕಗಳ ಜೊತೆಗೆ ಸದಾರಮೆ, ಪ್ರಹ್ಲಾದ ಚರಿತ್ರೆ, ಪ್ರಭಾಮಣಿ ವಿಜಯ, ಸುಭದ್ರ ಪರಿಣಯ ಮೊದಲಾದ ನಾಟಕಗಳನ್ನು ಸೇರಿಸಿಕೊಳ್ಳಲಾಯಿತು. ಈ ರೀತಿ ಕಂಪನಿ ತನ್ನ ಚಟುವಟಿಕೆಗಳನ್ನು ಮುಂದುವರಿಸಿತು. ಕಂಪನಿ ಆದಾಯವು ಹೆಚ್ಚಿತು. ಆ ವೇಳೆಗೆ ಕಂಪನಿಗೆ ಹನ್ನೆರಡು ವರ್ಷ ಆಗಿತ್ತು. ಸುಮಾರು ಐದರಿಂದ ಆರು ವರ್ಷ ವಯಸ್ಸಿನ ಹುಡುಗ ವೀರಣ್ಣ ಗುಬ್ಬಿ ಕಂಪನಿಯನ್ನು ಸೇರಿದ್ದು ಆ ಸಮಯದಲ್ಲಿಯೇ.

---

೧. ಡಾ. ಸಿಂಧುವಳ್ಳಿ ಅನಂತಮೂರ್ತಿ, ಮೈ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, ಪು. ೭೩.

ಅಧ್ಯಾಯ – ೫

ಗುಬ್ಬಿ ಕಂಪನಿಗೆ ವೀರಣ್ಣನವರ ಪ್ರವೇಶ ಮತ್ತು ಅವರ ಜೀವನ ಚರಿತ್ರೆ

ಶ್ರೀಮಾನ್ ಗುಬ್ಬಿ ವೀರಣ್ಣನವರು ನಮ್ಮ ಶ್ರೇಷ್ಠ ನಟರಲ್ಲಿ ಒಬ್ಬರು. ಇಂದಿನ ಕನ್ನಡ ರಂಗಭೂಮಿಯ ಇತಿಹಾಸವನ್ನು ಒಂದು ರೀತಿಯಿಂದ ಅವರ ಜೀವನವೇ ಸಂಕೇತಿಸಿದೆ. "ಕನ್ನಡದ ರಂಗಭೂಮಿಯು ಸ್ಥಾಪನೆಯಾಗುವ ದಿನಗಳಲ್ಲಿ ಅವರು ತಮ್ಮ ಕಾರ್ಯವನ್ನು ಪ್ರಾರಂಭಿಸಿದರು. ಅಂತರ್ ಪ್ರಾಂತೀಯ ಕೀರ್ತಿಯನ್ನು ಗಳಿಸಿ ತಮ್ಮ ಜೀವನವನ್ನೇ ರಂಗಭೂಮಿಯ ಸೇವೆಯಲ್ಲಿ ಅವರು ಸವೆಸಿದ್ದಾರೆ"[೧] ಎಂದು ವಿ.ಕೃ.ಗೋಕಾಕ್ ಒಂದೆಡೆ ಹೇಳುತ್ತಾರೆ.

ವೀರಣ್ಣನವರ ಕಥೆಯೇ ಗುಬ್ಬಿ ಕಂಪನಿಯ ಕಥೆ. ಗುಬ್ಬಿ ಕಂಪನಿಯ ಕಥೆಯೇ ಕನ್ನಡ ರಂಗಭೂಮಿ ಕಥೆ. ಕನ್ನಡ ರಂಗಭೂಮಿ ಅಸ್ತಿತ್ವಕ್ಕೆ ಬಂದು ನೂರು ವರ್ಷಗಳಿಗಿಂತ ಸ್ವಲ್ಪ ಹೆಚ್ಚು ಕಾಲವಾಗಿದೆ. ಕಂಪನಿ ಕೆಲವೇ ವರ್ಷಗಳಲ್ಲಿ ತನ್ನ ಶತಮಾನೋತ್ಸವವನ್ನು ಆಚರಿಸಿಕೊಂಡಿತ್ತು. ಆದ್ದರಿಂದ ಕನ್ನಡ ಆಧುನಿಕ ರಂಗಭೂಮಿಯ ಕಥೆ ಗುಬ್ಬಿ ಕಂಪನಿಯ ಹಾಗೂ ವೀರಣ್ಣನವರ ಕಥೆಯೇ ಆಗಿದೆ.

ಕಂಪನಿಗೆ ಪ್ರವೇಶಿಸಿದಾಗ ಬಾಲಕ ವೀರಣ್ಣನವರಿಗೆ ಕೇವಲ ಆರು ವರ್ಷ ವಯಸ್ಸು. ಕಂಪನಿಗೆ ಹನ್ನೆರಡು ವರ್ಷಗಳು. ವೀರಣ್ಣ ಗುಬ್ಬಿ ಕಂಪನಿ ಸೇರಿದ್ದು ದೊಡ್ಡ ನಟನಾಗಿ ಪ್ರಖ್ಯಾತನಾಗುವ ಹಂಬಲದಿಂದಲ್ಲ. ಕೇವಲ ಜೀವನೋಪಾಯಕ್ಕಾಗಿ ಮಗನನ್ನು ಸಾಕಲು ಕಷ್ಟವಿದ್ದ ತಾಯಿ ಬಾಲಕ ವೀರಣ್ಣನನ್ನು ಕಂಪನಿಗೆ ಸೇರಿಸಿದಳು. ಆದರೆ ವಿಧಿ ಲೀಲೆ ಬಲ್ಲವರಾರು? ಮುಂದಿನ ಇತಿಹಾಸವೇ ಬೇರೆಯಾಯಿತು. ಬಾಲಕ ವೀರಣ್ಣ 'ಗುಬ್ಬಿವೀರಣ್ಣ'ನೆಂದೇ ಪ್ರಸಿದ್ಧನಾಗಿ ರಂಗಭೂಮಿಯ ಧೃವತಾರೆಯಾಗಿ ಬೆಳಗಿದನು. ಕನ್ನಡ ಕಂಪನಿ ನಾಟಕಗಳ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬೇಕಾದ ಸಾಧನೆ ಮಾಡಿ ತೋರಿಸಿದರು.

"ಕಂಪನಿಗೆ ಸೇರಿದ ಹೊಸತರಲ್ಲಿ ಬಾಲಕ ವೀರಣ್ಣನಿಗೆ ಚಿಕ್ಕ ಪುಟ್ಟ ಪಾತ್ರಗಳು ದೊರೆತವು. ಹುಡುಗ ತುಂಬ ಚೂಟಿ. ತನ್ನ ಪಾತ್ರಗಳನ್ನು ಶ್ರದ್ಧೆಯಿಂದ ಅಭಿನಯಿಸಿ ಜನರ ವಿಶ್ವಾಸ ಗಳಿಸಿದ. ಅಲ್ಲೇ ಅವನಿಗೆ ಅಕ್ಷರಾಭ್ಯಾಸವಾಯ್ತು. ಮುಂದೆ

---

೧. ವಿ.ಸೀತಾರಾಮಯ್ಯ, 'ಹಿರಿಯರು ಗೆಳೆಯತು, ಗೀತಾಬುಕ್ ಹೌಸ್, ಮೈಸೂರು, ಪು. ೪೩.

ಕಲಿತಿದ್ದೆಲ್ಲಾ ಅಲ್ಲೇ ಅಭಿನಯದೊಂದಿಗೆ ಸಂಗೀತಾಭ್ಯಾಸವೂ ಆಯ್ತು. ವಾದ್ಯ ನುಡಿಗಳನ್ನು ಕಲಿತದ್ದಾಯಿತು ಚೂಟಿ ಹುಡುಗ ಹಲವು ಕಾರ್ಯಗಳಲ್ಲಿ ಪಳಗಿದನು."[೧]

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿ ೧೮೯೦ರ ಜೂನ್ ತಿಂಗಳಲ್ಲಿ ಜನಿಸಿದರು. ಇವರ ತಂದೆ ಹಂಪಣ್ಣನವರು. ಚಿಲ್ಲರೆ ಅಂಗಡಿ ಅಂದರೆ ದಿನಸಿ, ಕಬ್ಬಿಣದ ಸಾಮಾನುಗಳ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರು. ಅಲ್ಲದೆ ಅವರೇ ಸ್ವತಃ ಬೀಗಗಳನ್ನು ತಯಾರು ಮಾಡುತ್ತಿದ್ದರು. ಅವು ಗುಬ್ಬಿ ಬೀಗಗಳೆಂದೇ ಹೆಸರಾಗಿದ್ದವು.

ಗುಬ್ಬಿ ವೀರಣ್ಣನವರೇ ಹೇಳುವ ಹಾಗೆ "ನನ್ನ ಮಾತೃಶ್ರೀಯವರಾದ ರುದ್ರಾಂಬೆಯವರೊಂದಿಗೆ ಗುಬ್ಬಿಯ ಆಸಿಪೇಟೆಯಲ್ಲಿರುವ ಸ್ವಂತ ಮನೆಯಲ್ಲಿ ಅವರು ವಾಸ ಮಾಡುತ್ತಿದ್ದಾಗ ನಾನು ಹುಟ್ಟಿದುದಾಗಿ ತಿಳಿಯಿತು. ನಾನು ಹುಟ್ಟಿದ ನಂತರ ನನ್ನ ಮಾತೃಶ್ರೀಯವರು ಅನಾರೋಗ್ಯ ಹೊಂದಿದುದರಿಂದ ನನ್ನ ತೀರ್ಥರೂಪರವರು ಎರಡನೇ ಲಗ್ನವಾದರು. ಅವರು ಎರಡನೇ ಲಗ್ನವಾದಾಗ ಅವರಿಗೆ ನನ್ನ ಇಬ್ಬರು ಅಕ್ಕಂದಿರು ಮತ್ತು ನಾನು ಒಟ್ಟು ಮೂರು ಜನ ಮಕ್ಕಳಿದ್ದೆವು. ಎರಡನೇ ಲಗ್ನವಾದ ನಂತರ ತೀರ್ಥರೂಪರವರು ನನ್ನ ತಾಯಿಯವರ ಆರೋಗ್ಯ ಸರಿಹೋಗದಿದ್ದುದರಿಂದಲೂ ತಮ್ಮ ಎರಡನೇ ಕುಟುಂಬದ ಪ್ರೇಮ ಪಾಶಕ್ಕೆ ಸಿಕ್ಕಿದ್ದರಿಂದ ನನ್ನ ಮಾತೃಶ್ರೀಯವರ ಮತ್ತು ನಮ್ಮಗಳ ಪೋಷಣೆಯನ್ನು ಸರಿಯಾಗಿ ಮಾಡದೆ ಕೈಬಿಟ್ಟರು."[೨]

ಅವರ ತಾಯಿ ಅವರುಗಳನ್ನು ಸಾಕಿ ಸಲಹಲು ಬಂದು ಬಳಗದವರಲ್ಲಿ ಬೇಡಿ, ಕೂಲಿ ಕೆಲಸ ಮಾಡಿ ಜೀವಿಸಬೇಕಾಗಿ ಬಂದಿತು. ಹೀಗೆ ಮೂರು ನಾಲ್ಕು ವರ್ಷಗಳವರೆಗೆ ಸಾಗಿತು. ಅವರು ಕೂಲಿಮಠಕ್ಕೆ ಸೇರಬೇಕಾಗಿ ಬಂದಿತು. ಬೆಳಗ್ಗೆ ಕೂಲಿಮಠಕ್ಕೆ ಹೋಗಬೇಕಾದರೆ ರಾಗಿಮುದ್ದೆ ಮಾಡಿದ ಪಾತ್ರೆಯ ತಳದಲ್ಲಿದ್ದ ಸೀಕುಬಾಕನ್ನು ಜೇಬಿಗೆ ತುಂಬಿ ಕಳುಹಿಸುತ್ತಿದ್ದರು.

ಆ ವೇಳೆಗಾಗಲೇ ಗುಬ್ಬಿ "ಶ್ರೀ ಚನ್ನಬಸವೇಶ್ವರಸ್ವಾಮಿ ಕೃಪಾಪೋಷಿತ ನಾಟಕಸಭಾ ಎಂಬ ಹೆಸರಿನಲ್ಲಿ ೧೮೮೪ರಲ್ಲಿ ಪ್ರಾರಂಭವಾಗಿದ್ದ ನಾಟಕ ಸಂಸ್ಥೆಯ

೧. ಹೆಚ್.ಕೆ.ರಂಗನಾಥ್, ವೃತ್ತಿರಂಗದರ್ಶನ, ಲಕ್ಷ್ಮೀ ಮುದ್ರಣಾಲಯ, ಚಾಮರಾಜಪೇಟೆ, ಬೆಂಗಳೂರು, ಪು. ೮೭

೨. ಜಿ.ಹೆಚ್.ವೀರಣ್ಣ, (ಗುಬ್ಬಿ ವೀರಣ್ಣ) ಕಲೆಯೇ ಕಾಯಕ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಾಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು, ಪು. ೧

ಗುಬ್ಬಿಯ ಹತ್ತಿರ ಪರಸ್ಥಳದಲ್ಲಿ ನಾಟಕಮಾಡಿಕೊಂಡು ಬರುತ್ತಿದ್ದರು. ವೀರಣ್ಣನವರ ಚಿಕ್ಕಪ್ಪನವರಾದ ಶ್ರೀ ವೀರಣ್ಣನೆಂಬುವರು ವ್ಯವಸ್ಥಾಪಕರಾಗಿ ನೌಕರಿಗೆ ಸೇರಿ-ಕೊಂಡಿದ್ದರು." [೧]

ಆಗ ಗುಬ್ಬಿಯಲ್ಲಿ ಮುನಿಸಿಪಾಲಿಟಿ ಲಾಂದ್ರಗಳಿಗೆ ಎಣ್ಣೆ ಹಾಕಿ ದೀಪವನ್ನು ಹಚ್ಚುತ್ತಿದ್ದ ಚಂದಣ್ಣನವರೇ ಕಾಲಕ್ರಮೇಣ ಆ ಕಂಪನಿಯ ಮಾಲೀಕರಾದರು.

ಕೆಲವು ತಿಂಗಳು ಕಳೆದ ನಂತರ ರಂಗಭೂಮಿಗೆ ಪ್ರವೇಶಿಸಲು ಅಭ್ಯಾಸ ಮಾಡಿಸಿ ಲಂಗೋಟಿ ಹಾಕಿ ರಂಗಭೂಮಿಗೆ ಕಳುಹಿಸುತ್ತಿದ್ದರು. ಅಲ್ಲದೆ "ಪುಟ್ಟ ಪುಟ್ಟ ಮಕ್ಕಳ ಪಾತ್ರ ಕೊಡುತ್ತ ಬಂದರು. ಆ ನಾಟಕಗಳಲ್ಲಿ ಚಿತ್ರಶೇಖರ, ಸೋಮಶೇಖರ ನಾಟಕದಲ್ಲಿ ಹೆಚ್ಚು ಹಾಸ್ಯಕ್ಕೆ ಅವಕಾಶವಿದ್ದುದರಿಂದ ಜನರ ಮೆಚ್ಚುಗೆ ಪ್ರಾಶಸ್ತ್ಯಕ್ಕೆ ಬಂದ ಬಹು ಮುಖ್ಯ ನಾಟಕವಾಗಿತ್ತು. ಅದರಲ್ಲಿ ನಾನು ಅಗಸನ ಮಗ 'ಡೋಲ' ಎಂಬ ಹುಡುಗನ ಪಾತ್ರವನ್ನಲ್ಲದೆ ಬಾಲ ಚಿತ್ರಶೇಖರ, ಬಾಲಚಿಲ್ಲಾಳ, ಸತ್ಯರಥ, ಲೋಹಿತಾಶ್ವ, ಬ್ರಾಹ್ಮಣ ಹುಡುಗನ ಪಾತ್ರಗಳನ್ನು ಕ್ರಮೇಣ ಅಭಿನಯಿಸಲು ಪ್ರಾರಂಭಿಸಿದೆ. ಜನಗಳು ಆ ಪಾತ್ರವನ್ನು ಬಹುವಾಗಿ ಮೆಚ್ಚಿದರು."[೨]

ವೀರಣ್ಣ ಯುವಕರಾಗುವ ವೇಳೆಗೆ ತಮ್ಮ ಅಭಿನಯ ಸಾಮರ್ಥ್ಯ ಹಾಗೂ ಚುರುಕಿನಿಂದ ಮಾಲೀಕರ ಮನಸ್ಸನ್ನು ಗೆದ್ದುಕೊಂಡಿದ್ದರು. ಆ ವೇಳೆಗಾಗಲೇ ಇವರು 'ಸದಾರಮೆ' ನಾಟಕದಲ್ಲಿ ಆದಿಮೂರ್ತಿ, ಕಳ್ಳ, ಸಾಬಿ ಈ ಮೂರು ಪಾತ್ರಗಳನ್ನು ವಹಿಸುತ್ತಿದ್ದರು. "ಸದಾರಮೆ ಗುಬ್ಬಿ ಕಂಪನಿಯ ಬಹು ಜನಪ್ರಿಯ ನಾಟಕವಾಗಿತ್ತು. ಈ ನಾಟಕ ಮೈಸೂರಿನಲ್ಲಿ ನಡೆಯುತ್ತಿದ್ದಾಗ ವೀರಣ್ಣನವರ ಈ ಪಾತ್ರಗಳ ಅಭಿನಯದ ಕೀರ್ತಿ ಅರಮನೆಯನ್ನೂ ಮುಟ್ಟಿತು. ವೀರಣ್ಣ ಜನಪ್ರಿಯತೆಯನ್ನು ಸಂಪಾದಿಸಿದರು."[೩]

ವೀರಣ್ಣನವರು 'ಕಂಪನಿಯ ಒಂದು ಆಸ್ತಿ' ಎಂಬುದನ್ನು ಕಂಡುಕೊಂಡು ಮಾಲೀಕರು ಅವರ ಆಡಳಿತದಲ್ಲಿ ಇವರನ್ನು ಸೇರಿಸಿಕೊಂಡರು. ವೀರಣ್ಣನವರು ಮಾಲೀಕರ ನಂಬಿಕೆಗೆ ಪಾತ್ರರಾದರು.

---

೧. ಜಿ.ಹೆಚ್.ವೀರಣ್ಣ, (ಗುಬ್ಬಿ ವೀರಣ್ಣ) ಕಲೆಯೇ ಕಾಯಕ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಾಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು, ಪು. ೨

೨. ಕೆ.ಎಸ್.ಸಿದ್ಧಲಿಂಗಯ್ಯ, ಅಮರಗೊಂಡ, ಕ.ಸಾ.,ಪ.ಗು. ತುಮಕೂರು ಜಿಲ್ಲೆ, ಸ್ಮರಣೆ ಸಂಚಿಕೆ, ಪು. ೩೨.

೩. ಡಾ. ಸಿಂಧುವಳ್ಳಿ ಅನಂತಮೂರ್ತಿ, ಗುಬ್ಬಿ ಕಂಪನಿ, ಮೈ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್, ಮೈಸೂರು, ಪು. ೭೮.

"ನಾಟಕದಲ್ಲಿ ಪಾತ್ರವಹಿಸುವುದರ ಜೊತೆಗೆ ವೀರಣ್ಣನವರು ಸಂಸ್ಥೆಯಲ್ಲಿದ್ದ ಕೋಳಾಲದ ಪಿಟೀಲು ಸುಬ್ಬಣ್ಣನವರು ಮತ್ತು ದಾನಪ್ಪಯ್ಯನವರ ಬಳಿ ಪಿಟೀಲು, ತಬಲಾ, ಹಾರ್ಮೋನಿಯಂ ವಾದ್ಯಗಳ ವಾದನವನ್ನು ಅಭ್ಯಾಸ ಮಾಡಿದರು. ಕ್ರಮೇಣ ಪಿಟೀಲು ಬಾರಿಸುವುದರ ಜೊತೆ ಕುಳಿತು ಸ್ವಲ್ಪ ಹೊತ್ತು ನಾಟಕಕ್ಕೆ ಪಿಟೀಲು ಬಾರಿಸುತ್ತಿದ್ದರು." [೧]

ನಾಟಕದಲ್ಲಿ ಪಾತ್ರವಹಿಸುವುದಲ್ಲದೆ ವೀರಣ್ಣನವರು ಸಮಯ ಬಂದಂತೆ ಕಂಪನಿಯ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದರು. ಜೊತೆಗೆ ಸಂಘದಲ್ಲಿ ಆಗಾಗ ಉಂಟಾಗುತ್ತಿದ್ದ ತೊಂದರೆಗಳನ್ನು ಸರಿಪಡಿಸಲು ಯಜಮಾನರಿಗೆ ಸಲಹೆ ನೀಡುತ್ತಿದ್ದರು. ಇತರ ಕಲಾವಿದರು ಹಾಗೂ ನೌಕರರು ತಮಗೆ ಏನಾದರೂ ಸಮಸ್ಯೆಗಳು ಬಂದರೆ ಸಲಹೆ ಕೇಳಲು ವೀರಣ್ಣನವರ ಬಳಿಗೆ ಬರುತ್ತಿದ್ದರು. ಹೀಗಾಗಿ ವೀರಣ್ಣನವರು ಸಂಸ್ಥೆಯಲ್ಲೊಬ್ಬ ಪ್ರಮುಖ ವ್ಯಕ್ತಿಯಾದರು. ಸಂಸ್ಥೆಯನ್ನು ನಿರ್ವಹಿಸಿಕೊಂಡು ಹೋಗುವ ಕೆಲಸದಲ್ಲಿ ವೀರಣ್ಣನವರು ಚಂದಣ್ಣನವರಿಗೆ ಬಲಗೈಯಂತಾದರು.

ಇವರು ಮಹಾಭಾರತ 'ಪಾಂಡವ ವಿಜಯ'ವೆಂಬ ನಾಟಕವನ್ನು ಅಭ್ಯಾಸಮಾಡಿ ಪ್ರದರ್ಶಿಸಲು ಪ್ರಾರಂಭಿಸಿದರು. ಈ ನಾಟಕದಲ್ಲಿ ಸೂರ್ಯನ ಪಾತ್ರವನ್ನು ಕೊಟ್ಟಿದ್ದರು. ಸೂರ್ಯನ ಪಾತ್ರವನ್ನು ನೆಲದ ಮೇಲೆ ನಿಂತು ಮಾತನಾಡುವಂತಿರದೆ ಅಂತರಿಕ್ಷದಲ್ಲಿಯೇ ಮಾತು ಹಾಡುಗಳನ್ನು ಹಾಡಿ ಹಾಗೆಯೇ ರಂಗದ ಮೇಲುಗಡೆಗೆ ನಿಷ್ಕ್ರಮಿಸಬೇಕಾಗಿತ್ತು. ಈ ಸಂದರ್ಭದಲ್ಲಿ ಪಾತ್ರ ಬಂದಾಗ ಕೆಳಕ್ಕಿಳಿದು ಮುಗಿದ ನಂತರ ಮೇಲಕ್ಕೇಳೆಯುತ್ತಿದ್ದಾಗ ಅವರಿಗೆ ಭಯದಿಂದ ಅಲ್ಲಿಯೇ ಎಲ್ಲವೂ ಆಗುತ್ತಿತ್ತಂತೆ.

ಶ್ರೀ ಚಂದಣ್ಣನವರು ಅವರನ್ನು ಸ್ವಂತ ಮಗನಂತೆ ನೋಡಿಕೊಳ್ಳುತ್ತಿದ್ದರು. ಅವರು ಜೈನಮತದವರಾದರೂ ಯಾವುದೇ ಜಾತಿಭೇದ ಮಾಡುತ್ತಿರಲಿಲ್ಲ. ಎಲ್ಲ ಧಾರ್ಮಿಕ ಕ್ರಿಯೆಯಲ್ಲಿ ಭಾಗವಹಿಸುತ್ತಿದ್ದರು.

ಶೃಂಗೇರಿಯಲ್ಲಿ 'ಪಾಂಡವ ವಿಜಯ' ನಾಟಕ ಪ್ರದರ್ಶಿಸಿತು. ನಾಟಕದಲ್ಲಿ ವೀರಣ್ಣನವರದು ಸಾಬಿಯ ಪಾತ್ರ ಒಂದು ಸಂದರ್ಭದಲ್ಲಿ ಸಾಬಿಗೂ ಒಬ್ಬ ಬ್ರಾಹ್ಮಣನಿಗೂ ಸಂವಾದ ನಡೆಯುತ್ತದೆ. ಈ ಸಂವಾದದಲ್ಲಿ ಬರುವ ಮಾತುಗಳಿಂದ

---

೧. ಬಿ.ವಿ.ವೈಕುಂಠರಾಜು, ಕನ್ನಡ ರಂಗಭೂಮಿ, ಸನಾತನ ಪ್ರಕಾಶನ ಮುದ್ರಣಾಲಯ, ಪು. ೮೫

ತಮಗೆ ಅವಮಾನವಾಗುವುದೆಂದು ಅಲ್ಲಿಯ ಬ್ರಾಹ್ಮಣರು ಇವರ ನಾಟಕಗಳಿಗೆ ಬಹಿಷ್ಕಾರ ಹಾಕಿದರು. ಇದಕ್ಕೆ ವೀರಣ್ಣನವರು ಕಾರಣವಾಗಿರಲಿಲ್ಲ. ಎಂದಿನಂತೆ ಅವರು ತಮ್ಮ ಪಾತ್ರವಹಿಸಿದ್ದರು. ಅಲ್ಲಿನ ಬ್ರಾಹ್ಮಣರನ್ನು ಸಮಾಧಾನ ಮಾಡುವಂತೆ ಮಾಲೀಕರು ವೀರಣ್ಣನವರಿಗೆ ಹೇಳಿದರು. ಅದೇ ಸಂಸ್ಥೆಯಲ್ಲಿ ಇದ್ದು ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದವರೊಬ್ಬರನ್ನು ವೀರಣ್ಣನವರು ಬ್ರಾಹ್ಮಣರ ಸಮೂಹವಿದ್ದ ಕಡೆಗೆ ಕರೆದುಕೊಂಡು ಹೋಗಿ ತಮ್ಮ ಜಾಣತನದಿಂದ ಆ ಬ್ರಾಹ್ಮಣರ ಮನವೊಲಿಸಿ ಗೆದ್ದು ಬಂದರು. ವೀರಣ್ಣನವರು ಸಂಸ್ಥೆಗೋಸ್ಕರ ಕ್ಷಮಾಪಣೆ ಕೇಳುವುದಕ್ಕೂ ಹಿಂಜರಿಯುತ್ತಿರಲಿಲ್ಲ. ವೀರಣ್ಣನವರು ಕಂಪನಿಯನ್ನು ಕಷ್ಟದ ಪರಿಸ್ಥಿತಿಯಿಂದ ಹೀಗೆ ಪಾರು ಮಾಡಿದರು.

'ಸದಾರಮೆ' ನಾಟಕದಲ್ಲಿ ಆದಿಮೂರ್ತಿ, ಕಳ್ಳ ಈ ಎರಡು ಮುಖ್ಯ ಪಾತ್ರಗಳನ್ನು ಸಾಮಾನ್ಯವಾಗಿ ವಹಿಸುತ್ತಿದ್ದ ನಟರು ನಾಟಕದ ಸಮಯಕ್ಕೆ ಬರಲು ಆಗಲಿಲ್ಲ. ಆಗ ವೀರಣ್ಣನವರೇ ಈ ಎರಡು ಮುಖ್ಯ ಪಾತ್ರಗಳನ್ನು ಚೆನ್ನಾಗಿ ಅಭಿನಯಿಸಿ ಉಂಟಾಗಿದ್ದ ಬಿಕ್ಕಟ್ಟನ್ನು ಪರಿಹಾರ ಮಾಡಿದ್ದಲ್ಲದೆ ಎಲ್ಲರ ಮೆಚ್ಚುಗೆ ಗಳಿಸಿದರು. ಅಂದಿನಿಂದ ಈ ಎರಡು ಪಾತ್ರಗಳು ಇವರಿಗೆ ಮೀಸಲಾಯಿತು.

ಇವರು ವಯಸ್ಸಿನಲ್ಲಿ ಚಿಕ್ಕವರಾಗಿದ್ದರು. "ಜನರನ್ನು ಆಳುವ ಶಕ್ತಿಮಾತ್ರ ಇವರಲ್ಲಿ ಮೊದಲಿನಿಂದಲೂ ಚೆನ್ನಾಗಿದ್ದಿತು. ಇವರಿಗಿಂತಲೂ ಹಿರಿಯರಾದ ನಟರೂ ಸಹ ಇವರಲ್ಲಿ ಆಲೋಚಿಸಿ, ಇವರ ಸಲಹೆ ಇಲ್ಲದೆ ಸ್ವತಂತ್ರವಾಗಿ ಯಾವ ಕೆಲಸವನ್ನು ಮಾಡುತ್ತಿರಲಿಲ್ಲ. ಅಲ್ಲದೆ ಇವರ ಬುದ್ಧಿಯ ನಿರ್ವಹಣ ಶಕ್ತಿಯು ಸರ್ವತೋಮುಖ ವಾಗಿದ್ದರಿಂದಸಮಯ ಬಂದರೆ ಯಾವ ನಾಟಕದಲ್ಲಿ ಯಾವ ಸ್ತ್ರೀ-ಪುರುಷರ ಪಾತ್ರಗಳನ್ನು ಬೇಕಾದರೂ ಅಭಿನಯಿಸಿ ನಾಟಕವನ್ನು ತೂಗಿಸಬಲ್ಲವರಾಗಿದ್ದರು. ಹೀಗೆ ಅವರು ಅನೇಕ ವೃತ್ತಿ ಮಾಡಿದ ಕಾರಣ ಮಾಲೀಕರಿಬ್ಬಗೂ ಇವರ ಮೇಲೆ ಮತ್ತಷ್ಟು ಪ್ರೀತಿ ಹೆಚ್ಚಾಯಿತು."

ಕಂಪನಿಯೇನೋ ಕೆಲಸ ಮಾಡಿಕೊಂಡು ಹೋಗುತ್ತಿತ್ತು. ಆದರೆ ಮಾಲೀಕರ ಅಧಿಕಾರ, ದರ್ಪ, ಪಕ್ಷಪಾತ ಇವೇ ಮೊದಲಾದವು ನಟ-ನಟಿಯರಿಗೂ ಇತರರಿಗೂ ಹಿಡಿಸಲಿಲ್ಲ. ಮಾಲೀಕರು ಜೈನರಾದುದರಿಂದ ಲಿಂಗಾಯತರಿಗೆ ಮತ್ತು ಬ್ರಾಹ್ಮಣರಿಗೆ ನ್ಯಾಯವಾಗಿ ಸಲ್ಲಬೇಕಾದದ್ದು ಸಲ್ಲುತ್ತಿರಲಿಲ್ಲ. ಊಟ ಸ್ನಾನಗಳಲ್ಲೂ ವಂಚನೆ-ಯಾಗುತ್ತಿತ್ತು. ಉಳಿದಂತೆ ವೀರಣ್ಣನವರಿಗೂ ಮಾಲೀಕರ ಈ ವರ್ತನೆ ಹಿಡಿಸಲಿಲ್ಲ.

ಆಗ ವೀರಣ್ಣನವರು ಧೈರ್ಯಮಾಡಿ ಗುಬ್ಬಿ ಕಂಪನಿಯನ್ನು ಬಿಟ್ಟು ಸ್ನೇಹಿತರೊಂದಿಗೆ 'ಸೀತಾಮನೋಹರ' ನಾಟಕ ಮಂಡಳಿಯನ್ನು ಸೇರಿದರು. ಇವರಿಗೆ ಅಲ್ಲಿ ೫೦ ರೂ. ಸಂಬಳ ಗೊತ್ತಾಯಿತು.

ಆದರೆ ವೀರಣ್ಣನವರಿಲ್ಲದೆ ಗುಬ್ಬಿ ಕಂಪನಿ ನಡೆಯುವಂತಿರಲಿಲ್ಲ. ಮಾಲೀಕರು ಚಂದಣ್ಣನವರೇ ಬಂದು ಮತ್ತೆ ವೀರಣ್ಣನವರನ್ನು ಹಿಂದಕ್ಕೆ ಕರೆದುಕೊಂಡು ಹೋದರು. ವೀರಣ್ಣನವರು ಗುಬ್ಬಿ ಕಂಪನಿಯನ್ನು ಬಿಡುವಾಗ ಇಪ್ಪತ್ತೆರಡು ರೂ. ಎಂಟಾಣೆ ಸಂಬಳ ದೊರೆಯುತ್ತಿತ್ತು. ಈಗ ಅವರಿಗೆ ೪೦ ರೂ. ಸಂಬಳ ಗೊತ್ತು ಮಾಡಲಾಯಿತು. ತಮ್ಮನ್ನು ಒಬ್ಬ ನಟನನ್ನಾಗಿ ಗುರುತಿಸಿದ್ದು ಈ ಸಂಸ್ಥೆಯೇ ಎಂಬ ಕಾರಣದಿಂದ ಹತ್ತು ರೂಪಾಯಿ ಕಡಿಮೆ ಸಂಬಳವಾದರೂ ಇವರು ಗುಬ್ಬಿ ಕಂಪನಿಗೆ ಹಿಂದಿರುಗಿದರು.

ವೀರಣ್ಣನವರು ಸಮಯ ಬಂದಾಗ ಕಂಪನಿಗಾಗಿ ಯಾವ ಕೆಲಸ ಮಾಡಲೂ ಹಿಂಜರಿಯುತ್ತಿರಲಿಲ್ಲ. ಹಾಗೆಂದು ಕಂಪನಿ ಹೇಗೆ ತಮ್ಮನ್ನು ನೋಡಿಕೊಂಡರು ಅದಕ್ಕೆ ವೀರಣ್ಣನವರು ಸುಮ್ಮನಿರುತ್ತಿರಲಿಲ್ಲ. ಅಂಥ ಸಂದರ್ಭಗಳಲ್ಲಿ ಕಂಪನಿ ಬಿಡುವುದಕ್ಕೂ ಸಿದ್ಧ. ಹಾಗೆಯೇ ಮಾಲೀಕರು ಕಂಪನಿಗಾಗಿ ಹಿಂದಕ್ಕೆ ಬಾ ಎಂದಾಗ ಅದಕ್ಕೂ ಸಿದ್ಧ. ಈ ಗುಣಗಳು ಒಬ್ಬ ಕಂಪನಿಯ ಮುಖ್ಯಸ್ಥನಾಗುವುದಕ್ಕೆ ಸಹಾಯಕವಾಗುವ ಅಂಶಗಳು. "ಕಂಪನಿಗೆ ಹಿಂದಿರುಗಿ ಬಂದ ಮೇಲೆ ಮಾಲೀಕರೊಡನೆ ವಾದ ಮಾಡಿ ಬಿಸಿನೀರಿನ ಸ್ನಾನಕ್ಕೆ ಏರ್ಪಾಡು ಮಾಡಿದರು. ಕಂಪನಿಯ ಮನೆಯ ಇತಿಹಾಸದಲ್ಲಿ ಪ್ರತಿಯೊಬ್ಬರಿಗೂ ಪ್ರತಿದಿನ ಬಿಸಿನೀರಿನ ಸ್ನಾನದ ವ್ಯವಸ್ಥೆ ಪ್ರಾರಂಭವಾದದ್ದು ವೀರಣ್ಣನವರಿಂದಲೇ." [೧]

"ವೀರಣ್ಣನವರು ಈಗ ಕಂಪನಿಗೆ ಪ್ರಾಮಾಣಿಕವಾಗಿ ದುಡಿಯುತ್ತಿದ್ದರು. ಹೀಗಿರುವಾಗ ೧೯೧೭ರಲ್ಲಿ ಮಾಲೀಕ ಚಂದಣ್ಣನವರು ನಿಧನರಾದರು. ಅವರು ತೀರಿಕೊಂಡ ಮೇಲೆ ವೀರಣ್ಣನವರು, ಮಾಲೀಕರ ಅಣ್ಣನ ಮಗ ನಾಗರಾಜಯ್ಯನವರು ೧೩ ಜುಲೈ ೧೦೧೭ರಂದು ಕಂಪನಿಯ ಪಾಲುದಾರರಾದರು." [೨]

ವೀರಣ್ಣನವರು ಕಂಪನಿಗೆ ಪಾಲುದಾರರಾದಾಗ ಒಂದು ಸೂತ್ರದ ಪರದೆ. ಒಂದು ಅಂತಃಪುರ ಪರದೆ, ಒಂದು ಉದ್ಯಾನವನದ ಪರದೆ, ಒಂದು ದರ್ಬಾರ್

೧. ಕನ್ನಡ ರಂಗಭೂಮಿ ಶತಮಾನೋತ್ಸವ ಸ್ಮಾರಕ ಗ್ರಂಥ, ತ.ರಂ.ಶ.ಶ್ಮಾ. ಸಮಿತಿ.
೨. ಬಿ.ವಿ.ವೈಕುಂಠರಾಜು, ಕನ್ನಡ ರಂಗಭೂಮಿ, ಸನಾತನ ಪ್ರಕಾಶನ ಮುದ್ರಾಲಯ, ಪು. ೮೬.

ಪರದೆ, ಒಂದು ಕಾಡು ಪರದೆ, ಐದು ಜತೆ ವಿಂಗ್ಸ್, ಎರಡು ಜತೆ ಕಟಕಟೆ, ಹತ್ತು ಹದಿನೈದು ಬಿಳಿಡ್ರೆಸ್, ಹತ್ತು ಹದಿನೈದು ಮಹಾರಾಷ್ಟ್ರ ಡ್ರೆಸ್ ಇನ್ನೂ ಇತ್ಯಾದಿ ಸಾಮಾನು ಸಲಕರಣೆಗಳಿದ್ದವು.

ಕಂಪನಿಯ ಜವಾಬ್ದಾರಿಯನ್ನು ವಹಿಸಿಕೊಂಡ ಮೇಲೆ ವೀರಣ್ಣನವರಿಗೆ ನಾಗರಾಜಯ್ಯನವರಿಂದ ನಿರೀಕ್ಷಿಸಿದಷ್ಟು ಸಹಕಾರ ಸಿಗಲಿಲ್ಲ. ಇಬ್ಬರಲ್ಲಿಯೂ ಭಿನ್ನಾಭಿಪ್ರಾಯ ಬೆಳದು ಸಂಸ್ಥೆಯನ್ನು ಮುಂದುವರಿಸಿಕೊಂಡು ಹೋಗುವುದೇ ಕಷ್ಟವಾಯಿತು. ಆದ್ದರಿಂದ ವಿರಣ್ಣನವರೂ ಸಹ ಕಲಾವಿದರೂ ಸೇರಿ ತುಮಕೂರಿನಲ್ಲಿ ನಾಟಕಗಳನ್ನಾಡಲು ಪ್ರಾರಂಭಿಸಿದರು. ಗುಬ್ಬಿ ಕಂಪನಿ ನಿಂತು ಹೋಗುವುದನ್ನು ತಪ್ಪಿಸಬೇಕೆಂಬ ಸದುದ್ದೇಶದಿಂದ ತುಮಕೂರಿನ ಪ್ರಮುಖರು ವೀರಣ್ಣನವರನ್ನು, ನಾಗರಾಜಯ್ಯನವರನ್ನು ಭೇಟಿ ಮಾಡಿಸಿ ನಾಗರಾಜಯ್ಯನವರ ಭಾಗದ ಹಣವನ್ನು ವೀರಣ್ಣನವರಿಂದಲೇ ಕೊಡಿಸಿ ಕಂಪನಿಯ ಜವಾಬ್ದಾರಿಯನ್ನು ಹೊತ್ತುಕೊಳ್ಳುವಂತೆ ಕೋರಿದರು. ವೀರಣ್ಣನವರ ಹಾದಿಯಲ್ಲಿದ್ದ ಅಡ್ಡಿಗಳೆಲ್ಲ ನಿವಾರಣೆಯಾಗಿ ಅವರೊಬ್ಬರೇ ಸಂಪೂರ್ಣ ಮಾಲೀಕರಾದರು.

ಮುಂದೆ ವೀರಣ್ಣನವರು ಕಂಪನಿಯನ್ನು ಉತ್ತಮ ರೀತಿಯಲ್ಲಿ ಮುಂದುವರಿಸಿದರು. ಇವರು ಆಡಳಿತದ ಜವಾಬ್ದಾರಿ ವಹಿಸಿಕೊಂಡ ಮೇಲೆ ಕಂಪನಿಗೆ ಹೊಸ ತಿರುವು ಬಂತು. ತಮಗೆ ದೊರಕಿದ ಅವಕಾಶವನ್ನು ರಂಗಭೂಮಿಯ ಉನ್ನತಿಗೆ ಉಪಯೋಗಿಸಬೇಕೆಂದು ಅವರು ಯೋಚಿಸಿದರು. ಆಗ ಕಂಪನಿಯು ಆಡುತ್ತಿದ್ದ ನಾಟಕಗಳು ಪದ್ಯಗಳಿಂದ ತುಂಬಿರುತ್ತಿದ್ದವು. ಗದ್ಯ ಎನ್ನುವುದು ಹೆಸರಿಗೆ, ರಾಜನಾಗಲಿ ರಾಣಿಯಾಗಲಿ, ಸೇನಾದಿಪತಿಯಾಗಲಿ, ಪದ್ಯದಲ್ಲಿಯೇ ಮಾತನಾಡಬೇಕು. ಕೊನೆಗೆ ದ್ವಾರಪಾಲಕನು ಪದ್ಯದಲ್ಲಿಯೇ ಮಾತನಾಡುತ್ತಿದ್ದು, ಈ ಅನೌಚಿತ್ಯವನ್ನು ಗಮನಿಸಿದ ವೀರಣ್ಣನವರು ಒಳ್ಳೆಯ ನಾಟಕಗಳನ್ನು ಬರೆಸಬೇಕೆಂದು ನಿರ್ಧರಿಸಿದರು.

ವೀರಣ್ಣನವರ ಯೋಚನೆ ಕಾರ್ಯರೂಪಕ್ಕೆ ಇಳಿಯಲು ಅನುಕೂಲವಾಗುವಂತೆ ಆಗ ಬೆಳ್ಳಾವಿ ನರಹರಿಶಾಸ್ತ್ರಿಗಳು ತುಮಕೂರಿನಲ್ಲಿ ವಿದ್ಯಾಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ೧೯೧೯ರಲ್ಲಿ ವೀರಣ್ಣನವರು ಅವರ ಬಳಿ ಹೋಗಿ 'ಕೃಷ್ಣಲೀಲಾ' ನಾಟಕವನ್ನು ಬರೆದುಕೊಡುವಂತೆ ಕೋರಿಕೊಂಡರು. 'ಕೃಷ್ಣಲೀಲಾ' ನಾಟಕ ಕಂಪನಿಯ ಹೋದ ಕಡೆಯಲ್ಲೆಲ್ಲಾ ಅಪೂರ್ವ ಯಶಸ್ಸು ಗಳಿಸಿತು. ಅದುವರೆಗೆ ನಾಟಕಗಳಿಗೆ ತೀರಾ ಹೆಚ್ಚೆಂದರೆ ಐದು ನೂರು ರೂಪಾಯಿ ಕಲೆಕ್ಷನ್ ಆಗುತ್ತಿತ್ತು.

ಕೃಷ್ಣಲೀಲಾ ನಾಟಕಕ್ಕೆ ಒಂದು ಸಾವಿರ ರೂಪಾಯಿ ಕಲೆಕ್ಷನ್ ಸಾಮಾನ್ಯದ ಮಾತಾಯಿತು. ಅನಂತರ ವೀರಣ್ಣನವರು ಶಾಸ್ತ್ರಿಗಳಿಂದ ರುಕ್ಮಿಣಿ ಸ್ವಯಂವರ, ಮಹಾತ್ಮಾ ಕಬೀರ ದಾಸಾ, ಜಲಂದರ ಮೊದಲಾದ ನಾಟಕಗಳನ್ನು ಬರೆಯಿಸಿದರು.

ಕಂಪನಿಗೆ ಒಬ್ಬ ವ್ಯವಸ್ಥಾಪಕ ಇರುವುದು ಅಗತ್ಯವೆಂಬುದನ್ನು ವೀರಣ್ಣನವರು ಮಾಲೀಕರಾದ ಒಡನೆಯೇ ಅರಿತುಕೊಂಡಿದ್ದರು. ಚಂದಣ್ಣನವರು ಮಾಲೀಕರಾಗಿದ್ದಗ ಎಲ್ಲ ವ್ಯವಹಾರಗಳನ್ನು ಅವರೊಬ್ಬರೇ ನೋಡಿಕೊಂಡು ಹೋಗುತ್ತಿದ್ದರು. "ಕೆಲಸವನ್ನು ಹಂಚಿಕೊಳ್ಳುವುದರಿಂದ ಕಂಪನಿಯ ಬೆಳವಣಿಗೆಗೆ ಅನುಕೂಲ ಎಂದು ವೀರಣ್ಣನವರು ಬಗೆದು ವ್ಯವಸ್ಥಾಪಕ ಕಾರ್ಯಕ್ಕೆ ಸೂಕ್ತರೆನಿಸದ ಎಸ್. ನಾಗೇಶ್‌ರಾಯನನ್ನು ನೇಮಕ ಮಾಡಿಕೊಂಡರು. ಸುಮಾರು ೧೦-೧೫ ವರ್ಷಗಳ ಕಾಲ ಈ ಕೆಲಸದಲ್ಲಿ ಇದ್ದರೆಂದು ತಿಳಿಯುತ್ತದೆ." [೧]

ವೀರಣ್ಣನವರೂ ಯಾವತ್ತೂ ಇದ್ದುದರಲ್ಲೇ ತೃಪ್ತಿಪಟ್ಟುಕೊಳ್ಳುತ್ತಿರಲಿಲ್ಲ. ಇವರ ಕಂಪನಿ ನಂಜನಗೂಡಿಗೆ ಹೋದಾಗ ನರಸಿಂಹಮೂರ್ತಿ ಎಂಬುವರ ಪರಿಚಯ-ವಾದಾಗ ಇವರು ವಿದ್ಯಾವಂತರಾಗಿದ್ದರಿಂದ ಕಂಪನಿಯ ಅಸಿಸ್ಟೆಂಟ್ ಮೇನೇಜರ್ ಆಗಿ ನೇಮಕ ಮಾಡಿಕೊಂಡರು. ನಂತರ ವ್ಯವಸ್ಥಾಪಕರನ್ನಾಗಿ ಮಾಡಿಕೊಂಡು ಆ ಸಮಯದಲ್ಲಿಯೇ ಕನ್ನಡ ರಂಗಭೂಮಿಯ ಶತಮಾನೋತ್ಸವವನ್ನು ಗುಬ್ಬಿ ಕಂಪನಿಯ ವಜ್ರ ಮಹೋತ್ಸವವನ್ನು ವೈಭವದಿಂದ ನಡೆಸಿದರು. ವೀರಣ್ಣನವರು ಇವರನ್ನು ಬಹುವಾಗಿ ಮೆಚ್ಚಿಕೊಂಡರು.

ನಾಟಕ ನಡೆಯಬೇಕಾದರೆ ನಟ - ನಟಿಯರೇ ಕಾರಣ ಎಂಬುದಾಗಿ ವೀರಣ್ಣನವರು ನಂಬಿದ್ದರು. ಕೆಲವೊಮ್ಮೆ ಅನಿವಾರ್ಯವಾಗಿ ಅಥವಾ ಉದ್ದೇಶವಾಗಿಯೇ ನಟರು ಸಮಯಕ್ಕೆ ಸರಿಯಾಗಿ ಬರದೇ ವಿರಣ್ಣನವರಿಗೆ ತೊಂದರೆ ಕೊಡುತ್ತಿದ್ದರು. ಅಂಥ ಸಂದರ್ಭದಲ್ಲಿ ವೀರಣ್ಣನವರು ಧೈರ್ಯಗೆಡದೆ ಅದನ್ನು ಧೈರ್ಯವಾಗಿ ಎದುರಿಸುತ್ತಿದ್ದರು. ಅದೇ ಜಾಗದಲ್ಲಿ ಮತ್ತೊಬ್ಬ ನಟರನ್ನು ಮೊದಲೇ ತಯಾರು ಮಾಡುತ್ತಿದ್ದರು. ಅಂಥವರು ಬಾರದೆ ಇದ್ದಾಗ ಅವರಿಗೆ ಹೊಸ ಜೀವ ಬರುತ್ತಿತ್ತು. ವೀರಣ್ಣನವರು ಇಂಥ ಸುಪ್ತ ಪ್ರತಿಭೆಯನ್ನು ಗುರುತಿಸಿ ಮನಗಂಡು ಅವರನ್ನು ತಯಾರು ಮಾಡಿಟ್ಟುಕೊಂಡು ಅಂತಹ ಸಂದರ್ಭದಲ್ಲಿ ಬಳಸಿಕೊಳ್ಳುತ್ತಿದ್ದರು.

---

೧. ಕನ್ನಡ ರಂಗಭೂಮಿ ಶತಮಾನೋತ್ಸವ ಸ್ಮಾರಕ ಗ್ರಂಥ, ಕ.ರಾ.ಶ.ಸ್ಮಾ. ಸಮಿತಿ, ಪು. ೩೭.

ವೀರಣ್ಣನವರ ಮಾನವೀಯತೆ ಹಾಗೂ ವ್ಯವಹಾರ ದೃಷ್ಟಿಗೆ ಒಂದು ನಿದರ್ಶನವನ್ನು ನೀಡಬಹುದು. ಜಿ.ವಿ. ಅಯ್ಯರ್ ಹೀಗೆ ಹೇಳುತ್ತಾರೆ. "ನಟನೊಬ್ಬ ಸಾವಿರಾರು ರೂ. ಮುಂಗಡ ಪಡೆದು ಬರುತ್ತೇನೆ ಎಂದು ಹೇಳಿ ಬರದಿದ್ದರೂ ಅವನು ಬೆಳೆಯುವುದಕ್ಕೆ ಅವಕಾಶವಿದ್ದರೆ ಅವನನ್ನು ಬಿಡುತ್ತಿದ್ದರು. ಆದರೆ ಅವನಿಗೊಂದು ಕಾಗದ ಬರೆಯುತ್ತಿದ್ದರು. ನೀನು ನನಗೆ ಹಣ ಹಿಂದಕ್ಕೆ ಕೊಡಲಿಲ್ಲ. ಇಲ್ಲಿ ನೀನು ಮೋಸಮಾಡಿ ಹೋದೆ ನೀನು ನನಗೆ ಕೊಡಬೇಕಾದ ಹಣವನ್ನು ಕೊಟ್ಟು ಎಲ್ಲಿಯಾದರೂ ಸುಖವಾಗಿರು." ವೀರಣ್ಣನವರಿಗೆ ಈ ಹಣ ಹಿಂದಕ್ಕೆ ಬರುವುದಿಲ್ಲ. ಸಾವಿರಾರು ರೂಪಾಯಿ ನಟರಿಂದ ಹಿಂತಿರುಗಿ ಬರುವ ಭರವಸೆ ಇರಲಿಲ್ಲ. ಕೆಲವೊಮ್ಮೆ ಆ ವ್ಯಕ್ತಿ ಬಹಳ ಮುಖ್ಯ ಎಂದು ತಿಳಿದಾಗ ಅವನ ಮೇಲೆ ನೋಟೀಸ್ ಚಲಾಯಿಸುವುದರ ಮೂಲಕ ವ್ಯವಹಾರದ ಮೇಲೆ ಹಿಡಿತವನ್ನು ಇಟ್ಟಿರುತ್ತಿದ್ದರೂ. ಕೊನೆಗೆ ಹೇಗೋ ಏನೋ ಮಾಡಿ ಆತನು ಕಂಪನಿಗೆ ಹಿಂತಿರುಗಿ ಬರುವಂತೆ ಮಾಡುತ್ತಿದ್ದರು.

ಯಾವುದೇ ಒಂದು ಕಂಪನಿಯು ಒಬ್ಬ ನಟನನ್ನೇ ಅವಲಂಬಿಸಿರುತ್ತವೆ. ಆ ನಟ ಆ ಕಂಪನಿಯನ್ನು ಬಿಡುತ್ತಿದ್ದಂತೆಯೇ ಅಥವಾ ತೀರಿಕೊಳ್ಳುತ್ತಿದ್ದಂತೆಯೇ ಕಂಪನಿಯ ಕೆಲಸ ನಿಲ್ಲುತ್ತಿತ್ತು. ಗುಬ್ಬಿ ಕಂಪನಿ ಹಾಗಾಗುವುದಕ್ಕೆ ವೀರಣ್ಣನವರು ಬಿಡಲಿಲ್ಲ. ಒಂದೇ ಕಾಲದಲ್ಲಿ ಗುಬ್ಬಿ ಕಂಪನಿಯ ನಾಟಕದಲ್ಲಿ ಇಬ್ಬರು, ಮೂವರು ಪ್ರತಿಭಾನ್ವಿತರಿರುತ್ತಿದ್ದರು. ಯಾರೊಬ್ಬರ ಮೇಲೂ ನಾಟಕ ನಿಂತಿರಲಿಲ್ಲ. ಒಂದು ನಾಟಕದಲ್ಲಿ ಒಬ್ಬನೇ ನಟನಲ್ಲ. ಇನ್ನೊಬ್ಬನು ಇರುತ್ತಿದ್ದ. ಹೀಗೆ ಗುಬ್ಬಿ ಕಂಪನಿ ಸತತವಾಗಿ ಕೆಲಸ ಮಾಡಿಕೊಂಡು ಬರುವಂತೆ ವೀರಣ್ಣನವರು ದೂರದೃಷ್ಟಿಯಿಂದ ಕಂಪನಿಯನ್ನು ಕಟ್ಟಿದರು.

ಇದಲ್ಲದೆ ತಮ್ಮ ನಾಟಕ ಕಂಪನಿಗೆ ತನ್ನ ಸಂಸಾರವನ್ನೇ ತಂದರು. ಹೆಂಡತಿ, ಮಗಳು, ಮಗ, ಅಳಿಯ, ಸೊಸೆ ಇತ್ಯಾದಿಯಾಗಿ ಹಲವರು ಬಂದರು. ಅಂದರೆ ಇವರುಗಳಿಗೆ ಪ್ರಾಮುಖ್ಯ ಕೊಟ್ಟರು ಎಂದಲ್ಲ. ಒಂದು ಕಾಲಕ್ಕೆ ಯಾವುದೇ ಕಾರಣದಿಂದ ಹೊರಗಿನವರೆಲ್ಲರು ಹೋದರೆ ಕಂಪನಿಗೆ ಮಾತ್ರ ತನ್ನ ಕೆಲಸ ನಿಲ್ಲಿಸಬಾರದು ಎನ್ನುವ ಒಂದೇ ಧ್ಯೇಯದಿಂದ ಅವರು ಹಾಗೆ ಮಾಡಿದರು. ಅಂದಮಾತ್ರಕ್ಕೆ ಮನೆಯವರು ಕೇವಲ ಈ ಒಂದು ಉದ್ದೇಶದಿಂದಲೇ ಇದ್ದರು ಎಂದು ಅರ್ಥವಲ್ಲ. ಇವರೆಲ್ಲರೂ ಉತ್ತಮ ನಟನಟಿಯರೇ ಆಗಿದ್ದಾರೆ. ಇವರ ಈ ಒಂದು ಮೇಲ್ಪಂಕ್ತಿಯನ್ನೇ ಇನ್ನೂ ಒಂದೆರಡು ಕಂಪನಿಯವರು ಅನುಸರಿಸಿದರು.

ಯಾವುದಾದರೂ ಕಾರಣದಿಂದ ನಾಟಕವನ್ನು ನೋಡುತ್ತಿದ್ದವರ ಸಂಖ್ಯೆ ಕಡಿಮೆಯಾಯಿತು ಎಂದು ತಿಳಿದುಬಂದರೆ ಅದಕ್ಕೆ ಕಾರಣ ಹುಡುಕಿ ಪ್ರೇಕ್ಷಕರನ್ನು ಮತ್ತೇ ನಾಟಕಕ್ಕೆ ಎಳೆಯುತ್ತಿದ್ದರು. ಈ ಸಮಯದಲ್ಲಿ ಚಲನಚಿತ್ರಗಳು ಪ್ರೇಕ್ಷಕರನ್ನು ತಮ್ಮತ್ತ ಸೆಳೆಯಲಾರಂಭಿಸಿದವು. ಇದನ್ನು ತಿಳಿದು ವೀರಣ್ಣನವರು ಕುರುಕ್ಷೇತ್ರ, ದಶಾವತಾರ ಮೊದಲಾದ ನಾಟಕಗಳನ್ನು ರಂಗದ ಮೇಲೆ ತಂದರು. ಇದನ್ನು ಪ್ರಯೋಗಿಸಲು ಸಹಸ್ರಾರು ರೂಗಳನ್ನು ಖರ್ಚುಮಾಡಲು ಹಿಂದೆ ಮುಂದೆ ನೋಡುತ್ತಿರಲಿಲ್ಲ.

ಕೇವಲ ಪೌರಾಣಿಕ ನಾಟಕಗಳಿಗೆ ಗುಬಿ ಕಂಪನಿ ಮೀಸಲಾಗಿರಲಿಲ್ಲ 'ಸಾಹುಕಾರ' 'ಅಣ್ಣತಮ್ಮ' ಮೊದಲಾದ ಸಾಮಾಜಿಕ ನಾಟಕಗಳನ್ನು ಅವರು ರಂಗದ ಮೇಲೆ ಆಡುತ್ತಾ ಬಂದರು. ಈ ನಾಟಕಗಳಿಗೂ ಹಲವಾರು ಪ್ರೇಕ್ಷಕರು ಇದ್ದರು. ಒಟ್ಟಿನಲ್ಲಿ ಎಲ್ಲಾ ಬಗೆಯ ನಾಟಕಗಳನ್ನು ಗುಬ್ಬಿ ಕಂಪನಿ ಆಡುತ್ತಾ ಬಂದಿದೆ.

ಕಂಪನಿ ಹೀಗೆ ಅಭಿವೃದ್ಧಿ ಹೊಂದುತ್ತಿದ್ದಾಗಲೇ ವೀರಣ್ಣನವರು ಮುಖ್ಯ ಕಂಪನಿಯ ಆಶ್ರಯದಲ್ಲಿ ಇನ್ನೆರಡು ಕಂಪನಿಗಳನ್ನು ತೆರೆದರು. 'ಬಾಲಕಲಾವರ್ಧಿನಿ' ಇದು ಬಾಲಕರಿಗಾಗಿ, ಎರಡನೆಯದು ಚಿಕ್ಕ ಕಂಪನಿ. ಇದು ಮುಖ್ಯ ಕಂಪನಿಯ ಬ್ರ್ಯಾಂಚ್. ವೀರಣ್ಣನವರು ಸಾಹಿಸಿ, ಅವರಿಗೆ ನಾಟಕವೇ ಸರ್ವಸ್ವ ಎಲ್ಲ ರೀತಿಯಲ್ಲೂ ನಾಟಕ ಬೆಳೆಯಬೇಕೆಂದು ಹೀಗೆ ಯೋಚನೆ ಮಾಡಿದ್ದಿರಬಹುದು. ಒಂದರ ಬದಲಾಗಿ ಮೂರು ಕಂಪನಿಗಳು ತಮ್ಮ ಕೈಲಿದ್ದರೆ ಯಾವುದೇ ಕಾರಣದಿಂದ ನಾಟಕ ನಿಲ್ಲುವುದಿಲ್ಲ ಎಂದು ಅವರು ಭಾವಿಸಿದರು.

ನಾಟಕ ಉಳಿದು ಬೆಳೆಯಬೇಕಾದರೆ ರಂಗಭೂಮಿಗೆ ಸಂಬಂಧಿಸಿದ ಎಲ್ಲ ಅಂಗಗಳು ಸರಿಯಾಗಿರಬೇಕು ಎಂಬುದನ್ನು ವೀರಣ್ಣನವರು ತಮ್ಮ ಅನುಭವದಿಂದ ಕಂಡುಕೊಂಡಿದ್ದರು. ಹಾಗೆಂದು ಅವರು ಬರೀ ತಮ್ಮ ಅನುಭವದ ಮೇಲೆಯೇ ಎಲ್ಲವನ್ನೂ ರೂಪಿಸಿದರು ಎಂದರ್ಥವಲ್ಲ. ತಮ್ಮ ಸಹಜ ಬುದ್ಧಿಶಕ್ತಿ, ಜಾಣತನ, ಕಲ್ಪನಾಶಕ್ತಿ ಮೊದಲಾದವುಗಳ ಹಿನ್ನೆಲೆಯಲ್ಲಿ ತಿಳಿಯಲು ತಮ್ಮ ಅನುಭವವನ್ನು ಆಧಾರವಾಗಿಟ್ಟುಕೊಂಡು ಅವರು ರಂಗಭೂಮಿಯನ್ನು ರೂಪಿಸಿದರು.

೧೯೬೪ರಲ್ಲಿ ವೀರಣ್ಣನವರಿಗೆ ಒಂದಾದ ಮೇಲೊಂದರಂತೆ ತೊಂದರೆಗಳು ಬಂದವು. ಮಗಳು ನಾಟಕವಾಡುತ್ತಿದ್ದಾಗ ವಿದ್ಯುತ್ ಷಾಕ್ ಹೊಡೆದು ಭಾರೀ ಪೆಟ್ಟು ತಿಂದರು. ಮಗಳ ಪತಿ ಅಪಘಾತವೊಂದರಲ್ಲಿ ಮೃತರಾದರು. ಈ ಎಲ್ಲಾ

ಘಟನೆಗಳಿಂದ ವೀರಣ್ಣನವರ ಹೃದಯ ತಲ್ಲಣಿಸಿತು. ಅರವತ್ತು ವರ್ಷಗಳಿಗೂ ಹೆಚ್ಚು ಕಾಲ ತಾವೇ ಬೆಳಸಿದ ತಮ್ಮ ಜೀವಕ್ಕಿಂತ ಮಿಗಿಲಾಗಿದ್ದ ರಂಗಭೂಮಿಯಿಂದ ನಿವೃತ್ತರಾದರು.

ನಿವೃತ್ತಿಯ ನಂತರ ವೀರಣ್ಣನಂತ ಕಲಾವಿದರು ಮನೆಯಲ್ಲೇ ಕುಳಿತುಕೊಳ್ಳಲು ಸಾಧ್ಯವೇ? ರಾಜ್ಯ ಸಂಗೀತ ನಾಟಕ ಅಕಾಡೆಮಿಯ ಸದಸ್ಯರಾಗಿ ರಂಗಭೂಮಿಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸಲಹೆಗಳನ್ನು ನೀಡುತ್ತಿದ್ದರು.

ಕರ್ನಾಟಕ ರಂಗಭೂಮಿಯಲ್ಲಿಯೇ ಪ್ರತ್ಯೇಕವಾಗಿ ನಿಂತ ವೀರಣ್ಣನವರು ಉಳಿದ ವಿಷಯಗಳಲ್ಲೂ ಪ್ರತ್ಯೇಕವಾಗಿ ನಿಂತಿದ್ದಾರೆ. ಈವರೆಗೆ ರಂಗಭೂಮಿಯಲ್ಲಿ ಕೆಸಲ ಮಾಡಿದವರು ಸಾಮಾನ್ಯವಾಗಿ ತಮ್ಮ ರಂಗ ಜೀವನದ ದಿನಗಳನ್ನು ಬಿಟ್ಟರೆ ಉಳಿದ ಜೀವನದ ದಿನಗಳನ್ನು ಚೆನ್ನಾಗಿ ಕಳೆದಂತೆ ಕಂಡುಬರುವುದಿಲ್ಲ. ಆದರೆ ವೀರಣ್ಣನವರು ಕುಟುಂಬ ಈ ಹೊತ್ತಿಗೂ ಒಳ್ಳೆಯ ಜೀವನ ನಡೆಸುತ್ತಿದೆ. ಇದಕ್ಕೆ ಕಾರಣ ವೀರಣ್ಣನವರ ದೂರದೃಷ್ಟಿ ಹಾಗೂ ಶಿಸ್ತು. ಕರ್ನಾಟಕ ರಂಗಕ್ಕಾಗಿ ದುಡಿದ ವೀರಣ್ಣನವರನ್ನು ಅರಮನೆ, ಗುರುಮನೆ, ವಿಶ್ವವಿದ್ಯಾನಿಲಯ ಜನತೆ ಸರ್ಕಾರ ಎಲ್ಲವೂ ಗೌರವಿಸಿದವು. ಈ ಭಾಗ್ಯ ವೀರಣ್ಣನವರೊಬ್ಬರಿಗೆ ಸಂದಿರುವುದು. ಹೀಗೆ ಮೊದಲು ಗುಬ್ಬಿಯಾಗಿದ್ದದ್ದು ಅನಂತರ ಗರುಡನಾಗಿ ಇಡೀ ದಕ್ಷಿಣ ಭಾರತದಲ್ಲೆಲ್ಲಾ ಹರಡಿತು. ನಟರಾಗಿ ಸುಮಾರು ಎಪ್ಪತ್ತು ವರ್ಷಗಳ ಕಾಲ ಪ್ರೇಕ್ಷಕರನ್ನು ರಂಜಿಸಿದರು. ನಾಟಕದವರೆಂದರೆ ಜನರಲ್ಲಿದ್ದ ತಿರಸ್ಕಾರ ಭಾವನೆಯನ್ನು ಅಳಿಸಿಹಾಕಿ ನಾಟಕ ಸಂಸ್ಥೆಗಳಿಗೆ, ಕಲಾವಿದರಿಗೆ, ನಾಟಕಕಾರರಿಗೆ, ಗೌರವ ಮನ್ನಣೆಗಳು ದೊರಕುವಂತೆ ಮಾಡಿದರು.

ಕನ್ನಡ ರಂಗಭೂಮಿಗೆ ಶ್ರೀಮಂತಿಕೆಯನ್ನು ತಂದುಕೊಟ್ಟು ನಾಟಕರತ್ನ ಎನಿಸಿಕೊಂಡ ವೀರಣ್ಣನವರು ತಮ್ಮ ಎಂಬತ್ತೆರಡನೆಯ ವಯಸ್ಸಿನಲ್ಲಿ ೧೯–೧೦–೧೯೭೨ ಬೆಂಗಳೂರಿನಲ್ಲಿ ನಿಧನರಾದರು. ಇವರ ಜೊತೆಯಲ್ಲಿ ಕನ್ನಡ ರಂಗಭೂಮಿಯ ಒಂದು ದೊಡ್ಡ ವರ್ಣರಂಜಿತ ಅಧ್ಯಾಯವೂ ಮುಗಿಯಿತು. ಬೆಂಗಳೂರಿನಿಂದ ಗುಬ್ಬಿಯವರೆಗೆ ನಡೆದ ಅವರ ಪಾರ್ಥೀವ ಶರೀರದ ಮೆರವಣಿಗೆಯಲ್ಲಿ ಲಕ್ಷಾಂತರ ಜನ ಪಾಲ್ಗೊಂಡಿದ್ದರು.

ಅಧ್ಯಾಯ – ೬

ಕನ್ನಡ ರಂಗಭೂಮಿಯಲ್ಲಿ ವೀರಣ್ಣನವರ ಸಾಧನೆ ಮತ್ತು ಕೊಡುಗೆಗಳು

ಗುಬ್ಬಿ ಕಂಪನಿ ಸ್ಥಾಪನೆಯಾಗುವುದಕ್ಕೆ ಮೊದಲು ವೃತ್ತಿ ಕಂಪನಿಗಳು ಇದ್ದವು ಅನಂತರವೂ ವೃತ್ತಿ ಕಂಪನಿಗಳು ಹುಟ್ಟಿದವು. ಇವುಗಳಲ್ಲಿ ಯಾವ ಕಂಪನಿಯೂ ಇಷ್ಟು ದೀರ್ಘಕಾಲ ಬಾಳಲಿಲ್ಲ. ಇವಗಳಲ್ಲಿ ಮೂರು ಕಂಪನಿಗಳು ತಮ್ಮ ಕೊಡುಗೆಗಳಿಂದ ಕರ್ನಾಟಕ ರಂಗಭೂಮಿಯ ಬೆಳವಣಿಗೆಯಲ್ಲಿ ಎದ್ದು ಕಾಣುತ್ತವೆ. ಆದರೆ ಈ ಕಂಪನಿಗಳಿಗೆ ಅವರ ಸಂಪರ್ಕ ಕಡಿದು ಹೋಗುತ್ತಿದ್ದಂತೆಯೇ ಅವುಗಳ ಸತ್ವವೇ ಹೋಗಿ ಅವು ಮಾಯವಾದವು. ಇದೇ ಮಾತು ಕರ್ನಾಟಕದ ಉಳಿದ ಕಂಪನಿಗಳಿಗೂ ಅನ್ವಯಿಸುತ್ತದೆ. ಸಾಧಾರಣವಾಗಿ ಬಹುಮಟ್ಟಿನ ಕಂಪನಿಗಳಿಗೆ ಸೀಮಿತಗುರಿ ಇದ್ದದ್ದು ಅವುಗಳ ಅಲ್ಪಾಯಸ್ಸಿಗೆ ಕಾರಣ ಎಂದು ಊಹಿಸಬಹುದು.

ಕಲೆ, ವ್ಯವಹಾರ, ಶಿಸ್ತು, ಕಲ್ಪನೆ, ಪ್ರೇಕ್ಷಕರ ಮೇಲಿನ ಕಣ್ಣು, ಸಾಧನೆ, ಧೈರ್ಯ, ಗುರಿ ಇವೇ ಮೊದಲಾದವು ವೃತ್ತಿ ಕಂಪನಿಯ ಬೆಳವಣಿಗೆಗೆ ಮುಖ್ಯವಾದ ಅಂಶಗಳು. ಮಾಲೀಕರು ಇವುಗಳ ಮಹತ್ವವನ್ನು ತಿಳಿದು ಎಲ್ಲಿಯವರೆಗೆ ಕಂಪನಿಗಳನ್ನು ನಡೆಸಿಕೊಂಡು ಹೋದರೋ ಅಲ್ಲಿಯವರೆಗೆ ಆಯಾ ಕಂಪನಿಗಳ ಹಿತಿಮಿತಿಯೊಳಗೆ ಅವು ಬಾಳಿದವು. ಇವುಗಳ ಕೊರತೆ ಇದ್ದದ್ದರಿಂದ ಕಂಪನಿಗಳು ದೀರ್ಘಕಾಲ ಬಾಳಲಿಲ್ಲ. ಆದರೆ ಗುಬ್ಬಿ ಕಂಪನಿ ಈ ಎಲ್ಲಾ ಕಂಪನಿಗಳಿಂದ ಬೇರೆಯೇ ಆಯಿತು. ಅದು ಎಲ್ಲಾ ರೀತಿಯಲ್ಲೂ ಪರಿಪೂರ್ಣ ಎಂದು ಅರ್ಥವಲ್ಲ. ಆದರೆ ವೀರಣ್ಣನವರಿಗೆ ಈ ಎಲ್ಲಾ ಅಂಶಗಳ ಪರಿಚಯವಿದ್ದುದರಿಂದ ಇದಕ್ಕೆ ಗಮನ ನೀಡಿದ್ದರಿಂದ ಏನೇ ಎಡರುತೊಡರು ಬಂದರೂ ಅವನ್ನೆಲ್ಲಾ ಗೆದ್ದು ಉಳಿದು ಬಂದಿದೆ ಎಂದು ಹೇಳಬಹುದು.

ಇಂತಹ ವೀರಣ್ಣನವರು ಚಿಕ್ಕ ವಯಸ್ಸಿನಲ್ಲಿಯೇ ಕಂಪನಿಯನ್ನು ಪ್ರವೇಶಿಸಿ ಅಪಾರ ಜನಮನ್ನಣೆಗೆ ಪಾತ್ರರಾಗಿದ್ದಾರೆ. ಈ ಒಂದು ರಂಗಭೂಮಿಯಲ್ಲಿ ಅಪಾರ ಸಾಧನೆಯನ್ನು ಮಾಡಿದ್ದಾರೆ. ಇವರ ಈ ಸಾಧನೆ ನಿಜಕ್ಕೂ ಹೆಮ್ಮೆಯ ವಿಷಯ. ಇವರು ಕೊನೆಯ ಉಸಿರು ಇರುವವರೆಗೂ ರಂಗಕ್ಕಾಗಿಯೇ ದುಡಿದರು. ಇವರಿಗೆ

ತಮ್ಮದೇಆದ ಒಂದು ಗುರಿ ಮುಟ್ಟುವ ಛಲ ಇತ್ತು. ಜೊತೆಗೆ ಇವರು ಆಶಾವಾದಿಗಳು ಜೊತೆಗೆ ಕಂಪನಿಯಲ್ಲಿ ಅನೇಕ ಬದಲಾವಣೆಗಳನ್ನು ತಂದರು.

ಗುಬ್ಬಿ ಕಂಪನಿಗೆ ಪ್ರವೇಶಿಸಿದ ವೀರಣ್ಣನವರು ತಮ್ಮ ಇಡೀ ಜೀವನವನ್ನೇ ಈ ಕಂಪನಿಯ ಪುರೋಭಿವೃದ್ಧಿಗಾಗಿ ಮುಡಿಪಾಗಿಟ್ಟರು. "೧೯೨೦ರ ಹೊತ್ತಿಗೆ ಗುಬ್ಬಿ ಕಂಪನಿಯ ಮಾಲೀಕತ್ವ ವಹಿಸಿಕೊಂಡು ಸುಮಾರು ಮೂರು ದಶಕಗಳ ಕಾಲ ಅನೇಕ ಜನಪ್ರಿಯ ನಾಟಕಗಳನ್ನು ದಕ್ಷಿಣ ಭಾರತದಲ್ಲೆಲ್ಲ ಪ್ರದರ್ಶಿಸಿ ಪ್ರಖ್ಯಾತಿ ಪಡೆದರು.[೧]

ವೃತ್ತಿ ನಾಟಕ ಕಂಪನಿಗಳ ಇತಿಹಾಸದಲ್ಲಿ ಗುಬ್ಬಿ ಕಂಪನಿ ಒಂದು ಮೈಲಿಗಲ್ಲು ಈ ಕಂಪನಿ ಆ ಕಾಲದಲ್ಲಿ ಎಷ್ಟು ಪ್ರಖ್ಯಾತವಾಗಿತ್ತೆಂದರೆ ಗುಬ್ಬಿ ಕಂಪನಿಯ ನಾಟಕ ಪ್ರದರ್ಶನವಿದ್ದ ಊರಿನಲ್ಲಿ ಸಿನಿಮಾ ಮಂದಿರದವರು ತಮ್ಮ ಚಿತ್ರಪ್ರದರ್ಶನವನ್ನು ರದ್ದುಗೊಳಿಸುತ್ತಿದ್ದರಂತೆ. ನಾಟಕರತ್ನ ಎಂಬ ಬಿರುದು ಪಡೆದ ಗುಬ್ಬಿ ವೀರಣ್ಣನವರ ಕಂಪನಿಯಲ್ಲಿ ನೂರಾರು ನಟನಟಿಯರಿದ್ದುದಲ್ಲದೆ ಆನೆ, ಕುದುರೆ, ಜಿಂಕೆ, ಗಿಳಿ, ನವಿಲು ಇತ್ಯಾದಿ ಹಲವು ಪ್ರಾಣಿ ಪಕ್ಷಿಗಳು ಇದ್ದವು. ನೋಡುವವರಿಗೆ ಅದೊಂದು ಸರ್ಕಸ್ ಕಂಪನಿಯೆಂಬ ಭ್ರಮೆ ಉಂಟಾಗುತ್ತಿತ್ತು. ಇದಕ್ಕೆಲ್ಲಾ ಕಾರಣ ವೀರಣ್ಣನವರ ಕಲಾಪ್ರಜ್ಞೆ ಮತ್ತು ಬುದ್ಧಿ ಕೌಶಲ್ಯತೆ. ಇದರಿಂದಾಗಿ ೧೯೩೮ರ ಹೊತ್ತಿಗೆ ಗುಬ್ಬಿ ಕಂಪನಿಗೆ ಸರಿಸಾಟಿಯಾಗಿ ನಿಲ್ಲಬಲ್ಲ ವೃತ್ತಿನಾಟಕ ಕಂಪನಿ ಇಡೀ ದಕ್ಷಿಣ ಭಾರತದಲ್ಲಿ ಯಾವುದೂ ಇರಲಿಲ್ಲ.

ಗುಬ್ಬಿ ಕಂಪನಿಯ ಇತಿಹಾಸದಲ್ಲಿ ಅನೇಕ ದೃಷ್ಟಿಗಳಿಂದ 'ಕುರುಕ್ಷೇತ್ರ' ಹಾಗೂ 'ದಶಾವತಾರ' ನಾಟಕಗಳು ಮುಖ್ಯವಾಗಿ ನಿಲ್ಲುತ್ತವೆ, ವೃತ್ತಿ ಕಂಪನಿಯ ಇತಿಹಾಸದಲ್ಲೇ ಇವು ಪ್ರತ್ಯೇಕವಾಗಿ ನಿಲ್ಲಬಲ್ಲವು ಎಂದು ಹೇಳಬಹುದು. ಇಂತಹ ನಾಟಕದಲ್ಲಿ ಯುದ್ಧದ ಒಂದು ಸನ್ನಿವೇಶ ಬಂದರೆ, ಜೀವಂತ ಪ್ರಾಣಿಗಳು ರಂಗದ ಮೇಲೆ ಬಂದರೆ ಸಹಜವಾದ ವಾತಾವರಣವನ್ನು ರೂಪಿಸಬಹುದಲ್ಲವೇ? ಎಂದು ಗುಬ್ಬಿ ವೀರಣ್ಣನವರು ಯೋಚಿಸಿದರು. ಅದರಂತೆ ಪ್ರಯತ್ನಮಾಡಿ ಆ ಸನ್ನಿವೇಶಕ್ಕೆ ಬೇಕಾದ ಪ್ರಾಣಿಗಳನ್ನು ಅವರು ಸಂಗ್ರಹಿಸಿದರು. ಕಲಾವಿದರಿಗೆ ನಾಟಕದ ರಿಹರ್ಸಲ್ ನಡೆಯುವಂತೆಯೇ ಪ್ರಾಣಿಗಳಿಗೂ ರಿಹರ್ಸಲ್ ನಡೆಯಿತು. ನಾಟಕ ಪ್ರಾರಂಭವಾದಾಗ ಯುದ್ಧದ ಸನ್ನಿವೇಶದಲ್ಲಿ ಜೀವಂತವಾದ ಆನೆ, ಕುದುರೆಗಳು ರಂಗಭೂಮಿಯ ಮೇಲೆ

---

೧. ಎನ್.ಎಸ್.ವೆಂಕಟರಾಮ್, ರಂಗಭೂಮಿ, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್ ಎಂಜಿನ್ ಸೆಂಟರ್, ಕ್ರೆಸೆಂಟ್ ರಸ್ತೆ, ಪು. ೨೭

[illegible]

[illegible]

[illegible]

[illegible]

[illegible]

ಬಂದದ್ದನ್ನು ನೋಡಿ ಪ್ರೇಕ್ಷಕರು ತಮ್ಮ ಮುಂದೆ ನಿಜವಾಗಿಯೂ ಯುದ್ಧ ನಡೆಯುತ್ತಿದೆಯೇನೋ ಎಂದು ಬೆರಗು ಪಟ್ಟರು. ರಂಗಭೂಮಿ ಮೇಲೆ ಅಂತಹ ಸಹಜ ವಾತಾರವಣವನ್ನು ಮೂಡಿಸಿದ ಮೊದಲ ನಾಟಕ ಕಂಪನಿಯ ಮಾಲೀಕರು ವೀರಣ್ಣನವರು.

ಗುಬ್ಬಿ ವೀರಣ್ಣನವರ ಪ್ರಯೋಗಶೀಲತೆಗೆ ಇದು ಒಂದು ನಿದರ್ಶನ ಮಾತ್ರ. ರಂಗಭೂಮಿಯ ಮೇಲೆ ಅವರು ಮಾಡಿದ ಪ್ರಯೋಗಗಳಿಗೆ ಲೆಕ್ಕವಿಲ್ಲ. ಒಂದು ಹೊಸ ನಾಟಕವನ್ನು ರಂಗದ ಮೇಲೆ ತರುವಾಗ ಏನಂದರೂ ಹೊಸದು ಇದ್ದರೇನೆ ಅವರಿಗೆ ಸಮಾಧಾನ. ನಾಟಕ ಕಂಪನಿಯ ಆಸ್ತಿಯೆಂದರೆ ನಾಲ್ಕೈದು ಪರದೆಗಳು, ಸೈಡ್ ವಿಂಗ್ಸ್ ಎನ್ನುವ ಭಾವನೆ ಜನರಲ್ಲಿ ಮೂಡುವಂತೆ ಮಾಡಿದ್ದುದು ಮಾತ್ರವಲ್ಲದೆ ಇತರ ಚಿಕ್ಕಪುಟ್ಟ ಕಂಪನಿಗಳು. ಈ ಸಂಸ್ಥೆಯನ್ನೇ ಅನುಕರಿಸುವಂತಹ ವಾತಾರವಣವನ್ನು ವೀರಣ್ಣನವರು ನಿರ್ಮಿಸಿದರು. ಇದಕ್ಕೆ ಅವರು ಎಷ್ಟು ಶ್ರಮಪಟ್ಟರು, ಎಷ್ಟು ಹಣ ಖರ್ಚುಮಾಡಿದರೂ ಎಂಬುದು ಈಗ ಊಹೆಗೂ ನಿಲುಕದ ಮಾತು. ಅದರಲ್ಲಿಯೂ ಆಗಿನ ಕಾಲದಲ್ಲಿ ನಾಟಕದ ಕಂಪನಿಯೆಂದರೆ ಜನರಲ್ಲಿ ಅಂತಹ ಒಳ್ಳೆಯ ಭಾವನೆಯೇನು ಇರಲಿಲ್ಲ. ತಮ್ಮ ನಡವಳಿಕೆಯಿಂದ ಜನರಲ್ಲಿ ಒಳ್ಳೆಯ ಭಾವನೆಯನ್ನು ಮೂಡಿಸಿ ನಾಟಕ ಕಂಪನಿಯವರ ನಂಬಿಕೆಗೆ ಅರ್ಹರು ಎನ್ನುವುದನ್ನು ತೋರಿಸಿಕೊಟ್ಟವರು ವೀರಣ್ಣನವರು.

ವ್ಯಕ್ತಿಗಿಂತ ಸಂಸ್ಥೆ ದೊಡ್ಡದು ಎನ್ನುವುದನ್ನು ಮನಗಂಡವರು ವೀರಣ್ಣನವರು. ತನಗಿಂತ ಗುಬ್ಬಿ ಕಂಪನಿ ದೊಡ್ಡದು ಎನ್ನುವ ಭಾವನೆಯಿಂದಲೇ ಮೊದಲಿನಿಂದಲೂ ಅವರು ಕೆಲಸ ಮಾಡುತ್ತಾ ಬಂದರು. ಸ್ವತಃ ತಾವೇ ಒಳ್ಳೆಯ ನಟರಾದರು ಆದರೆ ಎಲ್ಲ ನಾಟಕಗಳಲ್ಲಿ ತಾವೇ ಪ್ರಮುಖ ಪಾತ್ರವನ್ನು ವಹಿಸಬೇಕು ಎನ್ನುವಂತೆ ಅವರು ನಡೆದುಕೊಳ್ಳಲಿಲ್ಲ. ಆಯಾ ನಾಟಕದಲ್ಲಿ ಆಯಾ ಪಾತ್ರಕ್ಕೆ ಸರಿಯಾದ ವ್ಯಕ್ತಿಯನ್ನೇ ಅವರು ಕಷ್ಟಪಟ್ಟು ಕರೆದು ತರುತ್ತಿದ್ದರು. ಹೀಗಾಗಿ ನಾಟಕದ ಪ್ರಮುಖ ಪಾತ್ರಕ್ಕೂ ಸಂಸ್ಥೆಯ ಯಜನಾಮಿಕೆಗೂ ಇದ್ದ ನಂಟನ್ನು ವೀರಣ್ಣನವರು ಕಳಚಿ ಹಾಕಿದರು.

ವೀರಣ್ಣನವರ ನಾಟಕಗಳಲ್ಲಿ 'ಸದಾರಮೆ' ನಾಟಕ ಪ್ರತ್ಯೇಕವಾಗಿ ನಿಲ್ಲುತ್ತದೆ. ಈ ನಾಟಕದಲ್ಲಿ ಆದಿಮೂರ್ತಿ, ಕಳ್ಳ, ಸಾಬಿ ಈ ಮೂರು ಪಾತ್ರಗಳನ್ನು ಸ್ವತಃ ವೀರಣ್ಣನವರೊಬ್ಬರೇ ವಹಿಸುತ್ತಿದ್ದರು. 'ಸದಾರಮೆ' ಗುಬ್ಬಿ ಕಂಪನಿಯ ಬಹು ಜನಪ್ರಿಯ ನಾಟಕವಾಗಿತ್ತು. ಈ ನಾಟಕ ಮೈಸೂರಿನಲ್ಲಿ ನಡೆಯುತ್ತಿದ್ದಾಗ

[illegible]

[illegible]

[illegible]

[illegible]

[illegible]

ವೀರಣ್ಣನವರ ಈ ಪಾತ್ರಗಳ ಅಭಿನಯ ಕೀರ್ತಿ ಅರಮನೆಯನ್ನೂ ಮುಟ್ಟಿತು. ವೀರಣ್ಣ ಜನಪ್ರಿಯತೆಯನ್ನು ಸಂಪಾದಿಸಿದ್ದರು.

ವೀರಣ್ಣನವರ ಕಾಲದಲ್ಲಿನ ನಾಟಕಗಳೆಂದರೆ 'ಸದಾರಮೆ' 'ಕುರುಕ್ಷೇತ್ರ' ಅಕ್ಕಮಹಾದೇವಿ, ಸಂಪೂರ್ಣ ರಾಮಾಯಣ', ಕೃಷ್ಣಲೀಲಾ, ರಾಜಾಗೋಪಿಚಂದ್, ದಶಾವತಾರ, ಅಣ್ಣತಮ್ಮ, ಲವಕುಶ ಮೊದಲಾದ ನಾಟಕಗಳು ಕರ್ನಾಟಕದಲ್ಲಿಯೂ, ಆಂಧ್ರ, ತಮಿಳುನಾಡುಗಳಲ್ಲಿಯೂ ಅಪಾರ ಯಶಸ್ಸನ್ನು ಗಳಿಸಿ ಗುಬ್ಬಿ ಕಂಪನಿಯೆಂದರೆ ನಿಜವಾಗಿ ಕನ್ನಡ ರಂಗಭೂಮಿಯನ್ನು ಪ್ರತಿನಿಧಿಸುವಂತಹ ಸಂಸ್ಥೆ ಎನ್ನುವ ಹೆಸರನ್ನು ಪಡೆಯಿತು.

ವೀರಣ್ಣನವರು ಗುಬ್ಬಿ ಕಂಪನಿಯ ಮೂಲಕ ನಾನಾ ಬಗೆಯಲ್ಲಿ ನಾನಾ ಕೊಡುಗೆಗಳನ್ನು ನಮಗೆ ನೀಡಿದ್ದಾರೆ. ನಟರ ಜೀವನದಲ್ಲಿ ಹಾಸು ಹೊಕ್ಕಾಗಿದ್ದ ಕೊಳಕನ್ನು ತೆಗೆದು ಅವರ ಜೀವನವನ್ನು ಸುಧಾರಿಸಿದವರು. ಸಮಾಜ ಇವರನ್ನು ಗೌರವಿಸುವಂತೆ ಮಾಡಿ ಇವರಿಗೆ ಗಣ್ಯ ಸ್ಥಾನವನ್ನು ದೊರಕಿಸಿಕೊಟ್ಟರು.

ವೀರಣ್ಣನವರು ಕಂಪನಿಯಲ್ಲಿ ಅನೇಕ ಬದಲಾವಣೆಗಳನ್ನು ತಂದರು. ಇದನ್ನು ಮಾಡುವಾಗ ಅವರಿಗೆ ಅವರ ಅನುಭವಗಳೇ ದಾರಿ ದೀಪಗಳಾದವು. ಜೊತೆಗೆ ತಿಳಿದವರ ಅನುಭವಗಳನ್ನು ತೆಗೆದುಕೊಂಡು ಅವನ್ನು ತಮ್ಮವನ್ನಾಗಿ ಮಾಡಿಕೊಂಡರು. ಈ ಸಂದರ್ಭವನ್ನು ನೋಡಿದರೆ ಸರ್ವಜ್ಞನ ವಚನ ನೆನಪಿಗೆ ಬರುತ್ತದೆ.

"ಸರ್ವಜ್ಞನೆಂಬುವನು ಗರ್ವದಿಂದಾವನೆ
ಸರ್ವರೋಳೊಂದೊಂದು ನುಡಿಗಲಿತು ವಿದ್ಯೆಯ
ಪರ್ವತವೇ ಆದ ಸರ್ವಜ್ಞ"

"ಸರ್ವಜ್ಞನಂತೆ ವೀರಣ್ಣನವರು ಎಲ್ಲರಿಂದಲೂ ಒಂದೊಂದನ್ನು ತೆಗೆದುಕೊಂಡು ಅದನ್ನು ತಮ್ಮದನ್ನಾಗಿ ಮಾಡಿಕೊಂಡು ರಂಗದ ಮೂಲಕ ನಮ್ಮೆಲರಿಗೂ ನೀಡಿದರು. ವಿದ್ಯೆಗೆ ವಿನಯ ಭೂಷಣ ಎಂದಿದೆ. ವೀರಣ್ಣನವರ ಆಸ್ತಿ ಅದೇ". [೧]

---

೧. ಡಾ. ಸಿಂಧುವಳ್ಳಿ ಅನಂತಮೂರ್ತಿ, ಗುಬ್ಬಿಕಂಪನಿ, ಮೈ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, ಪು. ೨೭೮.

ಉದಾ: ಸಿರ್ಸಿಯ ಮಾರಿಕಾಂಬಾ ಜಾತ್ರೆಯ ಸಂದರ್ಭದಲ್ಲಿ ಗೋಕಾಕ್ ಮತ್ತು ಗುಬ್ಬಿ ಕಂಪನಿ ಸ್ಪರ್ಧೆಗಿಳಿಯಿತು. ಇದರ ಮಾಲೀಕರು ಅಧೈರ್ಯದಿಂದಲೇ ಮಹಾಂತೇಶ್ ಶಾಸ್ತ್ರಿಗಳ ರೂಪವತಿ ನಾಟಕವನ್ನು ಪ್ರದರ್ಶನಕ್ಕೆತ್ತಿಕೊಂಡರು. ಮೊದಲ ದಿನ ಆದಾಯ ಎರಡೂ ಕಂಪನಿಗಳಿಗೆ ಹೆಚ್ಚು ಕಡಿಮೆಯಾಯಿತಾದರೂ ಮರುದಿನ ಗೋಕಾಕ್ ಕಂಪನಿಯಲ್ಲಿ ಜನದಟ್ಟಣಿ ಮಿತಿಮೀರಿತು. ಇವರ ರಹಸ್ಯವೇನೆಂದು ತಿಳಿಯಲು ಸ್ವತಃ ವೀರಣ್ಣನವರು ಗೋಕಾಕ್ ಕಂಪನಿಗೆ ಬಂದು ನಾಟಕ ನೋಡಿದರು. ಸಾಮಾಜಿಕ ಕಥಾವಸ್ತು, ಭಾವಪೂರ್ಣ ಅಭಿನಯದಿಂದ ಪ್ರೇಕ್ಷಕರನ್ನು ಸೆರೆಹಿಡಿದ ಸಾಧನೆಯನ್ನು ಮುಕ್ತ ಕಂಠದಿಂದ ಹೊಗಳಿದರು. ಈ ಅನುಭವದಿಂದಲೇ "ವೀರಣ್ಣನವರು ಮುಂದೆ ಮಹಾಂತೇಶ್ ಶಾಸ್ತ್ರಿಗಳಿಂದ ಅಣ್ಣ-ತಮ್ಮ ನಾಟಕ ಬರೆಯಿಸಿದರು. ಅದು ಗುಬ್ಬಿ ಕಂಪನಿಯಲ್ಲಿ ಅತ್ಯಂತ ಯಶಸ್ವಿಯಾಗಿ ಜಯಭೇರಿ ಹೊಡೆಯಿತು."[೧]

ನಂತರ ೧೯೩೭ರಲ್ಲಿ ಗುಬ್ಬಿ ಕಂಪನಿ ಹುಬ್ಬಳ್ಳಿ ಮುಕ್ಕಾಮಿನಲ್ಲಿ 'ಕುರುಕ್ಷೇತ್ರ' ನಾಟಕ ಪ್ರದರ್ಶಿಸುತ್ತಿದ್ದಾಗ ಒಂದು ದಿನ ಶ್ರೀ ದತ್ತಾತ್ರೇಯ ಕಂಪನಿಯ ಮಾಲೀಕರಾದ ಗರುಡ ಸದಾಶಿವರಾಯರು ನಾಟಕದಲ್ಲಿಯ ಸೀನರಿಗಳನ್ನು ನೋಡಿ ಮನಸಾರೆ ಮೆಚ್ಚಿಕೊಂಡರು. ನಂತರ ರಂಗದ ಮೇಲೆ ಹೋಗಿ 'ಗುಬ್ಬಿಯು ಗರುಡನ ಮೇಲೆ ಹಾರಿತು' ಎಂದು ಗುಬ್ಬಿ ಕಂಪನಿಯ ಸಾಧನೆಯ ಬಗ್ಗೆ ಮೆಚ್ಚುಗೆ ಸೂಚಿಸಿದರು.

ಕವಿಯಾದವನಿಗೆ ಕಲಾವಿದನಿಗೆ ಆಳುವ ದೊರೆಯಿಂದ ಚಿನ್ನದ ಕಂಕಣವನ್ನು ಪಡೆಯುವುದಕ್ಕಿಂತ ಒಬ್ಬ ಸಹೃದಯನಿಂದ ಪಡೆದ ಒಂದು ಮೆಚ್ಚುಗೆಯ ಮಾತು ಹೆಚ್ಚು ಸಂತೋಷವನ್ನು ಕೊಡುತ್ತದೆ. ವೀರಣ್ಣನವರು ಲಕ್ಷಾಂತರ ಜನರ ಹೃದಯಗಳನ್ನು ಸೂರೆಗೊಂಡರು. ಜನ ದಿನ ನಿತ್ಯದ ತಮ್ಮ ತಾಪತ್ರಯಗಳನ್ನು ಮರೆತು ನಕ್ಕು ಕುಣಿಯುವಂತೆ ಮಾಡಿದರು.

ವೀರಣ್ಣನವರು ಇಷ್ಟೆಲ್ಲಾ ಸಾಧಿಸಬೇಕಾದರೆ ಅವರಿಗೆ ವ್ಯವಹಾರ ಜ್ಞಾನ ಹಾಗೂ ಕಲ್ಪನಾಶಕ್ತಿ ಬಹಳ ಚೆನ್ನಾಗಿದ್ದವು. ನಾಟಕ ಚೆನ್ನಾಗಿ ಆಗಬೇಕಾದರೆ ಯಾವುದೇ 'ಅಂಗ'ದ ಮೇಲೆ ಹಣ ಖರ್ಚು ಮಾಡಲು ಅವರು ಹಿಂದು ಮುಂದು ನೋಡುತ್ತಿರಲಿಲ್ಲ. ಖರ್ಚು ಮಾಡಿದರು ಸಂಪಾದನೆಯನ್ನು ಮಾಡುತ್ತಿದ್ದರು.

---

೧. ಡಾ.ರಾಮಕೃಷ್ಣ ಮರಾಠ, ಉತ್ತರ ಕರ್ನಾಟಕದ ವೃತ್ತಿರಂಗದ ಭೂಮಿ, ಇಳಾ ಪ್ರಿಂಟರ್ಸ್, ಚಾಮರಾಜ ಪೇಟೆ, ಬೆಂಗಳೂರು, ಪು. ೩೫.

ನಾಟಕಕ್ಕೆ ಸಂಬಂಧಿಸಿದವರು ಯಾವಾಗ ಯಾರೇ ಬರಲಿ ಅವರಿಗೆ ಆಶ್ರಯ ಕೊಡುತ್ತಿದ್ದರು. ಹೀಗೆ ಮಾಡುತ್ತಿದ್ದದ್ದು ಎರಡೂ ದೃಷ್ಟಿಗಳಿಂದ ಎಂದು ವಿಶ್ಲೇಷಿಸಬಹುದು. ಕೆಲಸವಿಲ್ಲದವ ಸಂಪಾಧನೆಯಿಲ್ಲದವ ನಿರಾಶನಾಗಿ ರಂಗದಿಂದ ದೂರ ಆಗಬಹುದು. ಹಾಗಾಗಬಾರದು ಎಂಬುದು ಒಂದು ದೃಷ್ಟಿ. ಅಂಥ ಸಮರ್ಥ ನಟ ತಾವು ಬಯಸಿದಾಗ ಸಿಗದಿರಬಹುದು. ಆದ್ದರಿಂದ ಅವನನ್ನು ಇಟ್ಟುಕೊಳ್ಳಬೇಕು ಎಂಬುದು ಇನ್ನೊಂದು ದೃಷ್ಟಿ.

"ಇವರ ಪ್ರೇಕ್ಷಕರ ಅಭಿರುಚಿಯನ್ನು ಗಮನಿಸಿ ಅವರು ನಾಟಕಗಳನ್ನು ಪ್ರದರ್ಶಿಸುತ್ತಾ ಬಂದರು. ಕೀಳು ದರ್ಜೆಯ ನಾಟಕಗಳನ್ನು ಕೊಡಲಿಲ್ಲ. ಆದ್ದರಿಂದಲೇ ತಮಿಳುನಾಡಿನಲ್ಲಿ ಅಲ್ಲಿಯವರು ಆಡುತ್ತಿದ್ದ 'ಸದಾರಮೆ'ಗೆ ಸಿಗದ ಗೌರವ ವೀರಣ್ಣನವರ 'ಸದಾರಮೆ'ಗೆ ಸಿಕ್ಕಿದ್ದು ಇದಕ್ಕೆ ನಿದರ್ಶನ. ವೀರಣ್ಣನವರಿಗೆ ಇದ್ದುದ್ದು ದೊಡ್ಡ ಗುರಿ. ಈ ಗುರಿ ಸಾಧನೆಗೆ ಬಹಳಷ್ಟು ಧೈರ್ಯವೂ ಇತ್ತು. ಏನೆಲ್ಲಾ ಕಷ್ಟ ಬಂದರೂ ಅವರು ಜಗ್ಗುತ್ತಿರಲಿಲ್ಲ. ಛಲ ಇತ್ತು ಒಳ್ಳೆಯದಕ್ಕಾಗಿ ಈ ಛಲ."[೧]

ಕುರುಕ್ಷೇತ್ರದ ನಾಟಕದ ಸಂದರ್ಭದಲ್ಲಿ ವೀರಣ್ಣನವರು ದುರ್ಯೋಧನನ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಆದಿಮೂರ್ತಿ, ಕಳ್ಳ, ಮಕರಂದ, ಅಗಸ ಮೊದಲಾದ ಪಾತ್ರಗಳನ್ನು ನೋಡಿ ಆನಂದ ಪಟ್ಟಿದ್ದ ಜನ ವೀರಣ್ಣನವರು ದುರ್ಯೋಧನನ ಪಾತ್ರದಲ್ಲಿ ಬಂದು ಗಂಭೀರವಾದ ಮಾತುಗಳನ್ನು ಆಡಲು ಪ್ರಾರಂಭಿಸಿದರೂ ಜನ ನಗುತ್ತಿದ್ದರು. ಜನ ತನ್ನಿಂದ ಹಾಸ್ಯ ಪಾತ್ರಗಳನ್ನು ನಿರೀಕ್ಷಿಸುತ್ತಾರೆಯೇ ಹೊರತು ಗಂಭೀರ ಪಾತ್ರಗಳನ್ನಲ್ಲ ಎನ್ನುವುದನ್ನು ವೀರಣ್ಣನವರು ತಿಳಿದುಕೊಂಡರು. ಒಂದೆರಡು ದಿನ ದುರ್ಯೋಧನನ ಪಾತ್ರ ಮಾಡಿ ಅನಂತರ ಅದನ್ನು ಬೇರೆಯೊಬ್ಬರಿಗೆ ಬಿಟ್ಟುಕೊಟ್ಟರು.

"ದಶಾತಾರ', 'ಕುರುಕ್ಷೇತ್ರ' ನಾಟಕಗಳು ಕನ್ನಡ ರಂಗಕ್ಕೆ ಅಲ್ಲದೇ ತಮಿಳು, ಆಂಧ್ರ ಪ್ರದೇಶಗಳಿಗೂ ಮಾದರಿಯಾಗಿ ನಿಂತಿರುವ ಭವ್ಯ ಪ್ರದರ್ಶನಗಳು ಮಾತ್ರವೇ ಅಲ್ಲ ಅವು ನಮ್ಮನ್ನು ಜಾಗೃತರನ್ನಾಗಿ ಮಾಡಿದೆ. ದಶಾವತಾರ ಮತ್ತು ಕುರುಕ್ಷೇತ್ರ ನಾಟಕಗಳಲ್ಲಿ ಇನ್ನಿಲ್ಲದ ಉಡುಗೆ, ತೊಡುಗೆ, ರಂಗಸಜ್ಜಿಕೆ ಹಾಗೂ ರಂಗವಿನ್ಯಾಸ ನೀಡಿ

---

೧. ಡಾ. ಸಿಂಧುವಳ್ಳಿ ಅನಂತಮೂರ್ತಿ, ಗುಬ್ಬಿಕಂಪನಿ, ಮೈ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, ಪು. ೨೭೧.

[illegible]

[illegible]

[illegible]

[illegible]

[illegible]

[illegible]

ಐತಿಹಾಸಿಕ ಪೌರಾಣಿಕ ನಾಟಕಗಳಿಗೆ ಉಡುಗೆ–ತೊಡುಗೆ ರಂಗಸಜ್ಜಿಕೆ ಎಂದರೆ ಇದೇ ಎಂಬುದು ಗುಬ್ಬಿ ಕಂಪನಿ ತೋರಿಸಿ ಕೊಟ್ಟಿವೆ."[೧]

'ಪ್ರಭಾಮಣಿ ವಿಜಯ'ದಲ್ಲಿ ವೀರಣ್ಣನವರು ವಹಿಸುತ್ತಿದ್ದ ವಿರೋಚನನ ಪಾತ್ರ ವಿಚಿತ್ರ ರೀತಿಯದು. ವಿರೋಚನ ಅರ್ದ ಹುಚ್ಚ, ಪ್ರಾಪ್ತ ವಯಸ್ಕನಾದರು ಎಳೆಯ ಹುಡುಗನ ವರ್ತನೆ ಜೇಬುಗಳ ತುಂಬ ಪೀಪಿ ಇತ್ಯಾದಿ, ಆಟದ ಸಾಮಾನು ತುಂಬಿಕೊಂಡು ರಂಗದ ಮೇಲೆ ಬಂದು ಜೇಬಿನಿಂದ ಒಂದೊಂದೇ ತೆಗೆಯಲು ಪ್ರಾರಂಭಿಸಿದರೆ ಪ್ರೇಕ್ಷಕರಿಗೆ ಖುಷಿಯೋ ಖುಷಿ.

'ಪಾಂಡವ ವಿಜಯ'ದಲ್ಲಿ ಒಬ್ಬ ಸಾಬಿಯ ಪಾತ್ರ. ಇಲ್ಲಿ ಜನರನ್ನು ನಗಿಸುವುದು ವೀರಣ್ಣನವರ ಉದ್ದೇಶ. 'ಕಂಸವಧಾ'ದಲ್ಲಿ ವೀರಣ್ಣನವರದು ಅಗಸನ ಪಾತ್ರ– ಊರಿನ ಬಟ್ಟೆಯನ್ನೆಲ್ಲಾ ತಂದು ಒಗೆಯುತ್ತಾ "ಅಗಸನಿಂದಲೇ ಜಗಕೆ ಸೊಗಸು ಕಾಣ್‌ಲಾ" ಎಂದು ಹಾಡಿದರೆ ಚಪ್ಪಾಳೆಗಳ ಸುರಿಮಳೆ.

'ಸದಾರಮೆ' ನಾಟಕದಲ್ಲಿ ವೀರಣ್ಣನವರು ಆದಿಮೂರ್ತಿ ಮತ್ತು ಕಳ್ಳನ ಪಾತ್ರ ವಹಿಸುತ್ತಿದ್ದರು. "ಒಳ್ಳೆ ಸಮಯ ಒಳ್ಳೆ ಸಮಯ ಒಳ್ಳೆ ಸಮಯವೂ.... ಕಳ್ಳತನ ಮಾಡಲಿಕೆ ಒಳ್ಳೆ ಸಮಯವೂ" ಎನ್ನುವ ಹಾಡನ್ನು ಹಾಡಿಕೊಂಡು ರಂಗದ ಮೇಲೆ ಕಳ್ಳ ಪ್ರವೇಶಿಸಿದರೆ ಜನರಿಗೆ ಎಷ್ಟು ಆನಂದವೋ! ಒನ್ಸ್ ಮೋರ್ ಒನ್ಸ್ ಮೋರ್ ಎಂದು ಹೇಳಿ ಪದೇ ಪದೇ ಈ ಹಾಡನ್ನು ಹಾಡಿಸಿ ಆನಂದಿಸುತ್ತಿದ್ದರು. ಹೀಗೆ ನಾಟಕಗಳಲ್ಲಿ ಅನೇಕ ಪಾತ್ರಗಳನ್ನು ವಹಿಸುತ್ತಾ ಅದರಲ್ಲೂ ಹೆಚ್ಚಾಗಿ ಹಾಸ್ಯ ಪಾತ್ರಗಳನ್ನು ವಹಿಸುತ್ತಾ ಜನರಿಗೆ ಮನರಂಜನೆಯನ್ನು ನೀಡಿ ಅವರಲ್ಲಿನ ಎಲ್ಲಾ ರೀತಿಯ ಧಣಿವನ್ನು ಓಡಿಸುತ್ತಿದ್ದರು.

ನಾಟಕ ನಡೆಯುತ್ತಿದ್ದಾಗ ತಮಗೆ ಎಷ್ಟೇ ತೊಂದರೆಗಳು ಬರಲಿ ನಾಟಕವನ್ನಾಡುವುದಾಗಲೀ, ತಾವು ಪಾತ್ರ ವಹಿಸುವುದನ್ನಾಗಲಿ ವೀರಣ್ಣನವರು ನಿಲ್ಲಿಸುತ್ತಿರಲಿಲ್ಲ. ಒಂದು ರಾತ್ರಿ 'ಸದಾರಮೆ' ನಾಟಕ ನಡೆಯುತ್ತಿತ್ತು. ನಾಟಕದ ಮಧ್ಯದಲ್ಲೇ ಅವರ ಪತ್ನಿ ಜಿ.ಸುಂದರಮ್ಮನವರು ನಿಧನರಾದ ವಾರ್ತೆ ತಲುಪಿತು. ಒಂದು ಕ್ಷಣ ಮನಸ್ಸು ವಿಚಲಿತವಾದರೂ ಯಾರಿಗೂ ತೋರಿಸಿಕೊಳ್ಳದೆ ನಾಟಕ ನಿಲ್ಲಿಸಿದರೆ ಪ್ರೇಕ್ಷಕರಿಗೆ ರಸಭಂಗವಾಗುವುದು ಎಂದು ಯೋಚಿಸಿ ಕಳ್ಳನ ಪಾತ್ರದಲ್ಲಿ ರಂಗ ಪ್ರವೇಶಿಸಿದರು. ತಮ್ಮ ಜೊತೆಯಲ್ಲಿ ಅಭಿನಯಿಸುತ್ತಿದ್ದ ತಮ್ಮ ಮಕ್ಕಳಾದ

---

೧. ಬಿ.ಪುಟ್ಟಸ್ವಾಮಯ್ಯ, ಕುರುಕ್ಷೇತ್ರ, ಪು. ೫೭.

ಸ್ವರ್ಣಮ್ಮ, ಮಾಲತಮ್ಮ ಅವರಿಗೆ ಅವರ ತಾಯಿ ಸತ್ತ ಸುಳಿವು ಕೂಡ ನೀಡಲಿಲ್ಲ. ನಾಟಕ ನಿಂತ ಮೇಲೆಯೇ ಮಕ್ಕಳಿಗೆ ಸುದ್ದಿ ತಿಳಿಸಿ ಕರೆದುಕೊಂಡು ಹೋದರು. ಎಂತಹ ಗಳಿಗೆಯಲ್ಲೂ ಪ್ರೇಕ್ಷಕರ ಉತ್ಸಾಹಕ್ಕೆ ಭಂಗತರಬಾರದು ಎಂದು ನಡೆದುಕೊಳ್ಳುವ ವೀರಣ್ಣನವರಂತಹ ಕಲಾವಿದರು ಇರುವುದು ಅಪರೂಪ. ಹೀಗೆ ಗುಬ್ಬಿ ಕಂಪನಿಗಾಗಿ ವೀರಣ್ಣನವರು ತಮ್ಮ ಸರ್ವಸ್ವವನ್ನೇ ಮುಡುಪಾಗಿಟ್ಟರು. ಹಳೆಯ ಮೈಸೂರು ಪ್ರಾಂತ್ಯದಲ್ಲಿ ಗುಬ್ಬಿ ಕಂಪನಿಯ ಪ್ರಭಾವ ಈಗಲೂ ಅಚ್ಚಳಿಯದಂತಿರಲು ಕಾರಣ ಗುಬ್ಬಿ ವೀರಣ್ಣನವರು.

"ಕಾಯಕವೇ ಕೈಲಾಸ" ಎಂದು ಬಸವಣ್ಣನವರು ಹೇಳಿದರು. ವೀರಣ್ಣನವರ ಪಾಲಿಗೆ ಕಲೆಯೇ ಕಾಯಕ. ಬಡತನದಲ್ಲಿ ಹುಟ್ಟಿ ಶಾಲೆಗೆ ಹೋಗುವ ವಯಸ್ಸಿಗೆ ನೌಕರನಾಗಿ ನಾಟಕದ ಕಂಪನಿಯನ್ನು ಸೇರಿ ಯಜಮಾನನಿಂದ ಸಾಮಾನ್ಯ ನೌಕರನವರೆಗೆ ಎಲ್ಲರ ವಿಶ್ವಾಸವನ್ನು ಗಳಿಸಿ ಅವಕಾಶ ಬಂದಾಗ ಪಾತ್ರ ವಹಿಸಿ ರಂಗದ ಮೇಲೆ ತಮ್ಮ ಅಭಿನಯ ಸಾಮರ್ಥ್ಯವನ್ನು ಪ್ರದರ್ಶಿಸಿ ಜನತೆಯ ಮನಸ್ಸನ್ನು ಸೂರೆಗೊಂಡ ವೀರಣ್ಣನವರ ಜೀವನ ಇತರರಿಗೆ ಮಾರ್ಗದರ್ಶನವಾಗಿದೆ.

"ನಾಟ್ಯಂ ಭಿನ್ನಂ ಧೀರ್ಜನಸ್ಯ ಬಹುದಾಪ್ಯೇಕಂ ಸಮಾರಾಧನಮ್"[೧]

ಎಂಬಂತೆ ಜನತೆಗೆ ತೃಪ್ತಿಯನ್ನುಂಟು ಮಾಡಿದರು. ನಾಟಕದ ಹಾಸ್ಯ ಚಕ್ರವರ್ತಿ ಗುಬ್ಬಿ ವೀರಣ್ಣನವರು ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ಕೃಪಾ ಪೋಷಿತ ನಾಟಕ ಮಂಡಲಿಯ ನಿರ್ಮಾಪಕರಾಗಿ ತಮ್ಮ ನೆಚ್ಚಿನ ಲಲಿತ ಕಲೆಯಲ್ಲಿ ಹಲವರಿಗೆ ಆಶ್ರಯದಾತರಾಗಿದ್ದರು. ನಟ ಸಾರ್ವಭೌಮ ಡಾ.ರಾಜ್‌ಕುಮಾರ್‌ರವರಿಗೆ ಪ್ರೋತ್ಸಾಹ ನೀಡಿದರು. ವಿಶೇಷವಾಗಿ ಸ್ತ್ರೀ ಪಾತ್ರ ವಹಿಸುತ್ತಿದ್ದ ಅಭಿನಯ ಶಿಕಾಮಣಿ ಸುಬ್ಬುರಾಯರಿಗೂ, ಕಂಸ ಹಾಗೂ ರಾವಣ ಪಾತ್ರದಾರಿ ನಟ ಭಯಂಕರ ಗಂಗಾಧರರಾಯರಿಗೂ ಚಿತ್ರ ಕಲಾಚಾರ್ಯ ಜಿ.ವಿ.ನರಸಿಂಹಯ್ಯನವರಿಗೂ ತಮ್ಮ ನಾಟಕ ಮಂಡಲಿಯಲ್ಲಿ ಆಶ್ರಯ ನೀಡಿ ಕಲಾ ಪ್ರೇಮಿಗಳಿಗೆ ರಸದೌತಣವೆಸಗಿದ ಕೀರ್ತಿ ಗುಬ್ಬಿ ವೀರಣ್ಣನವರಿಗೆ ಮಾತ್ರ ಮೀಸಲು.

ವೀರಣ್ಣನವರು ಒಮ್ಮೆ ಈಗ ನಾಟಕಗಳನ್ನಾಡಲು ಇರುವ ಅನುಕೂಲಗಳನ್ನು ನೋಡಿ, "ಹಿಂದೆಯೇ ಇಂತಹ ಸೌಕರ್ಯಗಳು ನಮಗಿದ್ದಿದ್ದರೆ ಕ್ರಾಂತಿಯನ್ನೇ

---

೧. ಬಿ.ವಿ. ವೈಕುಂಠರಾಜು, ಕನ್ನಡ ರಂಗಭೂಮಿ, ಸನಾತನ ಪ್ರಕಾಶನ ಮುದ್ರಣಾಲಯ, ಪು. ೬೩.

ಮಾಡುತ್ತಿದ್ದವು" ಎಂದು ವೀರಣ್ಣನವರು ಹೇಳಿದರಂತೆ. ಅವರು ಹೊಸದಾಗಿ ಕ್ರಾಂತಿಯನ್ನೇ ಮಾಡಬೇಕಾಗಿಲ್ಲ ಅವರು ಜೀವನದುದ್ದಕ್ಕೂ ಕ್ರಾಂತಿಯನ್ನೇ ಮಾಡುತ್ತಾ ಬಂದರು.

ಕೊಡುಗೆಗಳು:

ವೀರಣ್ಣ ಕೇವಲ ಕಲಾಕ್ಷೇತ್ರಕ್ಕಲ್ಲದೆ ಕನ್ನಡ ರಂಗಭೂಮಿಗಲ್ಲದೆ ಇತರ ಕ್ಷೇತ್ರಗಳಿಗೂ ತಮ್ಮದೇ ಆದ ಕೊಡುಗೆಗಳನ್ನು ನೀಡುತ್ತಾ ಬಂದರು. ಆದ್ದರಿಂದಲೇ ಇವರ ಹೆಸರು ಅಚ್ಚಳಿಯದಂತೆ ಉಳಿದಿದೆ.

ಗುಬ್ಬಿ ವೀರಣ್ಣನವರು ಸಂಗೀತ, ಸಾಹಿತ್ಯ, ಶಿಕ್ಷಣ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದರು. ನಾಟಕ ರಂಗಕ್ಕೆ ಮತ್ತು ಚಲನಚಿತ್ರ ರಂಗಕ್ಕೆ ಅವರು ಸಲ್ಲಿಸಿದ ಸೇವೆ ಅದ್ವಿತೀಯವಾದುದು.

- ಶ್ರೀಮತಿ ಜಯಮ್ಮ ವೀರಣ್ಣ ಎಂಬ ಹೆಸರಿನಲ್ಲಿ ಗುಬ್ಬಿಯಲ್ಲಿ ಹೆಣ್ಣು ಮಕ್ಕಳ ಪ್ರೌಢಶಾಲೆಯನ್ನು ಕಟ್ಟಿಸಿದರು.
- ೧೯೨೪ರಲ್ಲಿ ಗುಬ್ಬಿ ಶ್ರೀ ಚನ್ನಬಸವೇಶ್ವರ ಸ್ವಾಮಿ ನಾಟಕ ಮಂದಿರ ಕಟ್ಟಿಸಿದರು.
- ೧೯೩೦ರಲ್ಲಿ ಶಿವಾನಂದ ಥಿಯೇಟರ್ಸ್ ಕಟ್ಟಿಸಿದರು.
- ೧೯೩೫ರಲ್ಲಿ ಸಾಗರ್ ಎಂಬ ಚಿತ್ರಮಂದಿರವನ್ನು ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿ ಕಟ್ಟಿಸಿದರು.
- ೧೯೩೬ರಲ್ಲಿ ತುಮಕೂರಿನಲ್ಲಿ ವಿನೋದ ಟಾಕೀಸ್ ಎಂಬ ಚಿತ್ರಮಂದಿರವನ್ನು ಕಟ್ಟಿಸಿದರು.
- ೧೯೪೨ರಲ್ಲಿ ತಿಪಟೂರಿನಲ್ಲಿ ಮತ್ತು ದಾವಣಗೆರೆಯಲ್ಲಿ ವಿನೋದ ಟಾಕೀಸ್ ನಿರ್ಮಿಸಿದರು.
- ೧೯೬೬ರಲ್ಲಿ ಶ್ರೀಕಂಠೀರವ ಸ್ಟುಡಿಯೋ ಆರಂಭಿಸಿದರು. ಅದನ್ನು ಪಬ್ಲಿಕ್ ಲಿಮಿಟೆಡ್ ಸಂಸ್ಥೆಯಾಗಿ ಮಾಡಿದರು.
- ೧೯೬೭ರಲ್ಲಿ ತುಮಕೂರಿನಲ್ಲಿ ಪ್ರಶಾಂತ ಚಿತ್ರಮಂದಿರ ಕಟ್ಟಿಸಿದರು.
- ಜಾತಿಭೇದ ಮಾಡದೆ ಲಕ್ಷಾಂತರ ರೂಪಾಯಿಗಳನ್ನು ವಿದ್ಯಾಸಂಸ್ಥೆಗಳಿಗೆ ವಿವಿಧ ಧಾರ್ಮಿಕ ಸಂಸ್ಥೆಗಳಿಗೆ ದಾನ ಮಾಡಿದ್ದಾರೆ.

ಬಿರುದುಗಳು ಮತ್ತು ಪ್ರಶಸ್ತಿಗಳು

ಕನ್ನಡ ರಂಗಭೂಮಿಯಲ್ಲಿ ಅಪಾರ ಜನಮನ್ನಣೆಯನ್ನು ಗಳಿಸಿದ ಗುಬ್ಬಿ ವೀರಣ್ಣನವರಿಗೆ ಅನೇಕ ಬಿರುದುಗಳು ಮತ್ತು ಪ್ರಶಸ್ತಿಗಳು ಲಭಿಸಿದವು. ಇದಕ್ಕೆಲ್ಲಾ ಕಾರಣ ಅವರ ಕಲಾಪ್ರೌಢಿಮೆ, ಕಲಾಕೌಶಲ್ಯ, ಬುದ್ಧಿಕೌಶಲ್ಯ. ಮೇಲೆ ತಿಳಿಸಿದಂತೆ ತಮ್ಮ ಕಂಪನಿಯಲ್ಲಿ ಅನೇಕ ಬದಲಾವಣೆಯನ್ನು ಮಾಡುವುದರ ಮೂಲಕ ಕಂಪನಿಯ ಅಭಿವೃದ್ಧಿಗೆ ಉಳಿವಿಗೆ ಕಾರಣರಾದರು.

ಕರ್ನಾಟಕದಲ್ಲಲ್ಲದೆ ಮದರಾಸು ಮತ್ತು ತಮಿಳುನಾಡಿನ ಅನೇಕ ಕೇಂದ್ರಗಳು ಆಂಧ್ರದ ಕಡೆಗಳಲ್ಲಿ ನಾಟಕಗಳನ್ನು ಪ್ರದರ್ಶಿಸಿ ಕನ್ನಡೇತರ ಪ್ರದೇಶಗಳಲ್ಲಿ ಕನ್ನಡಕ್ಕೆ ಪುರಸ್ಕಾರ ನೀಡುವಂತೆ ಮಾಡಿದ ಹಿರಿಮೆ ವೀರಣ್ಣನವರದು. ಇವರ ಈ ಸಾಧನೆಯನ್ನು ಕಂಡು ನಮ್ಮ ಕನ್ನಡ ಜನತೆ ಹಲವಾರು ರೀತಿಯ ಸನ್ಮಾನಗಳನ್ನು ನೀಡಿದರು.

ಗುಬ್ಬಿ ಕಂಪನಿ ಬೃಹತ್ ಕಂಪನಿಯಾಗಿ ಬೆಳೆಯಲು ಗುಬ್ಬಿ ವೀರಣ್ಣನವರ ವೈಯಕ್ತಿಕ ಪ್ರತಿಭೆಯೇ ಕಾರಣ. "ಗುಬ್ಬಿ ಕಂಪನಿಯ 'ವರ್ಸಟೈಲ್ ಕಮಿಡಿಯನ್' ಎಂದು ಕೆತ್ತಿಸಿದ ಬಂಗಾರದ ಪದಕವನ್ನು ಮೈಸೂರಿನ ಮಹಾರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರು ವೀರಣ್ಣನವರಿಗೆ ೧೯೨೩ರಲ್ಲಿ ನೀಡಿ ಗೌರವಿಸಿದರು."

ಬೆಂಗಳೂರಿನಲ್ಲಿ ಒಮ್ಮೆ ಕಂಪನಿಯು ಕ್ಯಾಂಪ್ ಮಾಡಿದ್ದಾಗ ಬೆಂಗಳೂರಿನ ಜನ ವೀರಣ್ಣನವರಿಗೆ 'ವಿನೋದ ರತ್ನಾಕರ ಪ್ರಶಸ್ತಿ'ಯನ್ನು ನೀಡಿ ಸನ್ಮಾನಿಸಿದರು. ಹೋದ ಹೋದ ಕಡೆಯಲ್ಲೆಲ್ಲಾ ಜನ ಅವರಿಗೆ ಪದಕಗಳನ್ನು ಪ್ರಶಸ್ತಿಗಳನ್ನು ನೀಡಿ ಗೌರವಿಸಲು ಪ್ರಾರಂಭಿಸಿದರು. ಖ್ಯಾತ ನಾಟಕಕಾರ 'ಕನ್ನಡದ ಪ್ರಹಸನ ಪಿತಾಮಹ'ರೆಂದೇ ಪ್ರಸಿದ್ಧರಾದ ಟಿ.ಪಿ.ಕೈಲಾಸಂ ಅವರು ತಾವು ಕಟ್ಟಿಕೊಂಡಿದ್ದ ಕೈ ಗಡಿಯಾರವನ್ನೇ ಬಹುಮಾನವಾಗಿ ಕೊಟ್ಟರಂತೆ.

ಉಡುಪಿಯಲ್ಲಿ ಕ್ಯಾಂಪ್ ಇದ್ದಾಗ ಉಡುಪಿಯ ಕಾಣೂರು ಮಠದ ಸ್ವಾಮಿಗಳು ವೀರಣ್ಣನವರಿಗೆ 'ರಸಿಕ ಶಿಖಾಮಣಿ' ಎನ್ನುವ ಪ್ರಶಸ್ತಿಯನ್ನು ಅವಮಾರು ಮಠದ ಸ್ವಾಮಿಗಳು 'ಹಾಸ್ಯಕಲಾ ಪ್ರವೀಣ' ಎನ್ನುವ ಪ್ರಶಸ್ತಿಯನ್ನು ನೀಡಿ ಗೌರವಿಸಿದರು.

ಕನ್ನಡ ರಂಗಭೂಮಿಯ ಇತಿಹಾಸದಲ್ಲಿಯೇ ಹಿಂದೆಂದೂ ಕಾಣದಷ್ಟು ಯಶಸ್ಸನ್ನು 'ಕುರುಕ್ಷೇತ್ರ' ನಾಟಕ ಗಳಿಸಿತು. ಈ ನಾಟಕಕ್ಕಾಗಿಯೇ ಮೈಸೂರಿನ ಮಹಾರಾಜರು ಉಡುಗೊರೆಗಳನ್ನು 'ತಾರಾ' ಎನ್ನುವ ಆನೆಮರಿಯನ್ನು ವೀರಣ್ಣನವರಿಗೆ

[illegible]

ನೀಡಿದರು. ಸಂಸ್ಥೆಯ ಕಲಾವಿದರಿಗೆ ತಮ್ಮ ನೆಚ್ಚಿನ ಯಜಮಾನರಿಗೆ ಒಂದು ಬೆಳ್ಳಿಯ ಮಂಟಪವನ್ನೂ, ಚಿನ್ನದ ಉಮಾಮಹೇಶ್ವರ, ಗಣಪತಿ ವಿಗ್ರಹಗಳನ್ನು ಅರ್ಪಿಸಿದರು. ಆ ಸಮಯದಲ್ಲಿ ಈ ಕಲಾರಾಧಕನಿಗೆ ಬಂದ ಉಡುಗೊರೆಗಳಿಗೆ ಲೆಕ್ಕವಿಲ್ಲ.

ಕರ್ನಾಟಕದಲ್ಲಿ ಎಲ್ಲಾ ಕಡೆಯೂ ಈ ನಾಟಕಕ್ಕೆ ಯಶಸ್ಸು ದೊರಕಿದುದನ್ನು ನೋಡಿದ ವಿರಣ್ಣನವರು ನೆರೆಯ ಆಂಧ್ರಕ್ಕೂ ದಾಳಿಯಿಟ್ಟರು. ಕರ್ನೂಲಿನಂತಹ ಸ್ಥಳಗಳು ಅಚ್ಚ ತೆಲುಗು ಮಾತನಾಡುವ ಪ್ರದೇಶಗಳಾದರೂ ಕನ್ನಡ ಸಂಭಾಷಣೆ ಅರ್ಥವಾಗದಿದ್ದರೂ ಜನ ತಂಡ ತಂಡವಾಗಿ ನಾಟಕ ನೋಡಲು ಬರುತ್ತಿದ್ದರು. ಆ ಜನ ಜಾತ್ರೆಯನ್ನು ನೋಡಿದ ಜನ ನಾಟಕ ಸಂಸ್ಥೆಯನ್ನು ವೀರಣ್ಣನವರ ಜಾತ್ರೆ ಎಂದೇ ಕರೆಯುತ್ತಿದ್ದರು.

ತೆಲುಗಿನಲ್ಲಿ ಭಾರತವನ್ನು ಬರೆದು 'ಅಭಿನಯ ವ್ಯಾಸ' ಎನ್ನುವ ಪ್ರಶಸ್ತಿಯನ್ನು ಪಡೆದು ಆನೆಯ ಮೇಲೆ ಮೆರವಣಿಗೆಯನ್ನು ಮಾಡಿಸಿಕೊಂಡಿದ್ದ 'ಶ್ರೀಪಾದ ಕೃಷ್ಣಮೂರ್ತಿ' ಎನ್ನುವ ಕವಿಗಳ ಅಧ್ಯಕ್ಷತೆಯಲ್ಲಿ ರಾಜ ಮಹೇಂದ್ರಿಯ ಜನ ವೀರಣ್ಣನವರಿಗೆ 'ಕರ್ನಾಟಕೇಂದ್ರ ನಾಟಕ ಸಾರ್ವಭೌಮ' ಎನ್ನುವ ಪ್ರಶಸ್ತಿಯನ್ನು ನೀಡಿ ಗೌರವಿಸಿದರು.

೧೯೪೨ರ ನವರಾತ್ರಿಯ ದರ್ಬಾರಿನಲ್ಲಿ ಮಹಾರಾಜರಾದ ಜಯಚಾಮ ರಾಜೇಂದ್ರ ಒಡೆಯರ್ ಬಹದ್ದೂರ್ ವೀರಣ್ಣನವರಿಗೆ 'ನಾಟಕರತ್ನ' ಎನ್ನುವ ಪ್ರಶಸ್ತಿಯನ್ನು ನೀಡಿದರು. ನಿಜವಾದ ಅರ್ಥದಲ್ಲಿ ವೀರಣ್ಣನವರು ನಾಟಕದ ರತ್ನವಾಗಿದ್ದರು. ಆಗಿನಿಂದ ವೀರಣ್ಣನವರ ಹೆಸರಿನ ಜೊತೆ ನಾಟಕರತ್ನ ಎನ್ನುವ ಬಿರುದು ಖಾಯಂ ಆಗಿ ಉಳಿದುಕೊಂಡಿತು.

- ೧೯೫೫ರಲ್ಲಿ ಬೆಂಗಳೂರಿನ ಮಹಾಜನತೆ 'ನಾಟಕ ಸಾರ್ವಭೌಮ' ಬಿರುದನ್ನಿತ್ತು ಸನ್ಮಾನಿಸಿತು.
- ೧೯೫೫ ಮಾರ್ಚ್ ತಿಂಗಳಲ್ಲಿ ಗೌರವಾನ್ವಿತ ಕಲಾವಿದನೆಂದು ಸ್ವರ್ಣಕಮಲವನ್ನು ಕೆತ್ತಿದ ಹರಿವಾಣವಿತ್ತು, ಕೇಂದ್ರ ಸಂಗೀತ ನಾಟಕ ಅಕಾಡೆಮಿಯು ಗೌರವಿಸಿತು. ಅಂದು ಭಾರತದ ರಾಷ್ಟ್ರಪತಿಯಾಗಿದ್ದ ಡಾ.ಬಾಬು ರಾಜೇಂದ್ರ ಪ್ರಸಾದ್ ಅವರು ಈ ಪ್ರಶಸ್ತಿ ನೀಡಿದರು.
- ೧೯೫೯ರಲ್ಲಿ ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿಯು ಗೌರವಿಸಿತು.

- ೧೯೭೦ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ನೀಡಿ ಗೌರವಿಸಿತು.
- ೧೯೭೨ರಲ್ಲಿ ಕೇಂದ್ರ ಸರ್ಕಾರದಿಂದ 'ಪದ್ಮಶ್ರೀ' ಲಭಿಸಿತು.

ಹೀಗೆ ವೀರಣ್ಣನವರು ಅಪಾರ ಜನಮನ್ನಣೆಯನ್ನು ಪಡೆದು ಅನೇಕ ಪ್ರಶಸ್ತಿ ಮತ್ತು ಬಿರುದುಗಳನ್ನು ಪಡೆದುಕೊಂಡಿದ್ದಾರೆ. ಒಂದು ವೇಳೆ ಕಂಪನಿಯಲ್ಲಿ ಹಣದ ತೊಂದರೆ ಬಂದಾಗ ಅವರು ತಮ್ಮ ಪತ್ನಿಯರ ಒಡವೆಗಳನ್ನು ಮಾರಿ ಮತ್ತು ತಮಗೆ ಜನ ಸಂತೋಷದಿಂದ ನೀಡಿದ ಚಿನ್ನದ ಪದಕಗಳನ್ನು ಮಾರಿ ಸಂಸ್ಥೆಯವರಿಗೆ ಊಟೋಪಚಾರ ಮಾಡುತ್ತಿದ್ದರು. ಅಲ್ಲದೆ ಕಲಾಭಿಮಾನಿಗಳನ್ನು ಆಶ್ರಯಿಸಿ ಸಾವಿರಾರು ರೂ.ಗಳ ಸಾಲ ತರುತ್ತಿದ್ದರು. ಆದರೆ ಅವರ ಶ್ರಮ ವ್ಯರ್ಥವಾಗುತ್ತಿರಲಿಲ್ಲ. ಜನರು ಅವರ ಸೇವೆಯನ್ನು ಗುರುತಿಸಿದರು. ಈ ಕಲಾವಿದನಿಗೆ ನಡೆದಷ್ಟು ಸನ್ಮಾನ, ಸಮಾರಂಭಗಳು, ನೀಡಿದ ಪ್ರಶಸ್ತಿಗಳು, ಪದಕಗಳ ಸಂಖ್ಯೆಯನ್ನು ಅದುವರೆಗೆ ಬೇರೆ ಯಾವ ಕಲಾವಿದನೂ ಕನಸಿನಲ್ಲಿಯೂ ಕಂಡಿರಲಿಲ್ಲ.

ಇಂತಹ ಗುಬ್ಬಿ ವೀರಣ್ಣನವರು ೧೮೮೪ರಲ್ಲಿ ಗುಬ್ಬಿ ಕಂಪನಿ ಪ್ರಾರಂಭವಾದರೂ ವೀರಣ್ಣನವರು ೧೯೧೭ರಲ್ಲಿ ಸಂಸ್ಥೆಯ ಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡು ಸುಮಾರು ೫೦ ವರ್ಷಗಳಷ್ಟು ದೀರ್ಘಕಾಲ ಅದನ್ನು ಉಳಿಸಿ ಬೆಳೆಸಿಕೊಂಡುಬಂದರು.

ಅಧ್ಯಾಯ – ೭

ಚಲನಚಿತ್ರ ರಂಗದಲ್ಲಿ ವೀರಣ್ಣನವರ ಕೊಡುಗೆ

ವೀರಣ್ಣನವರು ಹುಟ್ಟು ಸಾಹಸಿಗರು, ಭಾರೀ ಕನಸುಗಾರರು ಅಷ್ಟೇ ಅಲ್ಲ ವ್ಯಾವಹಾರಿಕ ಜ್ಞಾನವುಳ್ಳವರು. ಅತಿ ಚಿಕ್ಕ ವಯಸ್ಸಿನಲ್ಲಿಯೇ ನಾಟಕದ ಕಂಪನಿಯಲ್ಲಿ ನೌಕರರಾಗಿದ್ದಾಗಲೇ ಕಂಪನಿಯ ಒಡೆಯರಾಗುವ ಹಂಬಲವನ್ನು ಹೊತ್ತವರು. ಹಿಡಿದ ಛಲವನ್ನು ಸಾಧಿಸಿಯೇ ತೀರುವ, ಗುರಿಮುಟ್ಟುವ ತನಕ ಅವಿಶ್ರಾಂತವಾಗಿ ದುಡಿಯುವ ಸ್ವಭಾವ ಅವರದು ಏನಾದರೂ ಹೊಸತನ್ನು ಮಾಡಬೇಕೆನ್ನುವವರು. ಅದೇ ರೀತಿ ನಾಟಕ ರಂಗದಲ್ಲಿ ಅನೇಕ ಹೊಸತುಗಳನ್ನು ತಂದರು. ವೀರಣ್ಣನವರಲ್ಲಿದ್ದ ಈ ಎರಡೂ ಗುಣಗಳನ್ನು ಕಂಡುಕೊಂಡ ದೇವುಡು ನರಸಿಂಹ ಶಾಸ್ತ್ರಿಗಳು ಮತ್ತು ಶ್ರೀನಿವಾಸಮೂರ್ತಿಗಳು ವೀರಣ್ಣನವರನ್ನು ಚಲನಚಿತ್ರರಂಗಕ್ಕೆ ಹಚ್ಚಿದರು.

ಅವರು ಸಿನಿಮಾಕ್ಷೇತ್ರಕ್ಕೆ ಬರಬೇಕೆಂದವರೇ ಅಲ್ಲ. ಆದರೂ ಅವರು ಕನಸು ಕಾಣದ್ದು ನನಸಾಗಿ ಕನ್ನಡ ಚಿತ್ರರಂಗದ ಮೂಲ ಪುರುಷರಲ್ಲೊಬ್ಬರಾಗಿ ಮೆರೆಯಲು ಅವಕಾಶವಾದದು, ಅವರ ಅದೃಷ್ಟವೇ ಸರಿ. ಅದರಂತೆ 'ಕರ್ನಾಟಕ ಫಿಲಂ ಕಾರ್ಪೋರೇಷನ್' ಅಸ್ತಿತ್ವಕ್ಕೆ ಬಂತು. ಇದರ ಹಿನ್ನೆಲೆಯನ್ನು ಬಿ.ವಿ.ವೈಕುಂಠರಾಜು ಹೀಗೆ ಹೇಳಿದ್ದಾರೆ, "೧೯೩೦ರಲ್ಲಿ ವೀರಣ್ಣನವರು ತಮ್ಮ ಕಂಪನಿಯ ನಾಟಕಗಳನ್ನು ಜಾಹೀರಾತು ಮಾಡಲು ವಿನೂತನ ವಿಧಾನವನ್ನು ಅನುಸರಿಸಬೇಕೆಂದು ಯೋಚಿಸಿದರು. ಆಗ ತಾನೇ ಭಾರತದಲ್ಲಿ ಅಲ್ಲಿ ಇಲ್ಲಿ ಮೂಕಿ ಚಿತ್ರಗಳನ್ನು ತಯಾರಿಸುತ್ತಿದ್ದು ಚಲನಚಿತ್ರಗಳು ಜನರನ್ನು ಆಕರ್ಷಿಸಿದವು. ನಾಟಕಗಳ ಪ್ರಚಾರಕ್ಕೆ ಇದು ಒಳ್ಳೆಯ ವಿಧಾನವೆಂದು ಯೋಚಿಸಿದ ವೀರಣ್ಣನವರು ತಮ್ಮ ನಾಟಕಗಳ ಕೆಲವು ಭಾಗಗಳನ್ನು ಚಿತ್ರೀಕರಿಸಿ ಪ್ರಚಾರ ಮಾಡಿದರು. ಇಂತಹ ಕೆಲಸವನ್ನು ಮಾಡಿದವರಲ್ಲಿ ವೀರಣ್ಣನವರೇ ಮೊದಲಿಗರಿರಬೇಕು."[೧]

ಕರ್ನಾಟಕ ಫಿಲಂ ಕಾರ್ಪೋರೇಷನ್ ಒಂದು ಲಿಮಿಟೆಡ್ ಕಂಪನಿ ಇದಕ್ಕೆ ಬೇರೆ ಬೇರೆಯವರಿಂದ ಷೇರು ಹಣವನ್ನು ಕೊಡಿಸಲಾಗಿತ್ತು. ವೀರಣ್ಣನವರೇ ಆ ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟ್ರಾದರು ಮುಂದೆ ಚಿತ್ರಗಳನ್ನು ತೆಗೆಯಬೇಕೆಂಬ ಉದ್ದೇಶವಿತ್ತು. ಆಗ ಈಗಿನಂತೆ ಸ್ಟುಡಿಯೋಗಳಿರಲಿಲ್ಲ. ಮದರಾಸಿನಿಂದ ಸ್ಟುಡಿಯೋ

---

೧. ಬಿ.ವಿ. ವೈಕುಂಠರಾಜು, ನಾಟಕರತ್ನ ಗುಬ್ಬಿ ವೀರಣ್ಣ, ಸನಾತನ ಪ್ರಕಾಶನ ಮುದ್ರಣಾಲಯ, ಪು. ೪೭.

[illegible]

ಸಾಮಗ್ರಿಗಳನ್ನು ತರಿಸಿದ ಮೇಲೆ ಬೆಂಗಳೂರಿನ ಮಲ್ಲೇಶ್ವರದಲ್ಲಿ ಒಂದು ಬಂಗಲೆಯೊಂದನ್ನು ಬಾಡಿಗೆಗೆ ತೆಗೆದುಕೊಂಡು ಸ್ಟುಡಿಯೋ ಸ್ಥಾಪನೆ ಮಾಡಿದರು. "ಸ್ಟುಡಿಯೋ ಎಂದರೆ ಈಗಿನ ಕಾಲದಂತೆ ದೊಡ್ಡ ದೊಡ್ಡ ಬಿಲ್ಡಿಂಗ್ ಇರಲಿಲ್ಲ. ಕಬ್ಬಿಣದ ಪೈಪ್ ಹೂಳಿ ಅದರ ಮೇಲೆ ಪೈಪ್‌ಗಳನ್ನು ಫಿಟ್ ಮಾಡಿ ಡೇರೆ ಎಳೆಯುತ್ತಲಿದ್ದರು. ಬಿಸಿಲು ಬೇಕಾಗಿದ್ದಾಗ ಮೇಲೆ ಹೊದಿಸಲ್ಪಟ್ಟ ಬಟ್ಟೆಯನ್ನು ನೂಕಿಕೊಂಡು ಬಿಸಿಲನ್ನು ಉಪಯೋಗಿಸಿಕೊಳ್ಳುತ್ತಿದ್ದರು. ಕನ್ನಡಿಗಳನ್ನಿಟ್ಟುಕೊಂಡು ಬಿಸಿಲಿನ ಬೆಳಕನ್ನು ತಮಗೆ ಬೇಕಾದಂತೆ ಉಪಯೋಗಿಸಿಕೊಳ್ಳುತ್ತಲ್ಲಿದ್ದರು. ಅದರಂತೆ ನಾವು ಸಹ ಮಲ್ಲೇಶ್ವರ ಹೆಚ್.ವಿ.ನಂಜುಂಡಯ್ಯನವರ ಬಂಗಲೆಯನ್ನು ತಿಂಗಳಿಗೆ ೨೫೦ ರೂಪಾಯಿಗಳಂತೆ ಬಾಡಿಗೆಗೆ ತೆಗೆದುಕೊಂಡು ಬಂಗಲೆಯನ್ನು ತಿಂಗಳಿಗೆ ೨೫೦ ರೂಪಾಯಿಗಳಂತೆ ಬಾಡಿಗೆಗೆ ತೆಗೆದುಕೊಂಡು ರೂಮುಗಳಲ್ಲಿ ಫಿಲಂ ತೊಳೆಯುವುದಕ್ಕೆ ಹಾಲ್‌ನಲ್ಲಿ ಫಿಲಂ ಆರಿಸುವುದಕ್ಕೆ ಮತ್ತು ಕೆಲವು ರೂಂಗಳಲ್ಲಿ ಡಾರ್ಕ್ ರೂಮುಗಳನ್ನು ಮಾಡಿಕೊಂಡು ಕೆಲಸ ಮಾಡುತ್ತಿದ್ದರು."[೧]

"೧೯೩೧ರಲ್ಲಿ ವೀರಣ್ಣ, ದೇವುಡ, ಶ್ರೀನಿವಾಸಮೂರ್ತಿ ಮೊದಲಾದವರು ಸೇರಿಕೊಂಡು ಚಿತ್ರಗಳನ್ನು ತಯಾರಿಸುವುದಕ್ಕಾಗಿ (ಬಾಕಿ ಚಿತ್ರಗಳು ಆಗ ಬಂದಿರಲಿಲ್ಲ) ಕರ್ನಾಟಕ ಫಿಲ್ಮ ರೇಷನ್ ಸ್ಥಾಪಿಸಿದ ನಂತರ ಈ ಸಂಸ್ಥೆ ಮೂರು ಮೂಕಿ ಚಿತ್ರಗಳನ್ನು ತಯಾರಿಸಿದರು.

೧) ಸಾಂಗ್ ಆಫ್ ಲೈಫ್

೨) ಹರಿಮಾಯೆ

೩) ಹಿಸ ಲವ್ ಅಫೇರ್"

ಸಾಂಗಿ ಆಫ್ ಲೈಪ್:

ಇದು ದೇವುಡು ಅವರ 'ಕಳ್ಳರ ಕೂಟ' ನೀಳ್ಗತೆಯ ಆಧಾರವಾಗಿ ತಯಾರಾದ ಚಿತ್ರ. ಇದು ಪ್ರಕಟಿತ ಕನ್ನಡ ಕಥೆಯೊಂದರಆಧಾರವಾಗಿ ತಯಾರಾದ ಮೊಟ್ಟ ಮೊದಲ ಚಿತ್ರ ಎಂಬ ಹೆಗ್ಗಳಿಕೆಗೂ ಪಾತ್ರವಾಗುತ್ತದೆ. ಮೂಕಿ ಚಿತ್ರಗಳಲ್ಲಿ ಭಾಷೆಯ ಇಲ್ಲ. ಆದರೂ ಕನ್ನಡ ನಾಡಿನಲ್ಲಿ ತಯಾರಾದ ಚಿತ್ರ ಎನಿಸಿಕೊಳ್ಳುತ್ತದೆ. ಈ ಕಾರಣಕ್ಕಾಗಿಯೇ ಎಲ್ಲಾ ಮೂಕ ಚಿತ್ರಗಳಿಗೂ ಇಂಗ್ಲಿಷ್ ಭಾಷೆಯ ಹೆಸರಿಡುವುದು

---

೧. ಜಿ.ಎಚ್.ವೀರಣ್ಣ (ಗುಬ್ಬಿ ವೀರಣ್ಣ), ಕಲೆಯೇ ಕಾಯಕ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು, ಪು. ೮೬.

ವಾಡಿಕೆಯಾಗಿತ್ತು. ಈ ಚಿತ್ರದಲ್ಲಿ 'ಜಯಮ್ಮನವರಾಗಲಿ, ವೀರಣ್ಣನವರಾಗಲೀ ನಟಿಸಿಲ್ಲ ಎನ್ನುವುದು ಗಮನಾರ್ಹ.

ಹರಿಮಾಯೆ:

ಇದರಲ್ಲಿ ಜಯಮ್ಮನವರು ಎರಡನೆಯ ನಾಯಕಿಯಾಗಿ ನಟಿಸಿದರು. ಈ ಚಿತ್ರಕ್ಕೆ ವೈ.ವಿ.ರಾವ್ ಅವರು ನಿರ್ದೇಶಕರು ಇದು ಮಹಾಭಾರತದಲ್ಲಿ ಬರುವ ಶ್ಯಮಂತ ಕೋಪಾಖ್ಯಾನದ ಆಧಾರದಿಂದ ತಯಾರಾದ ಪೌರಾಣಿಕ ಚಿತ್ರ. ನಿರ್ದೇಶಕರ ಪತ್ನಿ ರಾಜಮ್ಮ ಸತ್ಯಭಾಮೆಯಾಗಿಯೂ, ಬಿ.ಜಯಮ್ಮನವರು ಜಾಂಬವತಿಯಾಗಿಯೂ ಅಭಿನಯಿಸಿದ್ದರು. ಶಿವಗಂಗೆ ಬೆಟ್ಟದ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಚಿತ್ರದ ಹೊರಾಂಗಣ ಚಿತ್ರೀಕರಣ ನಡೆಸಲಾಯಿತು.

ಹಿಸ್ ಲವ್ ಅಫೇರ್:

ಚಿತ್ರರಂಗದ ಅನುಭವ ಇರದಿದ್ದರಿಂದ ಹಾಗೂ ಇತರರು ಸರಿಯಾದ ಸಹಕಾರ ನೀಡದಿದ್ದುದರಿಂದ ವೀರಣ್ಣನವರು ತುಂಬಾ ಕಷ್ಟ ಪಡಬೇಕಾಯಿತು. ಹಣದ ದೃಷ್ಟಿಯಿಂದ ನಷ್ಟವಾದರೂ ವೀರಣ್ಣನವರಿಗೆ 'ಹಿಸ್ ಲವ್ ಅಫೇರ್' ಇನ್ನೊಂದು ರೀತಿಯಲ್ಲಿ ಲಾಭಮಾಡಿಕೊಟ್ಟಿತು. 'ಹಿಸ್.ಲವ್.ಅಪೇರ್' ಎಂದರೆ ಅವನ ಪ್ರೇಮ ಪ್ರಕರಣ ಎಂದರ್ಥ. ಈ ಚಿತ್ರ ತೆಗೆಯುವಾಗ ವೀರಣ್ಣನವರು ಒಂದು ಹೆಣ್ಣಿನ ಹೃದಯವನ್ನು ಗೆದ್ದರು. ಈ ಚಿತ್ರದಲ್ಲಿ ನಾಯಕಿ ಪಾತ್ರ ವಹಿಸುತ್ತಿದ್ದ ಜಯಮ್ಮನವರಿಗೂ ವೀರಣ್ಣನವರಿಗೂ ಪ್ರೇಮ ಬೆಳೆದು ಇಬ್ಬರು ವಿವಾಹವಾದರು.

ಆಗ ಇದ್ದ ಪರಿಸರದಲ್ಲಿ ಮತ್ತು ಪರಿಸ್ಥಿತಿಯಲ್ಲಿ ವೀರಣ್ಣನವರೂ ಈ ಮೂಕಿ ಚಿತ್ರಗಳನ್ನು ತೆಗೆಯಲು ಹೊರಟಿದ್ದೇ ಸಾಹಸ. ಅವರಿಗೆ ಈ ಚಿತ್ರಗಳ ನಿಷ್ಕರ್ಷದಿಂದಾಗಲಿ ಚಿತ್ರಗಳಲ್ಲಿ ಅಭಿನಯಿಸಿದ್ದರೆಂದಾಗಲಿ ದೊಡ್ಡ ಹೆಸರು ಬರಲಿಲ್ಲ. ಇದೊಂದು ಅನುಭವ ಮಾತ್ರ ಇದು ಒಳ್ಳೆಯ ಅನುಭವವಾಗಲಿಲ್ಲ. ಇದರಿಂದ ಅವರು ಆರ್ಥಿಕವಾಗಿ ಅನೇಕ ಕಷ್ಟ ನಷ್ಟಗಳನ್ನು ಎದುರಿಸಬೇಕಾಯಿತು. ಆದರೆ ಚಿತ್ರರಂಗದ ನಂಟನ್ನು ವೀರಣ್ಣನವರು ಕಳೆದುಕೊಳ್ಳಲಿಲ್ಲ.

"ಭಾರತದಲ್ಲಿ ಟಾಕೀಯುಗವು ಆರಂಭವಾದ ಮೂರು ವರ್ಷಗಳ ನಂತರ ಅಂದರೆ ೧೯೩೪ರಲ್ಲಿ ಎರಡು ಕನ್ನಡ ಚಿತ್ರಗಳು ತಯಾರಾದವು. ಮಾರನೆಯ ವರ್ಷವೇ ವೀರಣ್ಣನವರು ಕನ್ನಡದಲ್ಲಿ ಚಿತ್ರವೊಂದನ್ನು ತಯಾರಿಸಲು ಮುಂದಾದರು.

[illegible]

ಒಂದು ರೀತಿಯಲ್ಲಿ ಕಂಪನಿ ನಾಟಕಗಳನ್ನು ಪ್ರಚಾರ ಮಾಡಲು ಚಿತ್ರರಂಗವನ್ನು ಪ್ರಯತ್ನವನ್ನು ವೀರಣ್ಣನವರು ಮಾಡಿದರು."[೧]

ವೀರಣ್ಣನವರು ಒಟ್ಟು ಆರು ಚಿತ್ರಗಳನ್ನು ತಯಾರಿಸಿದ್ದಾರೆ.

೧.ಸದಾರಮೆ ೨. ಸುಭದ್ರ, ೩.ಹೇಮರೆಡ್ಡಿ ಮಲ್ಲಮ್ಮ, ೪. ಜೀವನನಾಟಕ,

೫. ಗುಣಸಾಗರಿ, ೬. ಬೇಡರ ಕಣ್ಣಪ್ಪ

ಸದಾರಮೆ:

ಇದು ವೀರಣ್ಣನವರು ಮೊಟ್ಟ ಮೊದಲಿಗೆ ತೆಗೆದ ಚಿತ್ರ ಇದು. ಗುಬ್ಬಿ ಕಂಪನಿಯ ಬಹುಜನಪ್ರಿಯ ನಾಟಕ ಅದರಲ್ಲೂ ವೀರಣ್ಣನವರ ಅಭಿನಯ ಬಹಳ ಪ್ರಖ್ಯಾತವಾಗಿತ್ತು. ಈ ಚಿತ್ರದ ಪಾತ್ರವರ್ಗದಲ್ಲಿ ಮುರಾರಾಚರ್, ಕೆ.ಅಶ್ವತ್ತಮ್ಮ, ಬಿ.ಜಯಮ್ಮ, ಜಿ.ಹೆಚ್.ವೀರಣ್ಣ, ಸುಂದರಮ್ಮ, ಅಣ್ಣಾಜಮ್ಮ ಮುಂತಾದವರಿದ್ದರು. ವೀರಣ್ಣನವರು ತಮ್ಮ ಮೊದಲ ವಾಕ್ ಚಿತ್ರವನ್ನು ಬೊಂಬಾಯಿಯಲ್ಲಿ ತೆಗೆದರು. ಈ ಬಗೆಗೆ ವೀರಣ್ಣನವರು ಮಾತುಗಳು ಇವು "ಸಾಗರದಲ್ಲಿ ಕ್ಯಾಂಪ್ ಮಾಡಿದಾಗ ಸದಾರಮೆ ನಾಟಕವನ್ನು ಚಿತ್ರ ತೆಗೆಯಲು ಕಂಟ್ರಾಕ್ಟ್ ಒಪ್ಪಿ ಜೂನ್ ತಿಂಗಳಲ್ಲಿ ಬೊಂಬಾಯಿಗೆ ಪ್ರಯಾಣ ಮಾಡಿದೆವು. ಕೊಯಮತ್ತೂರಿನ ಶಕುಂತಲಾ ಪಿಕ್ಚರ್ಸ್‌ನ ಷಣ್ಮುಖಶೆಟ್ಟಿಯಾರ್ ಅವರಿಗೂ ನನಗೂ ಸದಾರಮೆ ಚಿತ್ರ ತೆಗೆಯಲು ೪೦೦೦೦ರುಗಳಿಗೆ ಒಪ್ಪಂದವಾಗಿ ಹತ್ತು ಸಾವಿರ ರೂ.ಗಳ ಅಡ್ವಾನ್ಸ್ ತೆಗೆದುಕೊಂಡು ಸದಾರಮೆ ಚಿತ್ರ ತೆಗೆಯಲು ಪ್ರಾರಂಭಿಸಿದೆವು"[೨]

ಕನ್ನಡದಲ್ಲಿ ಕೆಲವೇ ಕೆಲವು ಚಿತ್ರಗಳು ಬಂದಿದ್ದಾಗ ಈ ಚಿತ್ರ ಚೆನ್ನಾಗಿ ಮನರಂಜನೆ ಕೊಟ್ಟಿತು. ವೀರಣ್ಣನವರ ಹಾಗೂ ಅಶ್ವತ್ಥಮ್ಮನವರ ಅಭಿನಯ ಚೆನ್ನಾಗಿ ಜನರಿಗೆ ಹಿಡಿಸಿತು. ಈ ಚಿತ್ರ ಚಲನಚಿತ್ರದಂತಿರದೆ ನಾಟಕದಂತೆಯೇ ಇತ್ತು. ಗುಬ್ಬಿ ಕಂಪನಿಯವರು ಚಿತ್ರ ತೆಗೆಯುವ ಹೊತ್ತಿಗೆ ಅವರ ಸದಾರಮೆ ನಾಟಕ ಬಹು ಜನಪ್ರಿಯವಾಗಿತ್ತು. ನಾಟಕವನ್ನು ಮೆಚ್ಚಿಕೊಂಡಿದ್ದ ಜನರು ಚಲನಚಿತ್ರವನ್ನು ಮೆಚ್ಚಿಕೊಂಡರು. ಆದರೆ ವೀರಣ್ಣನ ದೃಷ್ಟಿಯಲ್ಲಿ ಇದು ಒಂದು ಸಾಧನೆ.

---

೧. ಎಂ.ಎಸ್.ಬಂಗಾರಮ್ಮ, ನಟರತ್ನ, ಇಳಾ ಪ್ರಿಂಟರ್ಸ್, ಚಾಮರಾಜಪೇಟೆ, ಬೆಂಗಳೂರು, ಪು. ೧೦೫.

೨. ಮಹದೇವಯ್ಯ.ಟಿ.ಆರ್, ಗುಬ್ಬಿ ತಾಲ್ಲೂಕು ದರ್ಶನ, ೧೯೮೨ (ಐ.ಬಿ.ಹೆಚ್. ಪ್ರಕಾಶನ).

ಸುಭದ್ರ:

ಇದು ವೀರಣ್ಣನವರ ಎರಡನೆಯ ಚಿತ್ರ. ಈ ಚಿತ್ರವನ್ನು ವೀರಣ್ಣನವರು ಹಾಗೂ ವೆಂಕಣ್ಣಾಚಾರ್ ಸೇರಿ ತೆಗೆಯುವುದು ಎಂದು ಪ್ರಾರಂಭಿಸಿದರು. "ಆಗ ಖ್ಯಾತ ನಿರ್ದೇಶಕರೆನಿಸಿಕೊಂಡಿದ್ದ ಸಿ.ಪುಲ್ಲಯ್ಯನವರು ಚಿತ್ರವನ್ನು ನಿರ್ದೇಶಿಸಲು ಒಪ್ಪಿದರು. ಇದರಲ್ಲಿಯೂ ವೀರಣ್ಣನವರು, ಬಿ.ಜಯಮ್ಮ, ರಾಮಚಂದ್ರಶಾಸ್ತ್ರೀ, ರಾಘವೇಂದ್ರರಾವ್ ಮೊದಲಾದವರು ಪಾತ್ರ ವಹಿಸಿದರು."[೧] ಈ ಚಿತ್ರದಲ್ಲಿ ಹೆಚ್ಚು ಕಡಿಮೆ ನಾಟಕದಂತೆಯೇ ತೆರೆಯ ಮೇಲೆ ಮೂಡಿತು. ನಾಟಕದಲ್ಲಿದ್ದಂತೆಯೇ ಇಲ್ಲಿ ಹಾಡುಗಳು ಹೇರಳವಾಗಿದ್ದವು. ಚಿತ್ರವನ್ನು ಜನರು ಮೆಚ್ಚಿಕೊಂಡಿದ್ದರು. ಚಿತ್ರ ವೀರಣ್ಣನವರಿಗೆ ಒಳ್ಳೆಯ ಹೆಸರನ್ನೇ ತಂದುಕೊಟ್ಟಿತು.

ಜೀವನನಾಟಕ:

ಇದು ಸಾಮಾಜಿಕ ಚಿತ್ರ. ಇದರ ಮೂಲ ಕಥೆ ಚದುರಂಗರು ಬರೆದುಕೊಟ್ಟದ್ದು. ಇದರ ಹೆಸರನ್ನು ಸೂಚಿಸಿದವರು ಅವರೇ. ಮುಖ್ಯ ನಟರನ್ನು ಸೂಚಿಸಿದರೂ ಚದುರಂಗರೇ. ಯಾರಲ್ಲಿ ಏನೇ ಗುಣ ಶಕ್ತಿಯಿದ್ದರೆ ಅದನ್ನು ವೀರಣ್ಣನವರು ಗುರುತಿಸುತ್ತಿದ್ದರು, ಬಳಸಿಕೊಳ್ಳುತ್ತಿದ್ದರು. ಈ ಚಿತ್ರ ತೆಗೆಯುವಾಗಲೂ ಕಷ್ಟ ಅನುಭವಿಸಬೇಕಾಯಿತು. ಪ್ರಧಾನ ಪಾತ್ರದಲ್ಲಿದ್ದ ಶಾಂತಾ ಹುಬ್ಳೀಕರ್ ವೀರಣ್ಣನವರಿಗೆ ಸಾಕಷ್ಟು ಹಿಂಸೆ ಕೊಟ್ಟರು. ಕರಾರು ಮಾಡಿಕೊಂಡಿದ್ದಕ್ಕಿಂತ ಹೆಚ್ಚು ಹಣ ಸಂಪಾದಿಸಿದರು. ಇದಕ್ಕೆ ಕಾರಣ ಇತರರ ಮನಸ್ಸನ್ನು ವೀರಣ್ಣನವರು ನೋಯಿಸದೇ ಇದ್ದದ್ದು. ತಾಂತ್ರಿಕ ದೃಷ್ಟಿಯಿಂದ 'ಜೀವನ ನಾಟಕ' ಅದುವರೆಗೆ ತಯಾರಾದ ಚಿತ್ರಗಳಿಗಿಂತ ಉತ್ತಮ. ಈ ಚಿತ್ರದಲ್ಲಿ ಶಾಂತಾ ಹುಬ್ಳೀಕರ್, ಬಿ.ಜಯಮ್ಮ, ಜಿ.ಎಚ್.ವೀರಣ್ಣ, ಮೋಹನ್‌ಕುಮಾರಿ ಮೊದಲಾದವರು ಪಾತ್ರ ವಹಿಸಿದರು.

ಹೇಮರೆಡ್ಡಿ ಮಲ್ಲಮ್ಮ

ಇದು ಬಹು ಜನಪ್ರಿಯ ಭಕ್ತಿ ಪ್ರಧಾನ ಕನ್ನಡ ಚಿತ್ರಗಳಲ್ಲೊಂದು. ಇದನ್ನು ವೀರಣ್ಣನವರು ಕರ್ನಾಟಕ ಫಿಲಂಸ್ ಅವರೊಡನೆ ಸೇರಿಕೊಂಡು ತಂತ್ರ, ಅಭಿನಯ, ನಿರೂಪಣೆ ಇವುಗಳ ದೃಷ್ಟಿಯಿಂದ ಹೇಮರೆಡ್ಡಿ ಮಲ್ಲಮ್ಮ ಒಂದು ಒಳ್ಳೆಯ ಚಿತ್ರ.

೧. ಹೆಚ್.ಕೆ.ರಂಗನಾಥ್, ಲಕ್ಷ್ಮೀ ಮುದ್ರಣಾಲಯ, ಚಾಮರಾಜಪೇಟೆ, ಬೆಂಗಳೂರು.

ಕನ್ನಡ ಚಿತ್ರಗಳ ಬಗೆಗೆ ಬರೆಯುವಾಗ ಹೇಮರೆಡ್ಡಿ ಮಲ್ಲಮ್ಮ ಚಿತ್ರವನ್ನು ಗುರುತಿಸಲೇಬೇಕು. ಈ ಚಿತ್ರವನ್ನು ತೆಗೆದದ್ದು ಮದರಾಸಿನಲ್ಲಿ. ಈ ಚಿತ್ರ ಒಳ್ಳೆಯ ಹೆಸರಿನ ಜೊತೆಗೆ ಚೆನ್ನಾಗಿ ಹಣವನ್ನು ತಂದುಕೊಟ್ಟಿತು.

ಗುಣಸಾಗರಿ:

ವೀರಣ್ಣನವರಿಗೆ 'ಗುಣಸಾಗರಿ' ಕಥೆಯನ್ನು ತಮ್ಮ ತಾಯಿಯವರ ಜ್ಞಾಪಕಾರ್ಥವಾಗಿ ಚಿತ್ರಿಸಬೇಕೆಂಬ ಆಕಾಂಕ್ಷೆಯಾಗಿತ್ತು. ಆ ವೇಳೆಗೆ ಎಚ್.ಎಲ್.ಎನ್. ಸಿಂಹ ಅವರು ರಂಗಭೂಮಿ ಮತ್ತು ಚಿತ್ರರಂಗದಲ್ಲಿ ಹೆಸರು ಪಡೆದಿದ್ದರು. ವೀರಣ್ಣನವರು ತಮ್ಮ ಸಂಸ್ಥೆಗೆ ಅವರನ್ನು ಸೇರಿಸಿಕೊಂಡು 'ಗುಣಸಾಗರಿ' ಎನ್ನುವ ಜಾನಪದ ಕಥೆಯನ್ನು ತೆರೆಗೆ ತರಲು ನಿರ್ಧರಿಸಿದರು. ಸಿಂಹ ಅವರೇ ಚಿತ್ರದ ನಿರ್ದೇಶಕರು. ಈ ಚಿತ್ರ ವೀರಣ್ಣನವರಿಗೆ ಕೀರ್ತಿ, ಹಣ, ಎರಡನ್ನೂ ತಂದುಕೊಟ್ಟವು. ಈ ಚಿತ್ರದ ಮೂಲಕ ಪಂಡರೀಬಾಯಿ ಮತ್ತು ರಾಜ ಸುಲೋಚನಾ ಅವರು ಬೆಳಕಿಗೆ ಬಂದರು. ಇದನ್ನು ಸತ್ಯ ಶೋಧನೆ ಎನ್ನುವ ಹೆಸರಿನಲ್ಲಿ ತಮಿಳಿನಲ್ಲಿಯೂ ತಯಾರಿಸಿದರು. ಅದು ನಷ್ಟ ಅನುಭವಿಸಿತು.

ಬೇಡರ ಕಣ್ಣಪ್ಪ

ವೀರಣ್ಣನವರು ತೆಗೆದ ಕೊನೆಯ ಚಿತ್ರ ಇದು. ಹೊಸದೊಂದು ದಾಖಲೆಯನ್ನು ನಿರ್ಮಿಸಿದ ಚಿತ್ರ. ಈ ಚಿತ್ರವನ್ನು ಎಚ್.ಎಲ್.ಎನ್. ಸಿಂಹ ನಿರ್ದೇಶಿಸಿದರು. ಈ ಚಿತ್ರದ ಮೂಲಕವೇ ರಾಜ್‌ಕುಮಾರ್ ಅವರ ಮುಂಚಿನ ಹೆಸರು ಮುತ್ತುರಾಜ್ ಎಂದು ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದು ಆ ವೇಳೆಗೆ ಒಳ್ಳೆಯ ಹೆಸರನ್ನು ಸಂಪಾದಿಸಿದ್ದರು. ಕನ್ನಡ ಚಿತ್ರರಂಗದಲ್ಲಿ ಈ ಹೊತ್ತು ಹೆಸರು ಗಳಿಸಿರುವ ರಾಜಕುಮಾರ್, ಜಿ.ವಿ.ಅಯ್ಯರ್, ನರಸಿಂಹರಾಜು ಅವರುಗಳಿಗೆ ಪ್ರವೇಶಾವಕಾಶ ಇಲ್ಲೇ ದೊರೆತದ್ದು. ಈ ಭಕ್ತಿ ಪ್ರಧಾನ ಚಿತ್ರದಲ್ಲಿ ಸಾಮಾಜಿಕ ಸಮಸ್ಯೆಯೂ ಇದ್ದು ಒಂದು ಒಳ್ಳೆಯ ಚಿತ್ರವಾಗಿದೆ. ಚಿತ್ರದಲ್ಲಿನ ತಂತ್ರ ಅಭಿನಯಗಳು ಮೆಚ್ಚುಗೆ ಪಡೆದವು. ಒಟ್ಟಿನಲ್ಲಿ ಹೇಳುವುದಾದರೆ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಬೇಡರ ಕಣ್ಣಪ್ಪ ಒಂದು ಮೈಲಿಗಲ್ಲು.

೧೯೩೦ರಿಂದ ೧೯೫೪ರವರೆಗಿನ ಅವಧಿಯಲ್ಲಿ ವೀರಣ್ಣನವರು ಚಿತ್ರಗಳನ್ನು ತಯಾರಿಸಿದರು. ಈ ಅವಧಿ ಕನ್ನಡ ಚಿತ್ರರಂಗದ ದೃಷ್ಟಿಯಿಂದ ಬಹಳ

ಮುಖ್ಯವಾದುದು. ಕೈಸನ್ನೆ, ಕಣ್‌ಸನ್ನೆಗಳ ಭಾಷೆಯಾಗಿದ್ದ ಮೂಕಿ ಚಿತ್ರಗಳನ್ನು ಕನ್ನಡ ನಾಡಿನಲ್ಲಿಯೂ ತಯಾರಿಸಲು ಪ್ರಾರಂಭಿಸಿ, ಇಡೀ ಭಾರತದ ಗಮನ ಹರಿಯುವಂತೆ ಮಾಡಿದರು ವೀರಣ್ಣನವರು. ಅನಂತರ ಚಿತ್ರಗಳಲ್ಲಿ ಭಾಷೆ ಪ್ರವೇಶಿಸಿದಾಗ ಆ ಮಾಧ್ಯಮವನ್ನು ಅಳವಡಿಸಿದರು. ಅಷ್ಟು ಮಾತ್ರವಲ್ಲ ಬೇಡರ ಕಣ್ಣಪ್ಪ ತಾಂತ್ರಿಕವಾಗಿಯೂ ಎಲ್ಲರ ಗಮನ ಸೆಳೆದ ಚಿತ್ರ ವಸ್ತುವೊಂದು ತಾನಾಗಿ ಹರಿದುಕೊಂಡು ಬಂದು ಶಿವಲಿಂಗದ ಮೇಲೆ ಹರಡಿಕೊಳ್ಳುವುದು. ಅನಂತರ ತಾನಾಗಿ ಕಳಚಿಕೊಂಡು ಹೋಗುವುದು ಮೊದಲಾದ ಟ್ರಿಕ್‌ಷಾಟ್ಸ್ ಈ ಚಿತ್ರದಲ್ಲಿ ಅನೇಕವಿದ್ದವು.

ರಂಗಭೂಮಿಯಿಂದ ಚಿತ್ರರಂಗಕ್ಕೆ ಹೋಗಿ ಮತ್ತೆ ರಂಗಭೂಮಿಯ ಕಡೆ ತಿರುಗಿ ನೋಡುವ ಕಲಾವಿದರು ವಿರಳ. ಆದರೆ ವೀರಣ್ಣನವರು ಎರಡನ್ನು ಒಟ್ಟಿಗೆ ನಡೆಸಿಕೊಂಡು ಬಂದರು. ರಂಗಭೂಮಿಯಲ್ಲಿ ಪಡೆದ ಅನುಭವಗಳನ್ನು ಚಿತ್ರಗಳಿಗೂ, ಚಿತ್ರರಂಗದಿಂದ ಪಡೆದ ಅನುಭವಗಳನ್ನು ರಂಗಭೂಮಿಗೂ ಉಪಯೋಗಿಸಿಕೊಂಡರು.

ನಾಟಕ ಸಂಸ್ಥೆ ಮತ್ತು ಚಿತ್ರ ಸಂಸ್ಥೆಗಳೆರಡನ್ನೂ ಒಟ್ಟಿಗೆ ನಿರ್ವಹಿಸಿಕೊಂಡು ಹೋದ ಇವರ ವ್ಯವಸ್ಥಾಪನಾ ಸಾಮರ್ಥ್ಯವನ್ನು ನೆನಪಿಸಿಕೊಂಡರೆ ಆಶ್ಚರ್ಯವಾಗುತ್ತದೆ.

ಚಿತ್ರರಂಗಕ್ಕೆ ವೀರಣ್ಣನವರ ಕೊಡುಗೆ

ಗುಬ್ಬಿ ವೀರಣ್ಣನವರು ಸ್ವತಃ ನಟರು ಮತ್ತು ಅವರ ಕುಟುಂಬದವರನ್ನೆಲ್ಲಾ ಕಲಾವಿದರನ್ನಾಗಿ ತಯಾರು ಮಾಡಿದವರು. ಈ ನಿಟ್ಟಿನಲ್ಲಿ ಕನ್ನಡ ರಂಗಭೂಮಿಗೆ ಮತ್ತು ಚಿತ್ರರಂಗಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

೧) ಗುಬ್ಬಿ ಕಂಪನಿಯ ಕಲಾವಿದರಾಗಿದ್ದು ಚಿತ್ರರಂಗವನ್ನು ಪ್ರವೇಶಿಸಿದವರ ಸಂಖ್ಯೆ ಗಣನೀಯವಾಗಿದೆ. ರಾಜಕುಮಾರ್ ಅವರಂತಹ ಕಲಾವಿದರನ್ನು ಚಿತ್ರರಂಗಕ್ಕೆ ಕೊಡುಗೆಯಾಗಿತ್ತ ಗುಬ್ಬಿ ಕಂಪನಿ ಮತ್ತು ಮಾಲಿಕ ವೀರಣ್ಣನವರಿಗೆ ಕನ್ನಡ ಚಿತ್ರರಂಗವು ಎಷ್ಟೊಂದು ಕೃತಜ್ಞವಾಗಿರಬೇಕು. ಕನ್ನಡ ಚಿತ್ರರಂಗವನ್ನು ವೈವಿಧ್ಯಮಯಗೊಳಿಸಿದ, ಶ್ರೀಮಂತಗೊಳಿಸಿದ ಅನೇಕ ಕಲಾವಿದರು ಗುಬ್ಬಿ ಕಂಪನಿಯವರು. ಇಲ್ಲವೇ ಆ ಕಂಪನಿಯ ಮೂಲಕ ಹಾದುಹೋದವರಾಗಿದ್ದಾರೆ.

೨) ಎಂ.ವಿ.ಸುಬ್ಬನಾಯ್ಡು ಅವರು 'ಹಿಸ್ ಲವ್ ಅಫೇರ್' ಚಿತ್ರದಲ್ಲಿ ನಟಿಸಿದ ಕಂಪನಿ ಕಲಾವಿದರು. ಸ್ವಂತ ಕಂಪನಿಯನ್ನು ಕಟ್ಟುವ ಉದ್ದೇಶದಿಂದ ವೀರಣ್ಣನವರ ಅನುಮತಿಯನ್ನು ಪಡೆದೇ ಹೋದರು ಅನಂತರ ಅವರೇ ಚಿತ್ರಗಳನ್ನು ತಯಾರಿಸಿದರು. ಹಾಗೂ ಆ ಚಿತ್ರಗಳಲ್ಲಿ ನಟಿಸಿದರು.

೩) ಗುಬ್ಬಿ ಕಂಪನಿಯ ಹಿರಿಯ ನಟರಾದ ಸಿ.ಬಿ. ಮಲ್ಲಪ್ಪನವರು 'ಹೇಮರೆಡ್ಡಿ ಮಲ್ಲಮ್ಮ' 'ಪುರಂದರದಾಸರು' ಚಿತ್ರಗಳಲ್ಲಿ ನಟಿಸಿದ್ದಾರೆ. ಆಶಾಪಾಶ ನಾಟಕವನ್ನೇ 'ದೇವದಾಸಿ'ಯಾಗಿ ರಚಿಸಿದ ಕೆ.ಈರಣ್ಣಯ್ಯನವರು ಗುಬ್ಬಿ ಕಂಪನಿಯಲ್ಲಿಯೇ ತಮ್ಮ ನಾಟಕವನ್ನು ಪ್ರಯೋಗಿಸಿ ಯಶಸ್ವಿಯಾಗಿದ್ದರು. ಅನಂತರ ಅವರು 'ವಾಣಿ' ಚಿತ್ರವನ್ನು ನಿರ್ದೇಶಿಸಿದರು. ಮಳವಳ್ಳಿ ಸುಂದರಮ್ಮ, ಕೆ.ಅಶ್ವತ್ಥಮ್ಮ ಹೆಸರಾಂತ ಕಲಾವಿದರು. ಕೆಲವೇ ಕೆಲವು ಚಿತ್ರಗಳಲ್ಲಿ ನಟಿಸಿದ್ದರೂ ಆಗಿನ ಕಾಲಕ್ಕೆ ಜನಪ್ರಿಯರಾಗಿದ್ದರು.

೪) ಎಂ.ವಿ.ವಾಸುದೇವರಾವ್ ಅಖಿಲಭಾರತ ಮಟ್ಟದಲ್ಲಿ ಪ್ರಶಸ್ತಿ ಪಡೆದ ಕನ್ನಡ ನಟರು ಗುಬ್ಬಿ ಕಂಪನಿಯಲ್ಲಿ ಚಿಕ್ಕ ಹುಡುಗನಾಗಿದ್ದಾಗಲೇ ಸೇರಿಕೊಂಡವರು. ಸಣ್ಣ ವಯಸ್ಸಿನ ಹುಡುಗನನ್ನು ಕಂಪನಿಯವರೆಲ್ಲರೂ ಬೇಬಿ ಎಂದೇ ಕರೆಯುತ್ತಿದ್ದರು. ದೊಡ್ಡವರಾದ ಮೇಲೂ ಅವರನ್ನು ಅದೇ ಹೆಸರಿನಿಂದ ಬೇಬಿಗಳು ಎಂದೇ ಕರೆಯುತ್ತಾರೆ.

೫) ಜಿ.ವಿ.ಅಯ್ಯರ್ ಬಾಲಕೃಷ್ಣ, ನರಸಿಂಹರಾಜು ಮುಂತಾದವರು ಕನ್ನಡ ಚಿತ್ರರಂಗದ ಜನಪ್ರಿಯ ನಟರು. ಬಹುಮುಖ ಸೇವೆಯನ್ನು ಕನ್ನಡ ಚಿತ್ರರಂಗವು ಸದಾ ಸ್ಮರಿಸಿಕೊಳ್ಳುತ್ತದೆ. ಇವರೆಲ್ಲರೂ ಗುಬ್ಬಿ ಕಂಪನಿಯೆಂಬ ವಿಶ್ವವಿದ್ಯಾಯದಿಂದ ಪದವೀದರರಾದವರೇ.

೬) ರಾಜಕುಮಾರ್ ಅವರ ತಂದೆಯವರಾದ ಸಿಂಗನಲ್ಲೂರು ಪುಟ್ಟಸ್ವಾಮಯ್ಯ-ನವರು ರೌದ್ರ ಪತ್ರಗಳಿಗೆ ಹೆಸರಾದವರು.

೭) ಪ್ರಪ್ರಥಮ ಕನ್ನಡ ನಿರ್ದೇಶಕ ಹೆಚ್.ಎಲ್.ಎನ್. ಸಿಂಹ ಗುಬ್ಬಿ ಕಂಪನಿಯಲ್ಲಿ ಪಳಗಿದವರೆ. 'ಹಿಸ್ ಲವ್ ಅಫೇರ್'ದಲ್ಲಿ ನಟಿಸಿದ್ದೇ ಅಲ್ಲದೆ ಸಹ ನಿರ್ದೇಶಕರಾಗಿ ದುಡಿದು ಅನುಭವವನ್ನು ಗಳಿಸಕೊಂಡನು. ಮುಂದೆ

[illegible]

ವೀರಣ್ಣನವರು ತಯಾರಿಸಿದ ಬೇಡರ ಕಣ್ಣಪ್ಪ ಚಿತ್ರವನ್ನು ಮತ್ತು ಚಿತ್ರರಂಗವನ್ನು ಪ್ರವೇಶಿಸಿ ಇನ್ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ವೈವಿಧ್ಯತೆಯ ಪಾತ್ರಗಳಲ್ಲಿ ಅಭಿನಯಿಸಿ ಕನ್ನಡ ಚಿತ್ರರಂಗವನ್ನು ಶ್ರೀಮಂತಗೊಳಿಸಿದ್ದಾರೆ.

೮) ಕನ್ನಡ, ತೆಲುಗು, ತಮಿಳು ಚಿತ್ರಗಳಲ್ಲಿ ನಟಿಸಿ ಪ್ರಸಿದ್ಧರಾದ 'ಹೊನ್ನಪ್ಪ ಭಾಗವತರ್ ಕೂಡ ಗುಬ್ಬಿ ಕಂಪನಿಯಲ್ಲಿದ್ದರು. ಅವರ ಸಂಗೀತ ಸುಧೆಗೆ ಸೋತು ವೀರಣ್ಣನವರು ಅವರನ್ನು ಬಲವಂತವಾಗಿ ಕಂಪನಿಗೆ ಕೊಂಡೊಯ್ದರು. ಅದೇ ರೀತಿ ತಮ್ಮ ಚಿತ್ರಗಳಲ್ಲಿ ಅಭಿನಯಿಸುವಂತೆ ಮಾಡಿದರು.

೯) ಬಿ.ಆರ್.ಪಂತುಲು, ಡಿಕ್ಕಿಮಾಧವರಾವ್, ಎಂ.ಎನ್. ಮಾಧವರಾವ್ ಅವರೂ ಕೂಡ ಗುಬ್ಬಿ ಕಂಪನಿಯಿಂದ ಚಿತ್ರರಂಗವನ್ನು ಪ್ರವೇಶಿಸಿದವರೇ

೧೦) ಮುಸುರಿ ಕೃಷ್ಣಮೂರ್ತಿ, ಉದಯಕುಮರ್, ಹೆಚ್.ಪಿ.ಸರೋಜ ಮುಂತಾದ ಅನೇಕ ಮಂದಿ ಕನ್ನಡ ಚಿತ್ರರಂಗವನ್ನು ಬೆಳಗಿದವರು. ಗುಬ್ಬಿ ಕಂಪನಿಯ ಸಂಪರ್ಕವನ್ನು ಹೊಂದಿದವರಾಗಿದ್ದಾರೆ. ರಂಗಭೂಮಿ ಸಿನಿಮಾಗಳಲ್ಲಿ ಖ್ಯಾತರಾದ ಬಿ.ವಿ.ಕಾರಂತರೂ ಗುಬ್ಬಿ ಕಂಪನಿಯ ಕೊಡುಗೆಯೇ.

೧೧) ಈ ಎಲ್ಲಾ ಕಾರಣಕ್ಕಾಗಿ ಗುಬ್ಬಿ ಕಂಪನಿ ಅಥವಾ ವೀರಣ್ಣನವನರು ಕನ್ನಡ ಚಿತ್ರರಂಗಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ.

ಒಟ್ಟಿನಲ್ಲಿ ವೀರಣ್ಣನವರು ಏನೇ ಮಾಡಿದರೂ ನಾಟಕಕ್ಕೆ ಅನುಕೂಲವಾಗ-ಬೇಕೆಂದು ಮಾಡಿದವರು. ಹಾಗೆಯೇ ಚಲನಚಿತ್ರ ಮಾಧ್ಯಮವನ್ನು ಅದಕ್ಕಾಗಿ ಉಪಯೋಗಿಸಿ ಕೊಂಡರು. ಅನಂತರ ಕೆಲವು ಮೂಕ ಚಿತ್ರಗಳಿಂದ ಕಷ್ಟನಷ್ಟ ಅನುಭವಿಸಲು ಆ ಕ್ಷೇತ್ರದಲ್ಲಿ ಅನುಭವ ಇಲ್ಲದ್ದು ಕಾರಣ ಚಲನಚಿತ್ರಕ್ಕೂ ಅಭಿನಯವೇ ಮಾಧ್ಯಮವಾದ್ದರಿಂದ ಇಲ್ಲೂ ಏಕೆ ಒಂದಿಷ್ಟು ಕೆಲಸ ಮಾಡಬಾರದೆಂದು ಯೋಚಿಸಯೇ ಅವರು ಈ ಕ್ಷೇತ್ರದಲ್ಲಿ ಛಲದಿಂದ ಮುಂದುವರಿದು ಆರು ವಾಕ್ ಚಿತ್ರಗಳನ್ನು ತೆಗೆದರು. ಕೆಲವು ಸ್ವಂತ ಇನ್ನೂ ಕೆಲವು ಇತರರ ಸಹಕಾರದೊಡನೆ ತೆಗೆದರು. ಈ ಚಿತ್ರಗಳನ್ನು ತೆಗೆಯುವಾಗ ವೀರಣ್ಣನವರು ನಾನಾ ಬಗೆಯ ಕಷ್ಟಗಳನ್ನು

ಅನುಭವಿಸಿದರು. ಆದರೆ ಅವರು ಅಂದು ಈ ಚಿತ್ರಗಳನ್ನು ತೆಗೆಯದಿದ್ದರೆ ಕನ್ನಡ ಚಿತ್ರಪ್ರಪಂಚಕ್ಕೆ ಭದ್ರವಾದ ಅಡಿಪಾಯ ಇರುತ್ತಿರಲಿಲ್ಲ. ಅಥವಾ ಅದು ತಡವಾಗುತ್ತಿತ್ತು.

ವೀರಣ್ಣನವರಿಗೆ ನಾಟಕವೇ ಮುಖ್ಯವಾಗಿತ್ತು. ಅವರು ತಮ್ಮ ಸರ್ವಸ್ವವನ್ನು ನಾಟಕದ ಬೆಳೆವಣಿಗೆಗೆ ಮುಡಿಪಾಗಿಟ್ಟರು. ಚಲನಚಿತ್ರ ಕ್ಷೇತ್ರದಲ್ಲೂ ಕೆಲಸಮಾಡಿ ಕನ್ನಡ ಚಿತ್ರರಂಗಕ್ಕೆ ಒಳ್ಳೆಯ ಚಿತ್ರಗಳನ್ನು ಕೊಟ್ಟಿದ್ದಾರೆಂಬುದು ನಿರ್ವಿವಾದ ನಲವತ್ತು ವರ್ಷಗಳ ಹಿಂದಿನ ಪರಿಸ್ಥಿತಿಯಲ್ಲಿ ಪರಿಚಯವೇ ಇಲ್ಲದ ಕೆಲಸದಲ್ಲಿ ಹಾಗೂ ಸ್ಥಳಗಳಲ್ಲಿ ವೀರಣ್ಣ ನವರು ಚಿತ್ರಗಳನ್ನು ತೆಗೆದದ್ದು ಒಂದು ಮಹಾಸಾಹಸವೆ ಸರಿ.

ಅಧ್ಯಾಯ – ೮

ಕನ್ನಡ ರಂಗಭೂಮಿಯಲ್ಲಿ ವೀರಣ್ಣನವರ ಕುಟುಂಬ ಕಲಾವಿದರು

ನಾಟಕರತ್ನ ಡಾ.ಗುಬ್ಬಿ ವೀರಣ್ಣನವರ ಕುಟುಂಬ ದೊಡ್ಡ ಕುಟುಂಬ ವೀರಣ್ಣನವರು ಹುಟ್ಟು ನಟರು. ಅವರು ತಮ್ಮ ಕುಟುಂಬದವರನ್ನೆಲ್ಲಾ ಕಲಾವಿದರನ್ನಾಗಿ ತಯಾರು ಮಾಡಿದರು. ವೀರಣ್ಣನವರಿಂದ ಹಿಡಿದು ಅವರ ಮೊಮ್ಮಗ ಜಿ.ಎಸ್.ನಟರಾಜ್‌ರವರಿಗೆ ಮನೆಯವರೆಲ್ಲ ಒಂದಲ್ಲ ಒಂದು ರೀತಿ ನಾಟಕ ಮತ್ತು ಸಿನಿಮಾ ರಂಗಗಳಲ್ಲಿ ದುಡಿಯುತ್ತಿದ್ದಾರೆ. ಇಡೀ ಸಂಸಾರವೇ ಕಲಾವಿದರಾಗಿ ಚಿತ್ರರಂಗಕ್ಕೆ ತಮ್ಮನ್ನು ತಾವೇ ಅರ್ಪಿಸಿಕೊಂಡಿರುವ ನಿದರ್ಶನಗಳು ಬಹಳ ಕಡಿಮೆ. ಈ ಕುಟುಂಬದಲ್ಲಿ ಕಲಾವಿದರಾಗಿ ರಂಗಭೂಮಿಯ ಸೇವೆಸಲ್ಲಿಸಿಕೊಂಡು ಬಂದವರೇ ಹೆಚ್ಚು. ಇದಕ್ಕೆ ಕಾರಣ ವೀರಣ್ಣನವರ ದೂರದಷ್ಟಿ.

ಕಂಪನಿಯಲ್ಲಿ ಹಲವಾರು ಹೆಸರಾಂತ ನಟನಟಿಯರು ಇದ್ದರು. ಈ ನಟನಟಿಯರು ಕೆಲವು ಪರಿಸ್ಥಿತಿಯ ಒತ್ತಡದಿಂದಲೇ ಅಥವಾ ಅನಿವಾರ್ಯತೆ ಯಿಂದಾಗಿಯೇ ಬರುತ್ತಿರಲಿಲ್ಲ. ಈ ಸಮಯದಲ್ಲಿ ವೀರಣ್ಣನವರು ಕಷ್ಟಕ್ಕೆ ಸಿಲುಕುತ್ತಿದ್ದುಂಟು. ಅಂಥ ಪರಿಸ್ಥಿತಿಯನ್ನು ವೀರಣ್ಣನವರು ಅರ್ಥಮಾಡಿಕೊಂಡರು. ಇಂತಹ ಸಮಯದಲ್ಲಿ ನಾಟಕ ನಿಂತು ಹೋಗಬಾರದೆಂದು ಬೇರೊಬ್ಬ ನಟ ನಟಿಯರನ್ನು ತಯಾರು ಮಾಡುತ್ತಿದ್ದರು ಕೂಡ ಗುಬ್ಬಿ ಕಂಪನಿ ಎಂದು ನಿಲ್ಲದೆ ಸತತವಾಗಿ ಕೆಲಸ ಮಾಡಿಕೊಂಡು ಹೋಗಬೇಕೆಂದು ದೂರದೃಷ್ಟಿಯಿಂದ ನಾಟಕಗಳಲ್ಲಿ ಅಭಿನಯಿಸಲು ಹೆಂಡತಿ, ಮಗಳು, ಮಗ, ಅಳಿಯ, ಸೊಸೆ ಇತ್ಯಾದಿಯಾಗಿ ಹಲವರು ಬಂದರು. ಅಂದರೆ ಇವರುಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟರು ಎಂದಲ್ಲ.

ಒಂದು ಕಾಲಕ್ಕೆ ಯಾವುದೇ ಕಾರಣದಿಂದ ಹೊರಗಿನವರೆಲ್ಲರೂ ಹೋದರೂ ಕಂಪನಿ ಮಾತ್ರ ತನ್ನ ಕೆಲಸ ನಿಲ್ಲಿಸಬಾರದು ಎನ್ನುವ ಒಂದೇ ಧ್ಯೇಯದಿಂದ ಅವರು ಹಾಗೆ ಮಾಡಿದರು. ಅಂದ ಮಾತ್ರಕ್ಕೆ ಮನೆಯವರು ಕೇವಲ ಈ ಒಂದು ಉದ್ದೇಶ ದಿಂದಲೇ ಇದ್ದರು ಎಂದು ಅರ್ಥವಲ್ಲ. ಇವರೆಲ್ಲರೂ ಉತ್ತಮ ನಟನಟಿಯರೇ ಆಗಿದ್ದಾರೆ. ವೀರಣ್ಣನವರ ಈ ಮಾರ್ಗವನ್ನು ಒಂದೆರೆಡು ಕಂಪನಿಯವರು ಅನುಸರಿಸಿದರು. "ಉತ್ತಮ ಹಿಂದೂಸ್ತಾನದಲ್ಲಿ ಖ್ಯಾತ ಪೃಥ್ವಿರಾಜ್ ಕಪೂರ್ ಕೂಡ ತಮ್ಮ ಸಂಸಾರದಲ್ಲಿ ಹಲವರನ್ನು ತಮ್ಮ ಥಿಯೇಟರ್‌ನಲ್ಲಿ ಅಭಿನಯಿಸಲು ವ್ಯವಸ್ಥೆ

ಮಾಡಿಕೊಂಡಿದ್ದರು."[೧] ಆದರೆ ಆ ಯಾವ ಕಂಪನಿಯೂ ಗುಬ್ಬಿ ಕಂಪನಿಯ ರೀತಿ ನಿಲ್ಲಲಿಲ್ಲ.

ವೀರಣ್ಣನವರ ಕಂಪನಿ ಹಲವಾರು ವರ್ಷಗಳ ಕಾಲ ಉಳಿದು ಬೆಳೆಯಲು ಕಾರಣ ಅವರ ಕುಟುಂಬ ಕಲಾವಿದರು ಇವರನ್ನು ಕಲಾವಿದರನ್ನಾಗಿ ಮಾಡಲು ಪ್ರೋತ್ಸಾಹಿಸಿದವರು ವೀರಣ್ಣನವರೇ. ಇವರೆಲ್ಲರೂ ಒಂದು ರೀತಿ ಹುಟ್ಟು ಕಲಾವಿದರೇ ಇವರ ಕುಟುಂಬದಲ್ಲಿನ ಬಹುತೇಕ ಮಂದಿ ಹಲವಾರು ನಾಟಕಗಳೆಲ್ಲ ಅಭಿನಯಿಸಿ ಕನ್ನಡ ರಂಗಭೂಮಿಯ ಬೆಳವಣಿಗೆಗೆ ಕಾರಣರಾಗಿದ್ದಾರೆ. ವೀರಣ್ಣನವರಿಗೆ ನಾಲ್ಕು ಜನ ಪತ್ನಿಯರು. ಗಂಗಮ್ಮ, ಜಿ. ಸುಂದರಮ್ಮ, ಭದ್ರಮ್ಮ ಮತ್ತು ಬಿ.ಜಯಮ್ಮ. ಹಿರಿಯವರಾದ ಗಂಗಮ್ಮ ಮತ್ತು ಅವರ ಮಗ ಬಹಳ ಹಿಂದೆಯೇ ಮೃತರಾದರು. ಎರಡನೆಯವರಾದ ಸುಂದರಮ್ಮ ಮತ್ತು ಮಕ್ಕಳು ಸ್ವರ್ಣಮ್ಮ ಮತ್ತು ಶಿವಾನಂದ್ ಎಲ್ಲರೂ ವೃತ್ತಿರಂಗಭೂಮಿಯಲ್ಲಿಯೇ ಸೇವೆಸಲ್ಲಿಸಿದ್ದಾರೆ.

ಜಿ.ವಿ.ಸುಂದರಮ್ಮ:

ಸುಂದರಮ್ಮ ಗುಬ್ಬಿ ಕಂಪನಿಯ ಹಿರಿಯ ನಟಿ. ಇಲ್ಲಿ ಬಹಳ ವರ್ಷಕಾಲ ಇದ್ದು ಕೆಲಸ ಮಾಡಿದವರು. ಚಂದಣ್ಣನವರ ಕಾಲದಲ್ಲಿಯೇ ಗುಬ್ಬಿ ಕಂಪನಿ ಸೇರಿ ಕೆಲವು ವರ್ಷಗಳ ಅನಂತರ ವೀರಣ್ಣನವರ ಕೈ ಹಿಡಿದು ತಮ್ಮಿಂದ ಅಭಿನಯಿಸಲು ಸಾಧ್ಯವಾಗುವವರೆಗೂ ಅಭಿನಯಿಸಿದರು. ಇವರು 'ಸತ್ಯಹರಿಶ್ಚಂದ್ರ' ನಾಟಕದಲ್ಲಿ 'ಚಂದ್ರಮತಿ', 'ಕೃಷ್ಣಲೀಲಾ' ನಾಟಕದಲ್ಲಿ 'ಯಶೋಧ', ರಾಜಭಕ್ತಿಯಲ್ಲಿ 'ದೇವಾಂಗನೆ' ಕರ್ನಾಟಕ ಸಾಮ್ರಾಜ್ಯದಲ್ಲಿ ತೇಜಸ್ವಿನಿ ಇವರಿಗೆ ಹೆಸರು ತಂದ ಪಾತ್ರಗಳು. ಇವರು ಅಭಿನಯಿಸುತ್ತಿದ್ದ ಸಮಯದಲ್ಲಿ ನಾಟಕಗಳು ಸಂಗೀತಕ್ಕೆ ಪ್ರಥಮ ಸ್ಥಾನ ಇತ್ತು. ಅಭಿನಯಕ್ಕೆ ಸಂಗೀತ ಪೋಷಕವಾಗಿರಬೇಕು ಎಂದು ಬಹಳ ಹಿಂದೆಯೇ ಸುಂದರಮ್ಮ ತೋರಿಸಿಕೊಟ್ಟರು. ಇವರು ಯಾವುದೇ ಪಾತ್ರವಹಿಸಲಿ ಆ ಪಾತ್ರವನ್ನು ಅರ್ಥಮಾಡಿಕೊಂಡು ಪರಿಣಾಮಕಾರಿಯಾಗಿಸುತ್ತಿದ್ದರು."[೨]

---

೧. ಹೆಚ್.ಕೆ.ರಂಗನಾಥ್, ವೃತ್ತಿ ರಂಗ ದರ್ಶನ, ಲಕ್ಷ್ಮೀ ಮುದ್ರಣಾಲಯ, ಚಾಮರಾಜಪೇಟೆ, ಬೆಂಗಳೂರು, ಪು. ೨೭೦

೨. ಡಾ.ಸಿಂಧುವಳ್ಳಿ ಅನಂತಮೂರ್ತಿ, ಗುಬ್ಬಿ ಕಂಪನಿ, ಮೈ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು. ಪು. ೧೫೦.

ಇವರು ವಹಿಸುತ್ತಿದ್ದ ಪಾತ್ರಗಳಲ್ಲಿ ದೇವಾಂಗನೆ ಹಾಗೂ ಚಂದ್ರಮತಿ ಪಾತ್ರಗಳು ಪ್ರೇಕ್ಷಕರಿಗೆ ಬಹಳ ಮೆಚ್ಚುಗೆಯಾಗಿದ್ದವು. 'ರಾಜಭಕ್ತಿ'ಯಲ್ಲಿ ದೇವಾಂಗನೆಯ ಪಾತ್ರದಲ್ಲಿ ರೋಷ ಪ್ರಧಾನವಾದ ಅಭಿನಯ ಕಣ್ಣುಗಳನ್ನು ಕಳೆದುಕೊಂಡಾಗ ಅಭಿನಯಿಸುತ್ತಿದ್ದ ರೀತಿ ವೀರ ಹಾಗೂ ಶೋಕರಸಗಳನ್ನು ಪ್ರತಿಪಾದಿಸುತ್ತಿದ್ದ ರೀತಿ ಪರಿಣಾಮಕಾರಿಯಾಗಿ ಇರುತ್ತಿದ್ದುದರಿಂದ ಪ್ರೇಕ್ಷಕರು ಬಹಳವಾಗಿ ಮೆಚ್ಚುತ್ತಿದ್ದರು. ಚಂದ್ರಮತಿ ಪಾತ್ರದಲ್ಲಿ ಲೋಹಿತಾಶ್ವನ ದೇಹವನ್ನು ಕಂಡು ಆಕೆಯು ಮಾಡುತ್ತಿದ್ದ ಅಭಿನಯ ಎಂಥವರಿಗೂ ಕಣ್ಣೀರು ಬರದೆ ಇರುತ್ತಿರಲಿಲ್ಲ. ಒಮ್ಮೆ ವೀರಣ್ಣನವರೇ ಇವರ ಅಭಿನಯವನ್ನು ನೋಡಿ ಕಣ್ಣೀರಿಟ್ಟರು.

ಮಹತ್ವದ ಸಂಗತಿ ಎಂದರೆ ಇವರು ರಂಗಕ್ಕೆ ಬಂದ ಮೊದಲ 'ಸ್ತ್ರೀ'. ಗುಬ್ಬಿ ಕಂಪನಿಯ ಸರಿಯಾದ ತಳಪಾಯದ ಮೇಲೆ ನಿಲ್ಲುವುದಕ್ಕೆ ಅಲ್ಲದೆ ಬೆಳೆಯುವುದಕ್ಕೆ ಸಹಕಾರಿಯಾದ ಹಿರಿಯ ನಟಿ ಎಂದು ವೀರಣ್ಣನವರೇ ಒಂದೆಡೆ ಹೇಳಿದ್ದಾರೆ.

ಸ್ವರ್ಣಮ್ಮ

ವೀರಣ್ಣ ಸುಂದರಮ್ಮ ಅವರ ಮಗಳು ಸ್ವರ್ಣಮ್ಮ. ತಂದೆ ತಾಯಿ ಇಬ್ಬರು ಕಲಾ ಪ್ರವೀಣರು. ಮಗಳು ಕೂಡ ಅದೇ ಹಾದಿಯಲ್ಲಿ ನಡೆದರು. ಕಂಪನಿ ಮನೆಯಲ್ಲೇ ಓಡಾಡುತ್ತಿದ್ದ ಸ್ವರ್ಣಮ್ಮನಿಗೆ ಅಭಿನಯ ಅನಿವಾರ್ಯವಾಯಿತು. ಸುಮಾರು ೬-೭ನೇ ವಯಸ್ಸಿನಲ್ಲಿಯೇ 'ಧೃವ, ಪ್ರಹ್ಲಾದ, ಕೃಷ್ಣ' ಮೊದಲಾದ ಬಾಲಪಾತ್ರಗಳನ್ನು ಅಭಿನಯಿಸಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿದರು. ಸ್ವರ್ಣಮ್ಮ ರಂಗದ ಮೇಲೆ ಕಾಣಿಸಿಕೊಂಡುದೇ ನಟಭಯಂಕರ ಗಂಗಾಧರ ರಾಯರೊಡನೆ. ಸ್ವರ್ಣಮ್ಮನವರು ಬೆಳೆದಂತೆ ಅವರಿಗೆ ದೊಡ್ಡ ದೊಡ್ಡ ಪಾತ್ರಗಳು ಸಿಕ್ಕಿದವು. ಸಂಗೀತವನ್ನು ಚೆನ್ನಾಗಿ ಅಭ್ಯಾಸ ಮಾಡಿದರು. ರಾಧೆ, ಸುಭದ್ರ, ಉತ್ತರೆ, ದೇವಾಂಗನೆ, ರುಕ್ಮಿಣಿ, ಅಕ್ಕಮಹಾದೇವಿ, ಸದಾರಮೆ, ಶರ್ಮಿಷ್ಟೆ ಮೊದಲಾದ ಪಾತ್ರಗಳನ್ನು ವಹಿಸುತ್ತಾ ಬಂದರು. ಸ್ಪಷ್ಟ ಉಚ್ಚಾರಣೆ ಸಹಜಾಭಿನಯ ಸುಶ್ರಾವ್ಯ ಕಂಠ ಇವರಿಗೆ ರಂಗದಲ್ಲಿ ಒಳ್ಳೆಯ ಹೆಸರನ್ನೇ ತಂದವು. ಇವರ ಅಭಿನಯಕ್ಕೆ ಕಳಸವಿಟ್ಟ ಹಾಗೆ ತಮಗೆ ದೊರೆತ ಅಕ್ಕಮಹಾದೇವಿಯ ಪಾತ್ರವನ್ನು ಇವರು ತನ್ಮಯತೆಯಿಂದ ಅಭಿನಯಿಸಿದರು. ಈ ಪಾತ್ರಾಭಿನಯ ಇವರಿಗೆ ಸಮಾಧಾನವನ್ನು ತಂದುಕೊಟ್ಟಿತು. 'ಗೆಜ್ಜೆಪೂಜೆ, ದೇವರ ಮಕ್ಕಳು, ಶರಪಂಜರ, ಸಾಕ್ಷಾತ್ಕಾರ, ಸುಭದ್ರ ಕಲ್ಯಾಣ, ಮೊದಲಾದ ಚಿತ್ರಗಳನ್ನು ಸ್ವರ್ಣಮ್ಮ ಚೊಕ್ಕವಾಗಿ ಅಭಿನಯಿಸಿದ್ದಾರೆ.

ಜಿ.ವಿ.ಮಾಲತಮ್ಮ

ಇವರು ವೀರಣ್ಣ ಸುಂದರಮ್ಮನವರ ಮಗಳು, ಸ್ವರ್ಣಮ್ಮನವರ ತಂಗಿ, ಇವರು ೪೦ ವರ್ಷಗಳ ಹಿಂದೆಯೇ ಚಿಕ್ಕ ಚಿಕ್ಕ ಪಾತ್ರಗಳಲ್ಲಿ ರಂಗಮಂಚದ ಮೇಲೆ ಕಾಣಿಸಿ ಕೊಂಡರು. ವೈವಿಧ್ಯಮಯ ಪಾತ್ರಗಳನ್ನು ಇವರು ಚೆನ್ನಾಗಿ ಅಭಿನಯಿಸುತ್ತಿದ್ದರು. ಲವಲವಿಕೆಯ ಪಾತ್ರಗಳೆಂದರೆ ಅವರಿಗೆ ಬಹು ಇಷ್ಟ. "ಬಾಲ ಕೃಷ್ಣನ ಪಾತ್ರದ ಮೂಲಕ ರಂಗವನ್ನು ಪ್ರವೇಶಿಸಿದರು. ನಂತರ ಚಂಚಲಕುಮಾರಿ, ಸುಭದ್ರೆ, ಸತ್ಯಭಾಮ, ಪೂರ್ಣಿಮಾ, ದೇವಯಾನಿ, ರತ್ನಕುಮಾರಿ, ಶರ್ಮಿಷ್ಠೆ, ಸುನಂದ ಮುಂತಾದ ಪಾತ್ರಗಳನ್ನು ಅಭಿನಯಿಸಿದ್ದಾರೆ."[೧] ಲವಕುಶದಲ್ಲಿ ಸೀತೆಯಾಗಿ ಇವರು ಭಾವಪೂರ್ಣವಾಗಿ ಅಭಿನಯ ನೀಡಿದ್ದಾರೆ. ಸೋಜಿಗದ ಸಂಗತಿ ಎಂದರೆ ಕುಣಿಗಲ್ ಕ್ಯಾಂಪಿನಲ್ಲಿ ಇವರು ಗರ್ಭಿಣಿ ಸೀತೆಯ ಪಾತ್ರದಲ್ಲಿ ಕಾಡಿನಲ್ಲಿ ರೋದಿಸುತ್ತಿದ್ದ ಸಂದರ್ಭದಲ್ಲಿ ರಂಗಮಂದಿರದಲ್ಲಿದ್ದ ಒಬ್ಬ ಗರ್ಭಿಣಿ ಹೆಂಗಸು ಅಲ್ಲೇ ಅವಳಿಮಕ್ಕಳನ್ನು ಹಡೆದಳಂತೆ. ಇವರ ಪತಿ ಕೆ.ಎಸ್.ಬಸವರಾಜು ಉತ್ತಮ ನಟ ಪ್ರಮುಖ ಪಾತ್ರಗಳಾದ ರಾಮ, ದುರ್ಯೋಧನ, ಅಭಿಮನ್ಯು, ಶಂಕರ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದರು. ಇವರ ಮಕ್ಕಳಾದ 'ಜಯಶ್ರಿ' ಮತ್ತು 'ಪದ್ಮಶ್ರೀ'ಯವರು ಹವ್ಯಾಸಿ ರಂಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಮಾಲತಮ್ಮನವರು ವಿದ್ಯುತ್ ಆಘಾತಕ್ಕೆ ಬಲಿಯಾಗಿ ಎರಡು ಕಾಲುಗಳ ಮೂಳೆ ಮುರಿದು ವೃತ್ತಿರಂಗ ಸೇವೆಯಿಂದ ಅನಿವಾರ್ಯವಾಗಿ ನಿವೃತ್ತಿ ಹೊಂದಿದರು. ಆದರೂ ರಂಗದ ಹಿಂದೆ ಹವ್ಯಾಸಿ ರಂಗದಲ್ಲಿ ಸೇವೆ ಮುಂದುವರಿಸಿ ಕೊಂಡು ಹೋದರು.

ಶಿವಾನಂದ್

ಇವರು ವೀರಣ್ಣ ಸುಂದರಮ್ಮನವರ ಮಗ. ಬಾಲ್ಯದಲ್ಲಿ ಕೃಷ್ಣ, ಪ್ರಹ್ಲಾದ ಮೊದಲಾದ ಪಾತ್ರಗಳಲ್ಲಿ ಅಭಿನಯಿಸಿ ನಂತರ ಅಣ್ಣ ತಮ್ಮ ನಾಟಕದಲ್ಲಿ ನಕುಲ, ಮುಕುಲ ಪಾತ್ರಗಳನ್ನು ಸಾಹುಕಾರದಲ್ಲಿ ಸಾಹುಕಾರ ಧರ್ಮದಾಸ, ಕೃಷ್ಣರಾಯ, ಮರ್ವಾದೆ ಲಾಯರ್, ಕುಚೆಯ್ಯ ಪಾತ್ರಗಳಲ್ಲಿ ಅಭಿನಯಿಸಿದ್ದರು. "ನಂತರ ೧೯೫೮ರಲ್ಲಿ ಡೆಲ್ಲಿಯ ಏಷಿಯಾ ಥಿಯೇಟರ್ ಇನ್ಸಿಟೂಟ್ ಮಕ್ಕಳ ರಂಗಮಂದಿರದ ಬಗ್ಗೆ ತರಬೇತಿ ಪಡೆದು ೧೯೬೧ರಲ್ಲಿ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ

೧. ಭಾಸ್ಕರ್ ಸಿ.ಎಸ್. ತುಮಕೂರು ಜಿಲ್ಲಾ ದರ್ಶನ, ಚಂಪಕ ಪ್ರಿಂಟರ್ಸ್, ತುಮಕೂರು, ಪು. ೧೮೦.

ಪದವೀಧರನಾಗಿ ಬಂದು ಕಲಾ ಕುಂಚ ಹವ್ಯಾಸಿ ತಂಡವನ್ನು ಹಲವಾರು ವರ್ಷ ನಡೆಸಿಕೊಂಡು ಬಂದರು."[೧]

ಕುರುಡು ಕಾಂಚಾಣ, ಕೆಂಚ, ಚೋಮ, ಜೋಕುಮಾರಸ್ವಾಮಿ, ನಾಟಕದಲ್ಲಿ ಗೌಡ, ಸತ್ತವರ ನೆರಳು ನಾಟಕದಲ್ಲಿ ಅಳಪಡಿಶಿನ ಮೊದಲಾದ ಪಾತ್ರಗಳಲ್ಲಿ ಹೆಸರು ಮಾಡಿದರು. ಬೆಂಬಿಡದ ಭೂತ, ಭ್ರಮೆ, ಯಾರ ಸಾಕ್ಷಿ, ಸರ್ವೇಜನಾ ಸುಖಿನೋಭವಂತು, ತೆನಾಲಿರಾಮಕೃಷ್ಣ, ಹರಕೆಯಕುರಿ, ವ್ಯೂಹ, ರಣಧೀರ ಮೊದಲಾದ ನಾಟಕಗಳನ್ನು ನಿರ್ವಹಿಸಿದ್ದಾರೆ. ಚಲನಚಿತ್ರರಂಗದಲ್ಲೂ ನಟರಾಗಿ ಸೇವೆ ಸಲ್ಲಿಸಿದ್ದಾರೆ.

ವೀರಣ್ಣನವರ ಮೂರನೇ ಧರ್ಮಪತ್ನಿಯಾದ ಭದ್ರಮ್ಮನವರಿಗೆ ಐದು ಜನ ಮಕ್ಕಳು ಗಂಡು ಮಕ್ಕಳಾದ ಚನ್ನಬಸಪ್ಪ, ರಾಜಶೇಖರ ವೃತ್ತಿ ರಂಗದಲ್ಲಿ ಸೇವೆ ಸಲ್ಲಿಸಿದ್ದಾರೆ.

ಚನ್ನಬಸಪ್ಪ

ವೀರಣ್ಣನವರ ನಂತರ ಗುಬ್ಬಿ ನಾಟಕ ಮಂಡಲಿಯ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದು, ನಂತರ 'ಲವಕುಶ' ನಾಟಕದಲ್ಲಿ ರಾಮ, ಕಾಲಚಕ್ರದಲ್ಲಿ ಶಂಕರ, ಸಿದ್ಧಲಿಂಗೇಶ್ವರ ಸ್ವಾಮಿ ಮಹಾತ್ಮೆ ನಾಟಕದಲ್ಲಿ ಸಿದ್ಧಲಿಂಗೇಶ್ವರನಾಗಿ ಅಭಿನಯಿಸಿ ಹೆಸರು ಮಾಡಿದರು.

ವೀರಣ್ಣನವರ ನಂತರ ಗುಬ್ಬಿ ನಾಟಕ ಮಂಡಳಿಯನ್ನು ಎರಡು ದಶಕಗಳಿಗೂ ಹೆಚ್ಚು ಕಾಲ ನಡೆಸಿ ನಂತರ ಮಂಡಳಿಯನ್ನು ಮಗನಿಗೆ ವಹಿಸಿಕೊಟ್ಟರು. ರಂಗದ ಹಿನ್ನೆಲೆಯಲ್ಲಿ ಹೆಚ್ಚು ಕಾಲ ನಡೆಸಿ ರಂಗ ತಂತ್ರಗಳನ್ನು ಯಶಸ್ವಿಯಾಗಿ ಪ್ರಯೋಗಿಸಿದ್ದಾರೆ. ಹೇಮರೆಡ್ಡಿ ಮಲ್ಲಮ್ಮ ನಾಟಕದಲ್ಲಿ ರಂಗ ತಂತ್ರಗಳನ್ನು, ಲವ-ಕುಶ ನಾಟಕದಲ್ಲಿ ಪೂರ್ಣ ಪ್ರಮಾಣದ ಚಲಿಸುವ ರಂಗವನ್ನು ನಿರ್ಮಿಸಿದ ಯಶಸ್ಸು ಇವರದು ಇವರ ಸಿದ್ಧಲಿಂಗೇಶ್ವರ ಸ್ವಾಮಿಯ ಪಾತ್ರ ಅವಿಸ್ಮರಣೀಯವಾಗಿದ್ದು, ಕರ್ನಾಟಕದ ಆಶೀರ್ವಾದ ಮೆಚ್ಚುಗೆಯನ್ನು ಗಳಿಸಿಕೊಟ್ಟಿದೆ.

ರಾಜಶೇಖರ್

ವೀರಣ್ಣನವರ ಎರಡನೇ ಮಗ. ಸ್ವಲ್ಪ ತಡವಾಗಿ ರಂಗಭೂಮಿ ಪ್ರವೇಶಿಸಿದರು. ಶ್ರೀ ಸಿದ್ದಲಿಂಗೇಶ್ವರಸ್ವಾಮಿ ನಾಟಕದಲ್ಲಿ ಅರ್ಚಕನ ಪಾತ್ರವನ್ನು, ಮಾವನಮಗ

---

೧. ಬಿ.ವಿ.ವೈಕುಂಠರಾಜು, ಕನ್ನಡ ರಂಗಭೂಮಿ, ಸನಾತನ ಪ್ರಕಾಶನ ಮುದ್ರಾಲಯ, ಪು. ೪೦

ನಾಟಕದಲ್ಲಿ ಕವಿಯಾಗಿ ಅಭಿನಯಿಸಿದ್ದರು. ತುಮಕೂರಿನ ಪ್ರಶಾಂತ ಚಿತ್ರಮಂದಿರದ ವ್ಯವಸ್ಥಾಪಕರಾಗಿದ್ದುಕೊಂಡು ಆಗಾಗ್ಗೆ ಗುಬ್ಬಿ ನಾಟಕ ಮಂಡಳಿಯಲ್ಲಿ ಪಾತ್ರ ವಹಿಸುತ್ತಿದ್ದರು. ವೀರಣ್ಣನವರ ಶತಾಬ್ಧಿ ಸಮಾರಂಭದಲ್ಲಿ 'ಸದಾರಮೆ' ನಾಟಕದಲ್ಲಿ ಆದಿಮೂರ್ತಿ ಪಾತ್ರ ವಹಿಸಿ ಎಲ್ಲರ ಮೆಚ್ಚುಗೆ ಗಳಿಸಿದ್ದರು. ೧೯೯೧ರಲ್ಲಿ ನಿಧನರಾದರು.

ಶಿವರಾಜ್

ವೀರಣ್ಣನವರ ನಾಲ್ಕನೇ ಪುತ್ರ. ಬಿ.ಎ.ಪದವೀಧರನಾದ ನಂತರ ಗುಬ್ಬಿ ನಾಟಕ ಮಂಡಳಿಯಲ್ಲಿ ಅಣ್ಣತಮ್ಮ ನಾಟಕದಲ್ಲಿನ ಕುಲ, ಸಾಹುಕಾರದಲ್ಲಿ ಕೃಷ್ಣರಾಯ, ಮಾವನ ಮನೆ, ನಾಟಕದಲ್ಲಿ ನಿಂಬು ಪಾತ್ರದಲ್ಲಿ ಜನರನ್ನು ರಂಜಿಸಿದರು. ನಂತರ ಚಲನಚಿತ್ರರಂಗಕ್ಕೆ ಜೇನುಗೂಡು ಚಿತ್ರದ ಮೂಲಕ ಪಾದಾರ್ಪಣೆ ಮಾಡಿ ಅನೇಕ ಚಿತ್ರಗಳಲ್ಲಿ ಪಾತ್ರ ವಹಿಸಿಕೊಂಡರು.

ಜಯಮ್ಮ

ವೀರಣ್ಣನವರ ನಾಲ್ಕನೇ ಪತ್ನಿ ಬಿ.ಜಯಮ್ಮ ಇವರು ಕೇವಲ ಜೀವನ ಸಂಗಾತಿಯಾಗಿ ಮಾತ್ರವಲ್ಲದೇ ನಾಟಕದಲ್ಲಿಯೂ ಕೂಡ ವೀರಣ್ಣನವರ ಸಂಗಾತಿಯಾಗಿದ್ದರು. ಜಯಮ್ಮನವರನ್ನು ಮದುವೆಯಾದ ಬಗ್ಗೆ ವೀರಣ್ಣನವರು ಹೀಗೆ ಹೇಳುತ್ತಾರೆ. 'ಸದಾರಮೆ' ನಾಟಕದಲ್ಲಿ ಬಿ.ಜಯಮ್ಮ ಪಾತ್ರವನ್ನು ವಹಿಸುತ್ತಿದ್ದಾಗ ಆಕೆ ಬಗ್ಗೆ ನನ್ನ ಬಗ್ಗೆ ಜನಗಳಲ್ಲಿ ಊಹಾಪೋಹಗಳಿದ್ದವು. ಆಗ ಅವರನ್ನು ಕಂಪನಿಯಿಂದ ಕಳುಹಿಸಿಬಿಟ್ಟೆ. ನಂತರ ಕೆಲವು ಕಾರಣಾಂತರದಿಂದ ಕರೆಸಿಕೊಂಡೆನು. 'ಹಿಸ್ ಲವ್ ಅಫೇರ್' ಎಂಬ ಮೂಕ ಚಿತ್ರದಲ್ಲಿ ಪರಸ್ಪರ ಪ್ರೇಮ ಅಂಕುರಿಸಿ ಮನಸ್ಸು ಹೊಯ್ದಾಡುತ್ತಿತ್ತು. ಬ್ರಹ್ಮ ಸಂಕಲ್ಪ ಬಹುಗಟ್ಟಿಯಾಗಿದ್ದುದರಿಂದ ಬಿ.ಜಯಮ್ಮನೆಂಬ ನಟಿಯನ್ನು ಉಪಪತ್ನಿಯಾಗ ಮಾಡಿಕೊಂಡದ್ದಾಯಿತು. ದೈವೇಚ್ಛೆ".

ಜಯಮ್ಮ ಗುಬ್ಬಿ ಕಂಪನಿಯ ಪ್ರಖ್ಯಾತ ನಟಿ. ಇವರು ಗುಬ್ಬಿ ಕಂಪನಿಯನ್ನು ಸೇರುವ ಮೊದಲೇ ರಂಗಪ್ರವೇಶ ಮಾಡಿದ್ದರು. ವೀರಣ್ಣನವರ ಕಲಾಪತ್ನಿಯಾಗಿ ಸೇವೆ ಸಲ್ಲಿಸಿ ಬಿ.ಜಯಮ್ಮನವರು ತ್ರಿಭಾಷಾ ತಾರೆಯಾಗಿ ದಕ್ಷಿಣ ಭಾರತದಲ್ಲಿ ಮನೆಮಾತಾಗಿದ್ದರು. ಪ್ರಧಾನ ಸ್ತ್ರೀ ಪಾತ್ರಗಳಿಗೆ ಒಪ್ಪುವ ರೂಪು ಇವರಿಗೆ ಇದ್ದು, ಸಂಗೀತದಲ್ಲೂ ಪರಿಶ್ರಮ ಇದ್ದುದರಿಂದ ತಾವು ತೆಗೆದುಕೊಂಡ ಪಾತ್ರಗಳೆಲ್ಲವನ್ನು ಸಮರ್ಥ ರೀತಿಯಲ್ಲಿ ಅಭಿನಯಿಸಿದರು. ಒಬ್ಬ ನಟಿಯಲ್ಲಿ ಇರಬೇಕಾದ

ಗುಣಲಕ್ಷಣಗಳು ಇದ್ದವು. ಆದ್ದರಿಂದಲೇ ಇವರು ಉತ್ತಮ ನಟಿಯರ ಪಂಕ್ತಿಗೆ ಸೇರುತ್ತಾರೆ.

ಜಯಮ್ಮ ರಂಗದ ಮೇಲೆ ಕೀರ್ತಿ ಗಳಿಸಿದಂತೆ ಚಿತ್ರಗಳಲ್ಲಿ ಅಭಿನಯಿಸಿ ಖ್ಯಾತರಾಗಿದ್ದಾರೆ. ಸದಾರಮೆ ಗುಬ್ಬಿ ಕಂಪನಿಯ ಬಹು ಜನಪ್ರಿಯ ನಾಟಕ. ಜಯಮ್ಮನವರಿಗೆ ದೊರಕಿದ ಮೊದಲ ಪಾತ್ರವೇ ಸದಾರಮೆ. ಈ ಪಾತ್ರವನ್ನು ನಲವತ್ತೈದು ವಯಸ್ಸಿನವರೆಗೂ ನಿರ್ವಹಿಸಿದರು. ಜಯಮ್ಮನವರಿಗೆ ಬಹಳ ಸಮಾಧಾನವನ್ನು ನೀಡಿರುವ ಇನ್ನೊಂದು ಪಾತ್ರವೆಂದರೆ ಕಯಾದುವಿನದು. ಈ ಪಾತ್ರದಲ್ಲಿ ಉನ್ನತ ಮಟ್ಟದ ಅಭಿನಯ ನೀಡಿದರು. ಈ ಪಾತ್ರವನ್ನು ಅಭಿನಯಿಸುವಾಗ ಅವರಿಗೆ ಗೊತ್ತಿಲ್ಲದೆಯೇ ಕಣ್ಣಲ್ಲಿ ನೀರು ಬರುತ್ತಿತ್ತಂತೆ.

ಅದೇ ರೀತಿ ಜಯಮ್ಮನವರಿಗೆ ಇಷ್ಟವಾದ ಪಾತ್ರಗಳೆಂದರೆ 'ಗುಲೇಬಕಾವಲಿ ನಾಟಕದಲ್ಲಿ ಮೋಹಶಾಸನೆ, ಕುರುಕ್ಷೇತ್ರದಲ್ಲಿ ದ್ರೌಪದಿಯಾಗಿ, ಜೀವನ ನಾಟಕದಲ್ಲಿ ಮತ್ತು ಹೇಮರೆಡ್ಡಿ ಮಲ್ಲಮ್ಮ ಇದು ಅಭಿನಯ ಚಿತ್ರರಂಗದಲ್ಲಿ ಒಂದು ಮೈಲಿಗಲ್ಲು.

ಗುಬ್ಬಿ ಕಂಪನಿಯನ್ನು ಸೇರಿದ ಸ್ವಲ್ಪ ಸಮಯದಲ್ಲೇ ವೀರಣ್ಣನವರನ್ನು ಕೈ ಹಿಡಿದಿದ್ದರಿಂದ ಇವರ ಕಲಾಸೇವೆ ಸಂಪೂರ್ಣ ಗುಬ್ಬಿ ಕಂಪನಿಗೆ ಮೀಸಲಾಯಿತು. ಅಶಕ್ತ ಕಲಾವಿದರ ಕಲ್ಯಾಣ ಸಮಿತಿ ಮತ್ತು ರಂಗಭೂಮಿ ಹಿತಾಸಕ್ತಿ ಸಂಘದ ಅಧ್ಯಕ್ಷರಾಗಿ ತಮ್ಮ ಜೀವನದ ಕೊನೆಯವರೆಗೂ ಸೇವೆ ಸಲ್ಲಿಸಿದರು.

ಎಂ.ಆರ್. ಚನ್ನಪ್ಪ

ವೀರಣ್ಣನವರ ಸೋದರಳಿಯಂದಿರಾದ ಎಂ.ಆರ್.ಚನ್ನಬಸಪ್ಪನವರು, ಕಬೀರ್ ದಾಸನ ಪುತ್ರ ಕಮಾಲದ ಪಾತ್ರದ ಮೂಲಕ ರಂಗ ಪ್ರವೇಶ ಮಾಡಿದರು. ಇವರಿಗೆ ಅಭಿನಯಕ್ಕಿಂತ ರಂಗತಂತ್ರದಲ್ಲಿ ಹೆಚ್ಚು ಆಸಕ್ತಿ. ಚಲ್ ದುನಿಯಾ ನಾಟಕದಲ್ಲಿ ಮನೋಹರನ ಪಾತ್ರವನ್ನು ಯಶಸ್ವಿಯಾಗಿ ಅಭಿನಯಿಸಿದರು. ಕೃಷ್ಣಲೀಲಾ, ರಾಮಾಯಣ, ರಾಜಗೋಪಿಚಂದ್ ಮೊದಲಾದ ನಾಟಕಗಳಲ್ಲಿ ವ್ಯವಸ್ಥಾಪಕರಾಗಿಯೂ ರಂಗ ತಂತ್ರಗಳನ್ನು ಅಳವಡಿಸಿ ಹೆಸರು ಮಾಡಿದ್ದರು. ಗುಬ್ಬಿ ಕಂಪನಿಯ ವ್ಯವಸ್ಥಾಪಕರಾಗಿಯೂ ಸೇವೆ ಸಲ್ಲಿಸಿದ್ದರು. ಸುಮಾರು ೪೦-೪೫ ವರ್ಷಗಳ ಕಾಲ ಸೇವೆ ಸಲ್ಲಿಸಿದ ಕೀರ್ತಿ ಇವರದು.

ಪ್ರಭಾವತಿ

ವೀರಣ್ಣನವರ ಮಗ ಚನ್ನಬಸಪ್ಪನವರ ಎರಡನೇ ಪತ್ನಿ. ವೀರಣ್ಣನವರ ಸೊಸೆ. 'ಕೃಷ್ಣಲೀಲಾ ನಾಟಕದಲ್ಲಿ ಗೋಪಿಕಾಸ್ತ್ರೀಯಾಗಿ ಪ್ರವೇಶಿಸಿ ಕ್ರಮೇಣ ಸೀತೆ, ಮಲೆಯಾಳಿ ರಾಣಿ ಮೊದಲಾದ ಮುಖ್ಯ ಪಾತ್ರಗಳನ್ನು ಅಭಿನಯಿಸಿ ಜನಮೆಚ್ಚುಗೆ ಗಳಿಸಿದ್ದಾರೆ. ಮಗ ನಾಗೇಶ್ ಅನೇಕ ಸಾಮಾಜಿಕ ನಾಟಕಗಳಲ್ಲಿ ಮುಖ್ಯ ಪಾತ್ರಗಳನ್ನು ಅಭಿನಯಿಸಿ ನಾಟಕ ಮಂಡಳಿಯ ವ್ಯವಸ್ಥಾಪಕರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಇವರ ಇನ್ನಿಬ್ಬರು ಮಕ್ಕಳಾದ ಕುಮಾರ್ ಮತ್ತು ಸದಾಶಿವ ಅವರು ಸಾಹುಕಾರ್ ಗೋಮುಖವ್ಯಾಘ್ರ, ಸತ್ಯಕ್ಕೆ ಸಾವಿಲ್ಲ, ಮಾವನ ಮನೆ ಮೊದಲಾದ ನಾಟಕದಲ್ಲಿ ಪಾತ್ರ ವಹಿಸಿದ್ದಾರೆ.

ಇಂದಿರಾ ರಾಜಶೇಖರ್

ಇವರು ವೀರಣ್ಣನವರ ಸೊಸೆ. ರಾಜಶೇಖರ್‌ರವರ ಪತ್ನಿ. 'ಕೃಷ್ಣಲೀಲಾ' ಸಾಹುಕಾರ ಕಾಲಪುತ್ರ ದಶಾವತಾರ ಅಣ್ಣ ತಮ್ಮ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ಹೀಗೆ ವೀರಣ್ಣನವರ ಇಡೀ ಕುಟುಂಬವೇ ಕನ್ನಡ ರಂಗಭೂಮಿಯ ಅಭಿವೃದ್ಧಿಗೆ ತಮ್ಮ ಜೀವನವನ್ನು ಸಾಗಿಸುತ್ತಾ ಬಂದರು. ಹೀಗೆ ಕುಟುಂಬವನ್ನು ಕಲಾವಿದರ ಕುಟುಂಬವನ್ನಾಗಿ ವೀರಣ್ಣ ಮಾಡಿದರು. ವೀರಣ್ಣನವರ ಉದ್ದೇಶವೊಂದೇ ತಾವು ಸತ್ತರು ಕೂಡ ಗುಬ್ಬಿ ಕಂಪನಿ ನಿರಂತರವಾಗಿ ಮುಂದುವರೆಯಬೇಕೆಂದು. ವೀರಣ್ಣನವರು ಹೀಗೆ ಮಾಡಿದ ಪ್ರಯತ್ನ ಅದ್ವಿತೀಯವಾದದ್ದು. ಇಡೀ ಕುಟುಂಬವನ್ನು ಕಲಾವಿದರನ್ನಾಗಿ ಮಾಡಿದ ಕೀರ್ತಿ ವೀರಣ್ಣನವರಿಗೆ ಸಲ್ಲುತ್ತದೆ.

ಜನರು ವೀರಣ್ಣನವರೊಡನೆ ಸಂಭಾಷಣೆಯಲ್ಲಿ ತೊಡಗಿದಾಗ ಸಂದರ್ಭ ಬಂದಾಗಲೆಲ್ಲಾ ಅವರ ಮೆಚ್ಚುಗೆಯ ಮಾತುಗಳನ್ನಾಡಿದರೆ ಅವರು ಹೀಗೆ ಹೇಳುತ್ತಿದ್ದರು. "ನಾನೇನು ವಿದ್ಯಾವಂತನಲ್ಲ ಸ್ವಾಮಿ ಜನ ಒಳ್ಳೆಯವರು, ನನ್ನ ಸುತ್ತಮುತ್ತ ಇದ್ದವರು ಒಳ್ಳೆಯವರು ಚನ್ನಬಸವೇಶ್ವರ ಸ್ವಾಮಿ ನಡೆಸಿದ ನನ್ನದೇನೂ ಇಲ್ಲ" ಈ ಮಾತುಗಳು ಅವರ ವಿನಯವನ್ನು ತೋರಿಸುವುದೇ ಹೊರತು ಮತ್ತೇನೂ ಅಲ್ಲ. ವೀರಣ್ಣನವರೇ ಒಂದು ವಿಶ್ವವಿದ್ಯಾಲಯ. ಕಲಿಯುವವರಿಗೆ ಅಲ್ಲ ಕಲಿಯಬೇಕಾದುದು ಬೇಕಾದಷ್ಟಿದೆ ಎನ್ನುವುದು ಅವರ ಜೀವನ ಸಾಧನೆಗಳನ್ನು ನೋಡಿದವರಿಗೆ ಅರ್ಥಮಾಡಿಕೊಳ್ಳುವವರಿಗೆ ಗೊತ್ತಾಗುತ್ತದೆ.

ಅಧ್ಯಾಯ – ೯

ಸಮಾರೋಪ

ಈವರೆಗೆ ನಡೆಸಿದ ಅಧ್ಯಯನ ಸಂಪೂರ್ಣವಾಗಿ ರಂಗಭೂಮಿಯ ಹಿನ್ನೆಲೆಯಲ್ಲಿ ರೂಪುಗೊಳ್ಳುವುದರಿಂದ ಅದಕ್ಕಾಗಿ ಸೇವೆ ಸಲ್ಲಿಸಿದ ಗುಬ್ಬಿ ಕಂಪನಿ ಮತ್ತು ಗುಬ್ಬಿ ವೀರಣ್ಣನವರ ಸಮಗ್ರ ಜೀವನ ಇಲ್ಲಿ ಮೈತುಂಬಿಕೊಂಡಿದೆ ಎಂದು ನಿರ್ಣಯಿಸುವುದು ಕಷ್ಟಸಾಧ್ಯ.

ಇಲ್ಲಿ ಆಧುನಿಕ ಭಾರತೀಯ ರಂಗಭೂಮಿಯಿಂದ ಪ್ರಾರಂಭಿಕ ಸ್ಥಾಪನೆಯಾದ ನಾಟಕ ಮಂಡಳಿಗಳು, ಅವು ಯಾವ ರೀತಿ ಹೊಸ ಪ್ರಯೋಗವನ್ನು ಅಳವಡಿಸಿಕೊಂಡವು, ಇಂತಹ ನಾಟಕ ಮಂಡಳಿಗಳ ಮೇಲಿನ ಪ್ರಭಾವ ಮತ್ತು ಕರ್ನಾಟಕ ರಂಗಭೂಮಿಯ ಉದಯ, ಅಲ್ಲಿನ ನಾಟಕ ಕಂಪನಿಗಳನ್ನು ಕುರಿತು ಕೂಡ ಅಧ್ಯಯನ ಮಾಡಲಾಗಿದೆ.

ಹಾಗೂ ಗುಬ್ಬಿ ಕಂಪನಿಯ ಪ್ರಮುಖ ಸಾಧನೆಗಳನ್ನು ಇಲ್ಲಿ ಮನಗಾಣುತ್ತ ನಮ್ಮ ರಂಗಭೂಮಿ ಕ್ಷೇತ್ರಕ್ಕೆ ಮತ್ತು ಕನ್ನಡ ಚಿತ್ರರಂಗಕ್ಕೆ ಉನ್ನತವಾದ ಗುಬ್ಬಿ ವೀರಣ್ಣನವರ ಸಾಧನೆಯ ಬಹುಮುಖ್ಯ ಹಂತಗಳನ್ನು ವಿವರಿಸುತ್ತಾ ಗುಬ್ಬಿಯ ರಂಗಭೂಮಿ ಇತಿಹಾಸದಲ್ಲೇ ಪ್ರಸಿದ್ಧಿಗೆ ಕಾರಣವಾಗಿರುವುದನ್ನಲ್ಲದೆ ಅವರು ತಮ್ಮ ಇಡೀ ಕುಟುಂಬವನ್ನೇ ಕಲಾವಿದರನ್ನಾಗಿ ಮಾಡಿ ಅವರು ರಂಗಭೂಮಿಗೆ ಸೇವೆಸಲ್ಲಿಸಿರುವುದನ್ನು ಈ ಅಧ್ಯಯನದಲ್ಲಿ ಕಾಣಬಹುದು. ಇದನ್ನು ನೋಡಿದರೆ ಗುಬ್ಬಿಯೂ ಹಿಂದೆ ರಂಗಭೂಮಿಯ ಬೀಡಾಗಿತ್ತೆಂದು ತಿಳಿಯಬಹುದು.

ಗುಬ್ಬಿಯು ಬಹಳ ಹಿಂದಿನ ಕಾಲದಿಂದಲೂ ಕನ್ನಡ ರಂಗಭೂಮಿಗೆ ತನ್ನದೇ ಆದ ಪ್ರತ್ಯೇಕ ಕೊಡುಗೆಯನ್ನು ಸಲ್ಲಿಸುತ್ತಾ ಬಂದಿದೆ. ಕೆಲವು ಮಹಾನ್ ಕಲಾವಿದರಿಂದ ಅದು ಇಡೀ ರಂಗಭೂಮಿಯಲ್ಲಿ ಪ್ರತ್ಯೇಕ ಸ್ಥಾನವನ್ನು ಪಡೆದಿದೆ. ಅದು ವೀರಣ್ಣನವರಂತಹ ಮಹಾನ್ ನಟರಿಂದ ಕನ್ನಡ ರಂಗಭೂಮಿಯಲ್ಲಲ್ಲದೇ ಚಿತ್ರರಂಗದ ಸಾಧನೆಯಲ್ಲೂ ಉನ್ನತ ಶಿಖರವನ್ನು ಮುಟ್ಟಿದೆ. ಅಂದಿಗೂ ಇಂದಿಗೂ ಎಂದೆಂದಿಗೂ ಅದರ ಸ್ಥಾನವನ್ನು ಇಂತಹ ನಟರಿಂದ ಉಳಿಸಿಕೊಳ್ಳುತ್ತಾ ಬಂದಿದೆ.

ಒಟ್ಟಾರೆಯಾಗಿ ಈ ಅಧ್ಯಯನದ ಪ್ರಮುಖ ಅಂಶಗಳನ್ನು ಹೀಗೆ ಮಾಡಬಹುದು.

೧) ಆಧುನಿಕ ರಂಗಭೂಮಿಯು ಭಾರತದಲ್ಲಿ ಪಾಶ್ಚಾತ್ಯರ ಇಂಗ್ಲಿಷರ ಪ್ರಭಾವದಿಂದ ಹುಟ್ಟಿಕೊಂಡಿದ್ದು.

೨) ದಕ್ಷಿಣ ಭಾರತಾದ್ಯಂತ ಹರಡಿ ಕರ್ನಾಟಕದಲ್ಲಿ ಪ್ರಮುಖವಾಗಿ ಹುಟ್ಟಿಕೊಂಡಿತು.

೩) ದಕ್ಷಿಣ ಕರ್ನಾಟಕದಲ್ಲಿ 'ಗುಬ್ಬಿ ಶ್ರೀ ಚನ್ನಬಸವೇಶ್ವರ ಕೃಪಾ ಪೋಷಿತ ನಾಟಕ ಸಂಘ ಪ್ರಮುಖವಾಗಿ ಕನ್ನಡ ರಂಗಭೂಮಿಗೆ ಸೇವೆಯನ್ನು ಸಲ್ಲಿಸುತ್ತಾ ಬಂದಿದೆ.

೪) ಅದು ಗುಬ್ಬಿ ಕಂಪ್ನಿ ಎಂದು ಹೆಸರಾಗಿ ನಾಟಕರತ್ನ ಗುಬ್ಬಿ ವೀರಣ್ಣನವರಿಂದ ಈ ಕಂಪನಿ ಉನ್ನತ ಶಿಖರಕ್ಕೇರಿತು.

೫) ಗುಬ್ಬಿ ವೀರಣ್ಣನವರಂತಹ ಮಹಾನ್ ನಟರು ತಮ್ಮ ವೈಯಕ್ತಿಕ ತೊಂದರೆಯಿಂದ ನಾಟಕ ಕಂಪನಿಗೆ ಸೇರಿ ಅಂತರ ಪ್ರಾಂತೀಯ ಕೀರ್ತಿಯನ್ನು ಗಳಿಸಿ ತಮ್ಮ ಜೀವನವನ್ನೆಲ್ಲಾ ರಂಗಭೂಮಿಯ ಸೇವೆಯಲ್ಲಿಯೇ ಅವರು ಸವೆಸಿದ್ದಾರೆ.

೬) ಇಂದಿನ ಕನ್ನಡ ರಂಗಭೂಮಿಯ ಇತಿಹಾಸವನ್ನು ಒಂದು ರೀತಿಯಿಂದ ಅವರ ಜೀವನವೇ ಸಂಕೇತಿಸಿದೆ. ಆದ್ದರಿಂದ ಕನ್ನಡ ಆಧುನಿಕ ರಂಗಭೂಮಿಯ ಕಥೆ ಗುಬ್ಬಿ ಕಂಪನಿಯ ಹಾಗೂ ವೀರಣ್ಣನವರ ಕಥೆಯೇ ಆಗಿದೆ.

೭) ವೀರಣ್ಣನವರು ಅವರ ಕಾಲದ ನಾಟಕ ಕಂಪನಿಗಳಿಗೆ ಮತ್ತು ಮುಂದಿನ ನಾಟಕ ಕಂಪನಿಗಳಿಗೆ ಭದ್ರ ಬುನಾದಿಯನ್ನು ಹಾಕಿಕೊಟ್ಟರು. ನಾಟಕ ಕಂಪನಿಗಳಲ್ಲಿ ಹೊಸ ಹೊಸ ರೀತಿಯ ಪ್ರಯೋಗಗಳನ್ನು ಮೊಟ್ಟ ಮೊದಲಿಗೆ ತಂದವರು ವೀರಣ್ಣನವರು.

೮) ಗುಬ್ಬಿ ವೀರಣ್ಣನವರ ಕೊಡುಗೆ ಕೇವಲ ನಾಟಕ ರಂಗಕ್ಕೆ ಅಲ್ಲದೇ ಚಲನಚಿತ್ರ ರಂಗಕ್ಕೆ, ಶೈಕ್ಷಣಿಕ ಕ್ಷೇತ್ರಕ್ಕೂ ಕೂಡ ಸಲ್ಲಿಸಿದ ಸೇವೆ ಅಪಾರವಾದದ್ದು.

೯) ವೀರಣ್ಣನವರಿಗೆ ದೊರಕಿದ ಪ್ರಶಸ್ತಿ ಮತ್ತು ಬಿರುದು ಸನ್ಮಾನಗಳು ಕನ್ನಡ ರಂಗಭೂಮಿಯಲ್ಲೇ ಮತ್ಯಾವ ನಟನಿಗೂ ಇದುವರೆಗೂ ಸಿಕ್ಕಿಲ್ಲ.

೧೦) ವೀರಣ್ಣನವರು ತಾವು ಸತ್ತರೂ ಗುಬ್ಬಿ ಕಂಪನಿ ಚಿರಕಾಲ ಮುಂದುವರೆಯ-ಬೇಕೆಂದು ಇಡೀ ಕುಟುಂಬವನ್ನೇ ಕಲಾವಿದರ ಕುಟುಂಬವನ್ನಾಗಿ ಮಾಡಿದವರು. ಅದೇ ರೀತಿ ಇವರು ಕಲಾದೇವಿಗೆ ತಮ್ಮ ಸೇವೆಯನ್ನು ಸಲ್ಲಿಸುತ್ತಾ ಬಂದರು.

ವೀರಣ್ಣನವರು ನಾಟಕದ ರತ್ನವೇ ಆಗಿ ವಿನೋದ ರತ್ನಾಕರ ಎಂದೇ ಪ್ರಖ್ಯಾತರಾಗಿ ದಕ್ಷಿಣ ಭಾರತದಲ್ಲಿಯೇ ಹೆಸರುಗಳಿಸಿದ ಮಹಾನ್ ನಟ.

ಸದಾರಮೆಯ ಕಳ್ಳನ ಪಾತ್ರದ ಮೂಲಕ ಜನಪ್ರಿಯನಾದ ಈ ಕಲಾವಿದ 'ವರ್ಸಟೈಲ್ ಕಮೆಡಿಯನ್' ಎಂದು ಮಹಾರಾಜರಿಂದ ಬಿರುದು ಪಡೆದು ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರಗಳಲ್ಲಿ ಕನ್ನಡ ರಂಗಭೂಮಿ ಪತಾಕೆ ಹಾರಿಸಿ ದಿಗ್ವಿಜಯ ಸಾಧಿಸಿದ ನಟರತ್ನಾಕರ.

ಕಂಪನಿ ನಾಟಕಗಳ ಇತಿಹಾಸದಲ್ಲಿ ಗುಬ್ಬಿ ವೀರಣ್ಣನವರದು ಸುವರ್ಣಾಕ್ಷರದ ಯುಗ. ಗುಬ್ಬಿ ವೀರಣ್ಣನವರ ಟೂರಿಂಗ್ ಟಾಕೀಸ್ ಬೀಡು ಬಿಟ್ಟ ಕಡೆಗಳಲ್ಲಿ ಚಲನಚಿತ್ರ ಮಂದಿರಗಳೆಲ್ಲಾ ಖಾಲಿಯೋ ಖಾಲಿ. ಚಿತ್ರದಷ್ಟೇ ವೈಭವೋಪೇತವಾದ ಇವರ ನಾಟಕಗಳನ್ನು ನೋಡಲು ನೂಕು ನುಗ್ಗಲು ಸ್ಥಳ ಸಿಗುವುದೇ ಕಷ್ಟವಾಗುತ್ತಿತ್ತು. ಕಂಪನಿ ನಾಟಕಗಳ ಉಚ್ಛ್ರಾಯ ಕಾಲವನ್ನೇ ಅದು ಕೂಗಿ ಹೇಳುತ್ತದೆ.

ರಾಷ್ಟ್ರೀಯ ನಾಟಕ ಶಾಲೆ ನೀಡುವ ತರಬೇತಿಗಿಂತ ಹೆಚ್ಚಿನ ಪ್ರಾತ್ಯಕ್ಷಿತೆ ಗುಬ್ಬಿ ವೀರಣ್ಣನವರ ನಾಟಕ ಕಂಪನಿಯಿಂದ ಪಡೆದಿರುವುದಕ್ಕೆ ಸಾಕ್ಷಿಯಾಗಿ ಚಿತ್ರರಂಗದಲ್ಲಿ ಮೆರೆಯುತ್ತಿರುವ ಮಹಾನ್ ನಟರೆಲ್ಲರ ಮಾತೃ ಸಂಸ್ಥೆ ಗುಬ್ಬಿ ಕಂಪನಿಯೇ ಆಗಿತ್ತೆಂಬುದನ್ನು ಯಾರು ಮರೆಯುವಂತಿಲ್ಲ. ಇಂಥ ಬಹುಮುಖ ಪ್ರತಿಭೆಯ ನಟನ ಜೀವನ ಚರಿತ್ರೆಯ ಅಧ್ಯಯನ ಬಹಳ ಹೆಮ್ಮೆಯ ವಿಷಯ.

ಇಷ್ಟನ್ನು ನೋಡಿದರೆ ಸಾಹಿತ್ಯದ ಅಂತಿಮ ವಿಜಯವು ನಾಟಕದಲ್ಲಿದೆ ಎಂದು ಸನಾತನ ಭಾರತೀಯರ ನಂಬಿಕೆ. ಮಾನವನ ಬುದ್ಧಿಶಕ್ತಿ ಸೃಷ್ಟಿಸಿ ಅತ್ಯದ್ಭುತ ವೈಚಿತ್ರಗಳಲ್ಲಿ ನಾಟಕಕ್ಕೆ ಮೊದಲ ಸ್ಥಾನವೆಂದು ನಾಟಕಕಾರ 'ನಿಕಲೆ' ಹೇಳಿರುವ ಮಾತು.

"ನೀವು ದೇಗುಲಕ್ಕೆ ಹೋಗಲು ಸಾಧ್ಯವಾಗದಿದ್ದರೆ ಚಿಂತೆಯಿಲ್ಲ, ಆದರೆ ರಂಗಮಂದಿರಕ್ಕೆ ಭೇಟಿಕೊಡದೆ ಇರಬೇಡಿ" ಎಂದು ಹೇಳಿ ರಂಗಭೂಮಿಯ

ಮಹತ್ವವನ್ನು ಎತ್ತಿಹಿಡಿದ 'ಜಾರ್ಜ್ ಬರ್ನಾರ್ಡ್‌ಷಾ' ಅಭಿಪ್ರಾಯ ನಿಜಕ್ಕೂ ಸತ್ಯವಾಗಿದೆ. ರಂಗಭೂಮಿಯು ಜನತೆಯ ವಿಶ್ವವಿದ್ಯಾನಿಯವಾಗಿದೆ.

ಇಲ್ಲಿನ ವಿಷಾದನೀಯ ವಿಷಯವೆಂದರೆ ಗುಬ್ಬಿ ವೀರಣ್ಣನವರು ಇಷ್ಟೆಲ್ಲಾ ಸಾಧನೆಯನ್ನು ಮಾಡಿದ್ದು ಇಡೀ ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಗುಬ್ಬಿ ಕಂಪನಿ ತನ್ನ ನಾಟಕ ಪ್ರದರ್ಶನವನ್ನು ಎಂದಿಗೂ ನಿಲ್ಲಿಸದೇ ಅದು ಚಿರಕಾಲ ಮುಂದುವರೆಸಿಕೊಂಡು ಹೋಗಬೇಕೆಂಬ ಆಶಯದಿಂದ, ಆದರೆ ಇಂದು ಅವರ ಪೀಳಿಗೆಯವರು ಉತ್ತಮ ನಟರಾದರೂ ಕೂಡ ಅವರೂ ಈ ಕಂಪನಿಯ ಬಗ್ಗೆ ನಿರಾಸಕ್ತರಾಗಿದ್ದಾರೆ.

ವೀರಣ್ಣನವರ ನಿಧನದ ಸ್ವಲ್ಪ ವರ್ಷಗಳ ನಂತರವೇ ಈ ಕಂಪನಿ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿತು. ಕಾರಣ ಅವರ ಮಕ್ಕಳು, ಮೊಮ್ಮಕ್ಕಳು ಗುಬ್ಬಿ ಬಗ್ಗೆ ಯಾವುದೇ ಆಸಕ್ತಿಯನ್ನು ವಹಿಸದೇ ಬೇರೆ ಬೇರೆ ಊರಿಗೆ ಹೋಗಿ ನೆಲೆಸಿದರು. ಆದ್ದರಿಂದ ಈ ಕಡೆಗೆ ಸ್ವಲ್ಪವೂ ಆಸಕ್ತಿ ವಹಿಸಲಿಲ್ಲ.

ಬಿ.ಜಯಶ್ರೀಯಂತಹ ಮಹಾನ್ ನಟಿಯರು ಇಲ್ಲಿ ಜನಿಸಿದರೂ ಕೂಡ ಗುಬ್ಬಿಯಲ್ಲಿ ಒಂದೂ ನಾಟಕಗಳು ನಡೆಯದಿರುವುದು ಅತ್ಯಂತ ದುಃಖಕರ ಸಂಗತಿ. ಹಿಂದೆ ರಂಗಭೂಮಿಯ ಬೀಡಾಗಿದ್ದ ಗುಬ್ಬಿ ಇಂದು ಹುಡುಕಿದರೂ ಒಂದೂ ನಾಟಕದ ಪ್ರದರ್ಶನ ನಡೆಯುತ್ತಿಲ್ಲ. ಇದೇ ನಮ್ಮ ಗುಬ್ಬಿಯ ಸ್ಥಿತಿ. ಮತ್ತು ಗುಬ್ಬಿವೀರಣ್ಣನವರ ಮುಂದಿನ ಕನಸು ನನಸಾಗದೆ ಉಳಿದ ಅತ್ಯಂತ ಶೋಚನೀಯ ಸಂಗತಿ.

ಗ್ರಂಥಋಣ

೧. ರಂಗಭೂಮಿ, ಎನ್.ಎಸ್.ವೆಂಕಟರಾಮ್, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಎಂಜಿಸ್ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦ ೦೦೧

೨. 'ಕಲೆಯೇ ಕಾಯಕ', ಗುಬ್ಬಿವೀರಣ್ಣ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜ ಪೇಟೆ, ಬೆಂಗಳೂರು-೧೮.

೩. 'ಗುಬ್ಬಿ ಕಂಪನಿ', ಡಾ. ಸಿಂಧುವಳ್ಳಿ ಅನಂತಮೂರ್ತಿ, ಮೈ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು.

೪. 'ಕನ್ನಡ ರಂಗಭೂಮಿ', ಬಿ.ವಿ.ವೈಕುಂಠರಾಜು, ಸನಾತನ ಪ್ರಕಾಶನ ಮುದ್ರಣಾಲಯ, ೧೯೬೭.

೫. 'ವೃತ್ತಿ ರಂಗ ದರ್ಶನ', ಡಾ. ಎಚ್.ಕೆ. ರಂಗನಾಥ್, ಲಕ್ಷ್ಮೀ ಮುದ್ರಣಾಲಯ, ಚಾಮರಾಜಪೇಟೆ, ಬೆಂಗಳೂರು-೧೮.

೬. 'ಗುಬ್ಬಿ ತಾಲ್ಲೂಕ ದರ್ಶನ', ಟಿ.ಆರ್. ಮಹಾದೇವಯ್ಯ, ಐ.ಬಿ.ಹೆಚ್. ಪ್ರಕಾಶನ, ೧೯೮೨.

೭. 'ನಟರತ್ನ ಮುದ್ರಕರು', ಎಂ.ಎಸ್. ಬಂಗಾರಮ್ಮ, ಇಳಾ ಪ್ರಿಂಟರ್ಸ್, ಚಾಮರಾಜಪೇಟೆ, ಬೆಂಗಳೂರು-೧೮.

೮. 'ತುಮಕೂರು ಜಿಲ್ಲಾದರ್ಶನ', ಸಿ.ಎನ್.ಭಾಸ್ಕರಪ್ಪ, ಚಂಪಕ ಪ್ರಿಂಟರ್ಸ್, ತುಮಕೂರು, ೧೯೮೧.

೯. 'ಕರ್ನಾಟಕ ರಂಗಭೂಮಿ', ಎಚ್.ಕೆ.ರಂಗನಾಥ್, ವೆಂಕಟೇಶ್ವರ ಪ್ರಿಂಟರ್ಸ್, ಕೆಂಪೇಗೌಡ ನಗರ, ಬೆಂಗಳೂರು-೧೯.

೧೦. 'ಕಲ್ಪಸಿರಿ', ಡಾ. ಬಿ.ನಂಜುಂಡಸ್ವಾಮಿ, ಅ.ಭಾ.ಕ.ಸಾ.ಸ.ತು.ಸಂ. ೬೯ನೇ ಕನ್ನಡ ಸಾಹಿತ್ಯ ಪರಿಷತ್ತು.

೧೧. 'ಕನ್ನಡ ನಾಟಕ ಕಲೆ', ಎಚ್.ಕೆ. ರಂಗನಾಥ, ಲಕ್ಷ್ಮೀ ಮುದ್ರಣಾಲಯ, ಚಾಮರಾಜಪೇಟೆ, ಬೆಂಗಳೂರು-೧೮.

೧೨. 'ನಾಟಕ ರತ್ನ ಗುಬ್ಬಿ ವೀರಣ್ಣ', ಬಿ.ಎನ್.ಚನ್ನಪ್ಪ.

೧೩. 'ಗುಬ್ಬಿ ಒಂದು ಸಾಂಸ್ಕೃತಿಕ ದರ್ಶನ' ೧೯೯೧, ಸಿ.ನಾಗಭೂಷಣ.

೧೪. 'ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿ', ರಾಮಕೃಷ್ಣ ಮರಾಠೆ ಇಳಾ ಪ್ರಿಂಟರ್ಸ್, ಚಾಮರಾಜ ಪೇಟೆ, ಬೆಂಗಳೂರು, ೧೮

೧೫. 'ಅಮರಗೊಂಡ' ಕೆ.ಎಸ್.ಸಿದ್ಧಲಿಂಗಪ್ಪ, ಕ.ಸಾ.ಪ.ಗು. ತುಮಕೂರು ಜಿಲ್ಲೆ, ಸ್ಮರಣ ಸಂಚಿಕೆ.

೧೬. 'ಕನ್ನಡ ರಂಗಭೂಮಿಯ ಕಲಾವಿದರು', ಹ.ವೆಂ.ಸೀತಾರಾಮಯ್ಯ

೧೭. 'ಕುರುಕ್ಷೇತ್ರ', ಬಿ.ಪುಟ್ಟಸ್ವಾಮಯ್ಯ

೧೮. 'ಹಿರಿಯರು ಗೆಳೆಯರು', ವಿ.ಸೀತಾರಾಮಯ್ಯ, ಗೀತಾ ಬುಕ್ ಹೌಸ್, ಮೈಸೂರು, ೧೯೩೫.

೧೯. 'ರಂಗಪ್ರಪಂಚ', ಅಕ್ಷರ. ಕೆ.ವಿ. ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೨೦. ಕನ್ನಡ ರಂಗಭೂಮಿಯ ಶತಮಾನೋತ್ಸವ ಸ್ಮಾರಕ ಸಮಿತಿ ಗ್ರಂಥ.

೨೧. ಕನ್ನಡ ವಿಶ್ವಕೋಶ, ಸಂಪುಟ ೩.